ಸಂಕಲನ

೨

ಸಂಪಾದಕ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೨

೧೪ ಮಾರ್ಚ್ ೨೦೦೨

ಸಂಪಾದಕ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಬೆಳಗು, ಆನಂದಾಶ್ರಮ ರಸ್ತೆ

ಗದಗ - ೫೮೨ ೧೦೧

ಸಂಕಲನ : ಸಂಪುಟ ೧, ಸಂಚಿಕೆ ೨ : ೧೪ ಮಾರ್ಚ್ ೨೦೦೨

ಸಂಪಾದಕ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ. ಧಾರವಾಡ - ೫೮೦ ೦೦೪
ದೂರವಾಣಿ : ೦೮೩೬ – ೪೬೨೭೧೮
E-mail : spattanshetti@indiatimes.com

ಪ್ರಕಾಶನ : ಸಂಕಲನ ಪ್ರಕಾಶನ
ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧
ದೂರವಾಣಿ : ೦೮೩೭೨ – ೩೫೫೨೨

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕುಗಳು ಆಯಾ ಲೇಖಕರವು.

•

ವರ್ಷ ೨೦೦೨ ರಲ್ಲಿ ಪ್ರಕಟವಾಗುವ ಸಂಕಲನದ ಮೊದಲ ಸಂಪುಟದ
ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/-
ತ್ರೈವಾರ್ಷಿಕ ಚಂದಾ ರೂ. ೪೦೦/-
ಕೊಳ್ಳಬಯಸುವವರು ವರ್ಷದ ಆರೂ ಸಂಚಿಕೆಗಳ ಒಟ್ಟು ಮೊತ್ತ ಕೊಡುವುದು.
ಬಿಡಿ ಪ್ರತಿಗಳನ್ನು ಕೊಡಲಾಗುವುದಿಲ್ಲ.
ವಾರ್ಷಿಕ ಚಂದಾ ಹಣವನ್ನು ಸಂಪಾದಕರು ಅಥವಾ ಪ್ರಕಾಶಕರ ಕೈಯಲ್ಲಿ ನೇರವಾಗಿ ನಗದಾಗಿ ನೀಡಿ ರಸೀದಿ ಪಡೆಯುವುದು. ಅಥವಾ
ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ ಮಾತ್ರ
'**ಸಂಕಲನ ಪ್ರಕಾಶನ, ಗದಗ**' ಈ ಹೆಸರಿಗೆ ಪ್ರಕಾಶನದ ವಿಳಾಸಕ್ಕೆ ಕಳಿಸುವುದು.
ಚೆಕ್ ಸ್ವೀಕರಿಸಲಾಗುವುದಿಲ್ಲ.

•

SANKALANA : A Kannada Bimonthly Literary Magazine
Volume 1, Issue 2 : 14 March 2002

Subscription for six issues of year 2002 : Rs. 150/-
For three years : Rs. 400/-

Editor : **Dr. Siddhaling Pattanshetti**
Hoomane, Shridevinagar, Vidyagiri, DHARWAD - 580 004
Tel. : 0836 - 462718
E-mail : spattanshetti@indiatimes.com

Publication : **Sankalana Prakashana**
Belagu, Anandashram Road, GADAG - 582 101
Tel. : 08372 - 35522

DTP by BG graphics, Dharwad - 8

Printed by Prabhu Graphics, Near Tontadarya Mutt, Gadag - 582 101

ಸಂಪಾದಕರ ಮಾತು

ಸಂಕಲನ - ೧ ಕ್ಕೆ ಸಾಹಿತಿಗಳು, ಸಾಹಿತ್ಯಾಸಕ್ತ ಮಿತ್ರರು ತೋರಿದ ಅಪಾರ ಪ್ರೀತಿ, ಉತ್ಸಾಹ, ಸ್ವಾಗತಗಳು ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ನಾಡಿನ ತುಂಬ ಇನ್ನೂ ಅನೇಕ ಸಾಹಿತಿಗಳನ್ನು, ಊರುಗಳನ್ನು ಸಂಪರ್ಕಿಸಲು ನನಗೆ ಸಾಧ್ಯವಾಗಿಲ್ಲ. ಆದರೂ ಅಲ್ಲಲ್ಲಿ ಮಿತ್ರರು ತಾವಾಗಿ ಪರಸ್ಪರರನ್ನು ಸಂಪರ್ಕಿಸಿ, ಸಂಕಲಿಸಿ ನಮ್ಮ ಸಂಪರ್ಕ ಸೇತುವನ್ನು ಗಟ್ಟಿಗೊಳಿಸುತ್ತಿದ್ದಾರೆ. ಇದಕ್ಕಾಗಿ ಅವರೆಲ್ಲರಿಗೂ ಕೃತಜ್ಞತೆಗಳು.

ಮೊದಲ ಸಂಚಿಕೆಗಿಂತ **ಸಂಕಲನ - ೨** ರಲ್ಲಿ ಆವರಣ ಪುಟ ಸಹಿತ ಅದರ ಸ್ವರೂಪ, ವಿನ್ಯಾಸಗಳನ್ನು ಸಮಗ್ರವಾಗಿ ಬದಲಾಯಿಸುವ ಪ್ರಯತ್ನ ಮಾಡಿದ್ದೇನೆ. ಇದರಿಂದಾಗಿ ಹೆಚ್ಚು ಲೇಖನಗಳನ್ನು, ಲೇಖಕರನ್ನು ಒಳಗೊಳ್ಳಲು ಸಾಧ್ಯವಾಗಿದೆ. ಸುಧಾರಣೆಯ ಈ ಕ್ರಮ ಮುಂದೆಯೂ ಉಳಿಯುತ್ತದೆ.

ಈಗಾಗಲೇ ಹಲವಾರು ಸಫಲ ರಂಗ ಪ್ರಯೋಗಗಳನ್ನು ಕಂಡ ಒಂದು ಮಕ್ಕಳ ನಾಟಕವನ್ನು ಹಾಗೂ ಚರ್ಚೆಗೆ ಆಹ್ವಾನ ನೀಡುವ 'ಪರಂಪರೆ, ಸಾತತ್ಯ, ಸಾಹಿತ್ಯ ಚರಿತ್ರೆ ಇತ್ಯಾದಿ' ಎಂಬ ವಿಶಿಷ್ಟ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಇಂಥ ಅಭ್ಯಾಸಪೂರ್ಣ ಲೇಖನಗಳನ್ನು ಕುರಿತು ಕುತೂಹಲಿ ವಿಮರ್ಶಕರು ತಮ್ಮ ಸರ್ಜನಶೀಲ ಪ್ರತಿಕ್ರಿಯೆಗಳನ್ನು ನೀಡುವ ಮೂಲಕ ಈ ಚರ್ಚೆಯನ್ನು ಮುಂದುವರಿಸಬೇಕು.

ನಮ್ಮಲ್ಲಿ ಮನಸ್ಸುಗಳನ್ನು ಕಟ್ಟಬಲ್ಲ ಸರ್ಜನಾತ್ಮಕ ಬರೆಹಗಳ ಜೊತೆಗೆ ಸಮಾಂತರವಾಗಿ ಸೃಷ್ಟಿಶೀಲವಾದ ವಿಮರ್ಶೆಯೂ ಬೆಳೆಯಬೇಕಾಗಿದೆ. ವಿಮರ್ಶೆಯೆನ್ನುವುದು ಮೂಲತಃ ಸೃಷ್ಟಿಶೀಲ ಬರವಣಿಗೆಯ ತಳಪಾಯದ ಮೇಲೆ ನಿಂತ ಸುಂದರ ವಾಸಯೋಗ್ಯ ಭವನದಂತೆ ತಾನೇ ಪ್ರಧಾನವೆಂಬಂತೆ ಕಣ್ಣಿಗೆ ಕಾಣುವಂತಿದ್ದರೂ ಅದು ತನ್ನ ಅಡಿಭಾಗಗಳನ್ನು, ಬೇರುಗಳನ್ನು ಮರೆಯಬಾರದು, ಅಲಕ್ಷಿಸಬಾರದು. ಸೃಷ್ಟಿಶೀಲ ಬರವಣಿಗೆ ಇರದಿದ್ದರೆ ಅದನ್ನು ವಿಮರ್ಶಿಸುವ ಪ್ರಸಂಗವೇ ಬರದು. ವಿಮರ್ಶನ ಪ್ರಕ್ರಿಯೆಯಿಂದ ಸೃಷ್ಟಿಶೀಲ ಲೇಖನ ಇನ್ನಷ್ಟು ಪರಿಪುಷ್ಟವಾಗುವಂತೆ, ಹೊಸ ಬಗೆಯ ಲೇಖನ ಪ್ರಸ್ಫುರಿಸುವಂತೆ ವಿಮರ್ಶೆಯು ಪ್ರೇರೇಪಿಸಬೇಕಾಗುತ್ತದೆ. ಹಾಗೆ ಮಾಡುವಲ್ಲಿ ಯಶಸ್ವಿಯಾದರೆ ಆಗ ಅದು ತಾನೂ ಸಹಜವಾಗಿಯೇ ಸೃಷ್ಟಿಶೀಲತೆಯ ಪಟ್ಟವನ್ನು ಅಲಂಕರಿಸುತ್ತದೆ. ಅಂಥ ಪ್ರಾಮಾಣಿಕ, ಪ್ರಮಾಣಬದ್ಧ ಲೇಖನಗಳು ವೈಚಾರಿಕವಾಗಿಯೂ ಭಾವಪ್ರವಣತೆಯಿಂದ ಕೂಡಿರುವುದರಿಂದ ತಮ್ಮ ಬಿಳಲುಗಳನ್ನು ಮೂಲದ ಬೇರುಗಳನ್ನಾಗಿ ಪರಿವರ್ತಿಸಿಕೊಂಡು ಗಟ್ಟಿಯಾಗುತ್ತವೆ, ಬೆಳೆಯುತ್ತವೆ, ಪಸರಿಸುತ್ತವೆ. ಹೀಗೆ ಪರಸ್ಪರಾವಲಂಬಿಯಾದ ಇಂಥ ಚಿಂತನೆಯ ಲೇಖನಗಳು ಈಗ ಹೆಚ್ಚಬೇಕಾಗಿದೆ. **ಸಂಕಲನ** ಈ ಬಗೆಯ ಲೇಖನಗಳಿಗೆ ವೇದಿಕೆಯಾಗುತ್ತದೆ.

ಸಂಕಲನ - ೧ ರ ಬಗ್ಗೆ ಅನೇಕ ಮಿತ್ರರು ಪ್ರತಿಕ್ರಿಯಾತ್ಮಕ ವಿಮರ್ಶಾ ಧ್ವನಿಗಳನ್ನು ನೀಡಿದ್ದಾರೆ. ಸ್ಥಳಾಭಾವದಿಂದಾಗಿ ಈ ಸಲ ಅವುಗಳಲ್ಲಿ ಕೆಲವನ್ನು ಮಾತ್ರ ಪ್ರಕಟಿಸಲಾಗಿದೆ.

ಲೇಖಕ ಮಿತ್ರರು ತಮ್ಮ ಬರೆಹಗಳನ್ನು ನೇರವಾಗಿ ಸಂಪಾದಕರ ವಿಳಾಸಕ್ಕೆ ಕಳಿಸಲಿ. ಲೇಖನ ಪ್ರಕಟಣೆಗೆ ಅರ್ಹವಾಗಿದ್ದರೆ ಅವು ತಲುಪಿದ ೨೦ ದಿನಗಳ ಒಳಗಾಗಿ ಆ ಕುರಿತು ಸಂಪಾದಕೀಯ ನಿಲುವನ್ನು ತಿಳಿಸಲಾಗುತ್ತದೆ. ಯಾರೂ ಸ್ವ-ವಿಳಾಸದ ಅಂಚೆಚೀಟಿ ಇತ್ಯಾದಿ ಕಳಿಸುವ ಅಗತ್ಯವಿಲ್ಲ.

೨ ಮಾರ್ಚ್ ೨೦೦೨ — **ಸಿದ್ಧಲಿಂಗ ಪಟ್ಟಣಶೆಟ್ಟಿ**

ಹೊಮನೆ, ಧಾರವಾಡ - ೪

ಪರಿವಿಡಿ

ಸಂಪಾದಕರ ಮಾತು / ೩

೧. ಒಳಗಿನ ಕಳ್ಳ : ಕತೆ
ವಸುಮತಿ ಉಡುಪ / ೫ - ೯

೨. ಹರೆಯದಗ್ನಿಧಾಮ : ಕವಿತೆ - ೧
ದೊಡ್ಡರಂಗೇಗೌಡ / ೯

೩. ಫಂಡಮೆಂಟಲ್ ಡಿಸೀಸ್ : ಲಲಿತ ಪ್ರಬಂಧ
ಮ. ಸು. ಕೃಷ್ಣಮೂರ್ತಿ / ೧೦ - ೧೪

೪. ಖಾಸಗೀಕರಣ ಮತ್ತು ಅವಕಾಶವಂಚಿತರು : ವಿಚಾರ
ಮೂಡ್ನಾಕೂಡು ಚಿನ್ನಸ್ವಾಮಿ / ೧೫ - ೧೮

೫. ರತಿಗೀತಗಳು : ಕವಿತೆ - ೨, ೩, ೪
೧. ಗುಟ್ಟು, ೨. ಗಜಲ್, ೩. ಬಿಡಿ ದ್ವಿಪದಿಗಳು
ಭಾರತಿ ಮೋಹನ ಕೋಟಿ / ೧೮ - ೧೯

೬. ಬೆಳಕು ಹಂಚಿದ ಬಾಲಕ : ಮಕ್ಕಳ ನಾಟಕ
ಆರ್. ವಿ. ಭಂಡಾರಿ / ೨೦ - ೩೫

೭. ಸೇಡು : ಕವಿತೆ - ೫
ತುರುವೀಹಾಳ ಚಂದ್ರು / ೩೬

೮. ಪರಂಪರೆ, ಸಾತತ್ಯ, ಸಾಹಿತ್ಯ ಚರಿತ್ರೆ ಇತ್ಯಾದಿ : ವಿಶ್ಲೇಷಣೆ
ಸಿ. ಎನ್. ರಾಮಚಂದ್ರನ್ / ೩೭ - ೪೬

೯. ಕುವೆಂಪು ಕಾವ್ಯದಲ್ಲಿ ಸ್ತ್ರೀ : ಸಮೀಕ್ಷೆ
ಪದ್ಮಾ ಶಿವರುದ್ರಪ್ಪ / ೪೭ - ೫೨

೧೦. ಗರುಡ ಸದಾಶಿವರಾಯರ 'ಶ್ರೀರಾಮಪಾದುಕಾಪಟ್ಟಾಭಿಷೇಕ' : ಕಂಪನಿ ನಾಟಕ
ಬಸವರಾಜ ಜಗಜಂಪಿ / ೫೩ - ೫೫

೧೧. ಎಸ್. ಎಲ್. ಭೈರಪ್ಪನವರ 'ಭಿತ್ತಿ'
ವಿಹಂಗಮ ದೃಷ್ಟಿ - ೧ : **ಶ್ಯಾಮಸುಂದರ ಬಿದರಕುಂದಿ** / ೫೬ - ೫೮
ವಿಹಂಗಮ ದೃಷ್ಟಿ - ೨ : **ಶಾಂತಾ ಇಮ್ರಾಪುರ** / ೫೮ - ೬೪

೧೨. ಅಗ್ನಿಕಾಂಡ : ಕವಿತೆ - ೬
ಜಗದೀಶ ಮಂಗಳೂರಮಠ / ೬೫

೧೩. ಯು. ಆರ್. ಅನಂತಮೂರ್ತಿಯವರ 'ದಿವ್ಯ' : ಆಲೋಚನೆ
ಮಾಧವ ಕುಲಕರ್ಣಿ / ೬೬ - ೭೪

೧೪. ಗೊರೂರರ ಸಾಹಿತ್ಯದಲ್ಲಿ ಸಾಮಾಜಿಕ ಸಂಘರ್ಷ : ಪರಿಚಯ
ಜಯದೇವಪ್ಪ ಜೈನಕೇರಿ / ೭೫ - ೭೮

'ಸಂಕಲನ - ೧' : ಅನಿಸಿಕೆ, ಅಭಿಪ್ರಾಯ, ಪ್ರತಿಕ್ರಿಯೆ, ವಿಮರ್ಶೆ ಇತ್ಯಾದಿ / ೭೯
ಸಂಕಲನ ಸ್ವೀಕರಿಸಿದ ಪುಸ್ತಕಗಳು / ೮೦

ಒಳಗಿನ ಕಳ್ಳ

▲ ಕತೆ

ವಸುಮತಿ ಉಡುಪ

ನನ್ನ ಮಾತಲ್ಲಿ ನಿಮಗೆ ನಂಬಿಕೆ ಬರದಿದ್ದರೆ ಆ ಮನುಷ್ಯನ ತಂದೆಯನ್ನೇ ಕೇಳಿ ನೋಡಿ. ಮುದುಕನಿಗೆ ಕಿವಿ ಸರಿಯಾಗಿ ಕೇಳುವುದಿಲ್ಲ. ಆದರೆ ಬಾಯ್ತುಂಬಾ ಮಾತಾಡಬೇಕೆಂಬ ಚಪಲ. ಒಂದು ಕಪ್ಪು ಖಡಕ ಚಹಾ, ಮೇಲೆ ಬೆರಳುದ್ದದ ತಂಬಾಕಿನ ಸಹಿತ ತಾಂಬೂಲದ ತಟ್ಟೆ ಎದುರಿಗಿಟ್ಟರಂತೂ ಮುದುಕನಿಂದ ನೀವು ಅಪೇಕ್ಷಿಸಿದ್ದಕ್ಕಿಂತಾ ಹೆಚ್ಚಿನ ಮಾಹಿತಿ ಸಿಗುತ್ತದೆ. ಯಾರದೋ ಮನೆಯ ಮಾಹಿತಿ ಕಟ್ಟಿಕೊಂಡು ನಮಗಾಗಬೇಕಾದ್ದೇನು ಎಂದು ಮೂಗು ಮುರಿಯಬೇಡಿ. ಇಂತಾ ಸಣ್ಣಪುಟ್ಟ ಶಹರುಗಳಲ್ಲಿ ಒಬ್ಬರ ಬಗ್ಗೆ ಇನ್ನೊಬ್ಬರಿಗೆ ಅದಮ್ಯ ಕುತೂಹಲ. ಯಾರದೋ ಮನೆಯಲ್ಲಿ ಜೋರು ಜೋರು ಮಾತು ಕೇಳಿದರೆ ತಮ್ಮ ಮನೆಯ ಟಿ. ವಿ. ಯ ಧ್ವನಿ ತಗ್ಗಿಸಿ ಆಲೈಸುವುದು ಎಷ್ಟು ಸಹಜ ಅಂದರೆ ಗಂಡ, ಹೆಂಡತಿ ಅಪರೂಪಕ್ಕೆ ಜಗಳಾಡಿದರೂ ಆಚೀಚಿನವರಿಗೆ ಗೊತ್ತಾಗಿಬಿಡುತ್ತದೆ. ಇಲ್ಲಿನವರ ಮನೋಧರ್ಮವೇ ವಿಚಿತ್ರ. ತಮ್ಮನ್ನು ಇನ್ನೊಬ್ಬರೊಂದಿಗೆ ತುಲನೆ ಮಾಡಿಕೊಂಡೇ ಬದುಕುವ ಜನ ಇವರು. ತಮಗಿಂತಾ ಬೇರೆ ಇನ್ನೊಬ್ಬನಿಗೆ ಹೆಚ್ಚು ಕಷ್ಟ, ತಾಪತ್ರಯ ಇದೆ ಅನ್ನುವುದು ಗೊತ್ತಾದರೆ ಇವರ ಕಷ್ಟ ಇವರಿಗೆ ಸಹನೀಯವಾಗುತ್ತದೆ.

ಹತ್ತು ವರ್ಷಗಳ ಕೆಳಗೆ ಕೃಷ್ಣದಾಸ ಇಲ್ಲಿಗೆ ಬಂದಾಗ ಸುತ್ತಮುತ್ತಲ ಹೆಚ್ಚಿನವರಂತೆ ಒಬ್ಬ ಸಾಧಾರಣ ಗೃಹಸ್ಥ. ಸ್ವಲ್ಪ ಮುಂಗೋಪಿ ಹೌದು. ಹೆಂಡತಿಗೆ ಬೈದಾಡುವುದರಲ್ಲಿ ಪ್ರವೀಣ. ಅದೊಂದು ಪಾಪದ ಹೆಂಗಸು. ಗಂಡನ ಮಾತಿಗೆ ಎದುರುತ್ತರ ಕೊಡುತ್ತಿರಲಿಲ್ಲ. ಹೀಗಾಗಿ ಏರಿದ ಅವನ ದನಿ ಸ್ವಲ್ಪ ಹೊತ್ತಿಗೆ ತಣ್ಣಗಾಗಿ, 'ಏನೇ...' ಎನ್ನುತ್ತಾ ಹೆಂಡತಿಯನ್ನು ಮಾತಾಡಿಸಿಕೊಂಡು ಹೋಗುತ್ತಿದ್ದ. ಇಬ್ಬರು ಗಂಡುಮಕ್ಕಳು ಇಲ್ಲಿಗೆ ಬರುವಾಗ ಒಂದು ಅಮ್ಮನ ಸೊಂಟದಲ್ಲಿ, ಇನ್ನೊಂದು ಅಮ್ಮನ ಕೈ ಹಿಡಿದು ಬಂದಂತವು. ಈಗ ದೊಡ್ಡವಾಗಿವೆ. ದನಿ ಒಡೆದಿದೆ. ಒಬ್ಬ ಹೈಸ್ಕೂಲಿನಲ್ಲಿ ಓದುತ್ತಿದ್ದಾನೆ. ಇನ್ನೊಬ್ಬ ಮುಂದಿನ ವರ್ಷ ಹೈಸ್ಕೂಲು ಸೇರಲಿದ್ದಾನೆ. ನಾಲ್ಕು ಹಾಸಿಗೆಯ ಸುರುಳಿ, ಎರಡು ಗೋಣೀ ಚೀಲದಷ್ಟು ಪಾತ್ರೆಗಳು, ಒಂದು ರೇಡಿಯೋ, ಒಂದು ಟೀಪಾಯಿ, ಎರಡು ಮಡಿಸಿಡುವಂತಹ ಗಾಡ್ರೆಜ್ ಕುರ್ಚಿಗಳು, ಮೇಲೆ ಒಂದೆರಡು ಬಟ್ಟೆಬರೆಗಳ ಗಂಟುಗಳು. ಇವಿಷ್ಟು ಕೈಗಾಡಿಯಲ್ಲಿ ಬಂದಿಳಿದ ಕೃಷ್ಣದಾಸನ ಆಸ್ತಿ.

ಹತ್ತರ ಜೊತೆ ಹನ್ನೊಂದು. ಈ ಊರು ಅವನ ಸರ್ವೀಸಿನಲ್ಲಿ ಮೂರನೆಯದು. ಅದೂ ಬಡ್ತಿಯ ಮೇಲೆ. ಬಡ್ತಿ ಅಂದ ಕೂಡಲೇ ದೊಡ್ಡ ಹುದ್ದೆಯೇನಲ್ಲ. ದ್ವಿತೀಯ ದರ್ಜೆಯ ಗುಮಾಸ್ತೆಯಾಗಿದ್ದವನು ಪ್ರಥಮ ದರ್ಜೆಗೆ ಏರಿದ್ದ. ಶುರುವಿನಲ್ಲಿ ಕೃಷ್ಣದಾಸ ಎಲ್ಲರ ಜೊತೆ ಲೋಕಾಭಿರಾಮದ ಮಾತಾಡುತ್ತಾ ಹೊಂದಿಕೊಂಡಿದ್ದವನು. ಕುಕ್ಕರುಗಾಲಲ್ಲಿ ಕೂತು ಬೀಡಿ ಸೇದುತ್ತಿದ್ದವನು. ತಾಂಬೂಲದ ವಿನಿಮಯ ಮಾಡಿಕೊಂಡು ತಂಬಾಕಿನ ಅಮಲಿನ ಸುಖದಲ್ಲಿ ಕಷ್ಟ, ಸುಖ ಹಂಚಿಕೊಳ್ಳುತ್ತಿದ್ದವನು. ಈಗಲೂ ಲೋಕಾಭಿರಾಮದ ಮಾತಿಗೆ ಬರಗಾಲವಿಲ್ಲ. ಆದರೆ ಜನ ಅವನನ್ನು ನೋಡುವ ದೃಷ್ಟಿ ಬದಲಾಗಿದೆ. ಒಂದಿಷ್ಟು ಮತ್ಸರ, ಒಂದಿಷ್ಟು ತಾತ್ಸಾರ, ಒಂದಿಷ್ಟು ಅವನ ಹಿಂದೆ ಉಡಾಫೆಯ ಮಾತುಗಳು. 'ಬುದ್ಬುದಾಕಾರ' ಎನ್ನುತ್ತಾರಲ್ಲಾ, ಈ ಹತ್ತು ವರ್ಷಗಳಲ್ಲಿ ಕೃಷ್ಣದಾಸ ಆ ಮಟ್ಟಕ್ಕೆ ಬೆಳೆದು ನಿಂತಿದ್ದ. ಒಳ್ಳೇ ಸಮೃದ್ಧ ಇಲಾಖೆ. ದಿನವೂ ಝಣಝಣ ಉದುರುವ ಹಣ. ತಿಂಗಳ ಸಂಬಳ ಎನ್ನುವುದು ಊಟವಲ್ಲ, ಉಪ್ಪಿನಕಾಯಿಯ ಲೆಕ್ಕ.

ಜನ ನೋಡನೋಡುತ್ತಿದ್ದಂತೆ ಕೃಷ್ಣದಾಸನ ಬದುಕಿನ ಶೈಲಿಯೇ ಬದಲಾಗಿ ಹೋಯ್ತು. ಮನೆಗೆ ಬೇಕುಬೇಕಾದ್ದೆಲ್ಲಾ ಬಂತು. ಆದರೆ ಎಲ್ಲೂ ಪ್ರದರ್ಶನಪ್ರಿಯತೆ ಇಲ್ಲ. 'ಮಕ್ಕಳು ಹಟ ಮಾಡಿದರು, ಬಿದ್ದಿರಲಿ ಅಂತ ಒಂದು ಟಿ. ವಿ. ತಂದೆ. ಬೇಕಾಗಿರ್ಲಿಲ್ಲ. ಇವು ಇನ್ನು ಪುಸ್ತಕ ಹಿಡೀತಾವೆ ಅಂತೀರಾ ?'. 'ನಮ್ಮಮ್ಮನಿಗೆ ಸಖತ್ ಖಾಯಿಲೆ. ಯಾವತ್ತು ಏನು ಅಂತ ಹೇಳೋ ಹಾಗಿಲ್ಲ. ಫೋನ್ ಇದ್ದರೆ ಸ್ವಲ್ಪ ಸಮಾಧಾನ' ಇಂಥಾ ಅನಿವಾರ್ಯದ ದನಿಯ ಮಾತುಗಳು. ಒಂದು ಮಳೆಗಾಲದಲ್ಲಿ ಹೆಂಡತಿಗೆ ನಾಲ್ಕು ದಿನ ಜ್ವರ ಬಂತು. ಮನೆ ಕೆಲಸಕ್ಕೆ ಕೆಲಸಗಿತ್ತಿ ಬರತೊಡಗಿದಳು. ಅವಳೂ ಬಡವಿ. ಹೊಟ್ಟೆಯ ಮೇಲೆ ಹೊಡೆಯಲು ಸಾಧ್ಯವೇ ? ಒಂದು ಸಲ ಬಾ ಅಂತ, ಒಂದು ಸಲ ಬೇಡ ಅಂತ, ಆಟ ಆಡಿಸಿದರೆ ಬೇಕೆಂದಾಗ ಯಾರು ಸಿಗುತ್ತಾರೆ ? ಕೆಲಸಗಿತ್ತಿ ಖಾಯಂ ಆದಳು. ಕೃಷ್ಣದಾಸನ ಹೆಂಡತಿಗೆ ಸುಖ. ಅಡುಗೆಮನೆಯೊಳಗೆ ಇದ್ದುಕೊಂಡು ನಾಲ್ಕು ಜನಕ್ಕೆ ಅಡಿಗೆ, ತಿಂಡಿ ಮಾಡಿಟ್ಟುಬಿಟ್ಟರಾಯ್ತು. ಉಳಿದ ಹೊತ್ತು ಟಿ. ವಿ. ಉಂಟೇ ಉಂಟು. ಕನ್ನಡ ಸಿನಿಮಾ, ಕನ್ನಡ ಧಾರಾವಾಹಿಗಳು ಎಂದರೆ ಅವಳಿಗೆ ಪಂಚಪ್ರಾಣ. ಎಷ್ಟು ಹೊತ್ತು ಕೂತೇ ನೋಡಲು ಸಾಧ್ಯ ? ನಡುಮನೆಯಲ್ಲಿ ಒಂದು ಸೋಫಾ, ಒಂದು ದಿವಾನ್. ಈ ಊರು ಕೃಷ್ಣದಾಸನ ಕೈಹಿಡಿದು ಉದ್ಧರಿಸಿತು. ಎರಡು ಸಲ ವರ್ಗಾವಣೆ ಆದರೂ ಅವನು ಮಂಗಮಲಕು ಮಾಡಿ ಅದನ್ನು ರದ್ದುಪಡಿಸಿಕೊಂಡು ಬಂದ. 'ದುಡ್ಡೊಂದಿದ್ದರೆ ಏನೂ ಸಾಧ್ಯ' ಎಂದು ಗುರುತಿನ ಜನ ಮಾತಾಡಿಕೊಂಡರು. ಎದುರಿಗೆ, 'ಒಳ್ಳೆಯ ನೆರೆಹೊರೆ ಬೇಕೂಂದ್ರೆ ಸಿಗುತ್ತಾ ? ಅದಕ್ಕೂ ಪುಣ್ಯ ಮಾಡಿರ್ಬೇಕು. ಇಲ್ಲೇ ಇದ್ಬಿಡಿ ನೀವು...' ಎಂದು ತಾಜಾ ಮಾಡಿದರು. ದಾಸನ ಹೆಂಡತಿ ಹೊರಗೆಲ್ಲಾದರೂ ಮದುವೆ - ಮುಂಜಿಗಳಿಗೆ ಹೋಗುವಾಗ ಒಂದೊಂದು ಸಲ ಒಂದೊಂದು ಥರದ ಒಡವೆ ಧರಿಸುತ್ತಾಳಂತೆ. ಇದೆಲ್ಲಾ ಹೆಂಗಸರ ಮಾತು. ಸ್ವಲ್ಪ ಉತ್ಪ್ರೇಕ್ಷೆಯೂ ಇದ್ದೀತು. ಹೊರಗಡೆ ಮಾತ್ರ ಕಣ್ಣಿಗೆ ಕಾಣುವಂತೆ ಏನೊಂದೂ ದೊಡ್ಡ ಬದಲಾವಣೆ ಇಲ್ಲ. ದಾಸ ಇವತ್ತಿಗೂ ನಡೆದುಕೊಂಡೇ ಆಫೀಸಿಗೆ ಹೋಗುತ್ತಾನೆ. ಕಣ್ಣಿಗೆ ರಬ್ಬಾದ ಬಟ್ಟೆ ಹಾಕಿದ್ದೇ ಇಲ್ಲ. ತಿಂಗಳಿಗೊಂದು ಸಲವಾದರೂ 'ಚಪ್ಪಲೀ, ಬೂಟ್ಸೂ, ರಿಪೇರೀ...' ಎಂದು ಕೂಗಿಕೊಂಡು ಹೋಗುವವನಿಗೆ ಬುಲಾವ್ ಇರುತ್ತದೆ. ಎಲ್ಲರಿಗೂ ಕೇಳುವಂತೆ ದಾಸ ಚೌಕಾಶಿ ಮಾಡುತ್ತಾನೆ :

'ಬರೀ ಕಣ್ಕಟ್ಟು ಕೆಲಸ ನಿಂದು. ನೀನು ರಿಪೇರಿ ಮಾಡ್ಕೊಟ್ಟ ಮೆಟ್ಟು ಒಂದು ತಿಂಗಳೂ ಸರಿಯಾಗಿರಲ್ಲ' ಎಂದು ಬೈಯುತ್ತಾನೆ.

'ಅದನ್ನ ಬಿಸಾಕಿ ಬೇರೆ ತಗೊಳ್ಳಿ ಸಾಮೀ...' ಎಂದು ರಿಪೇರಿಯವನ ಸಲಹೆ ಬರುತ್ತದೆ.

'ನನ್ಹತ್ರ ದುಡ್ಡು ಕುಣೀತಿದ್ರೆ ಹಂಗೇ ಮಾಡ್ತಿದ್ದೆ...' ಎನ್ನುತ್ತಾನೆ ದಾಸ. ಮಕ್ಕಳಿಗೆ ಮಾತ್ರ ಈ ಥರದ ವ್ಯವಹಾರಗಳಿಂದ ವಿನಾಯಿತಿ. ಅವು ಜಬರ್ಾಗಿ ಸ್ಕೂಲಿಗೆ ಹೋಗುತ್ತವೆ. ದುಬಾರಿ ಸ್ಕೂಲು.

'ಹೊಟ್ಟೆಬಟ್ಟೆ ಕಟ್ಟಿಯಾದ್ರೂ ಓದಿಸ್ಬೇಕಲ್ಲ ಮಾರಾಯ್ರಾ, ನಮ್ಮ ಕಾಲ ಅಲ್ವಲ್ಲ. ಎಷ್ಟು ನಂಬರ್ ತೆಗೆದ್ರೂ ಸಾಲ್ದು' — ಕಾರಣ ಕೊಡುತ್ತಾನೆ ದಾಸ. ಸಂಜೆ ಅವಕ್ಕೆ ಮನೆಪಾಠ. ಹೆಂಡತಿ ಹಳ್ಳಿಯ ಪೈಕಿ. ಓದಿದ್ದು ಅಷ್ಟಕ್ಕಷ್ಟೇ. ಇಂಗ್ಲೀಷು ಕಬ್ಬಿಣದ ಕಡಲೆ. ದಾಸನ ಹತ್ತಿರ ಎಲ್ಲವುದಕ್ಕೂ ಸಕಾರಣ ಇರುತ್ತದೆ.

ಈ ಊರಿಗೆ ಬಂದ ನಾಲ್ಕೈದು ವರ್ಷಗಳಲ್ಲಿ ಕೃಷ್ಣದಾಸ ಬಾಡಿಗೆಗಿದ್ದ ಮನೆಯನ್ನು ಖರೀದಿಸಿದ್ದೇ ಜನರಿಗೆ ಅವನ ಆಳ ಅಂದಾಜಾಗಿಬಿಟ್ಟಿತು. ಇನ್ನೂ ಬಾಡಿಗೆ ಮನೆಯಲ್ಲಿ ನೇತು ಹೊಡೆಯುತ್ತಿದ್ದ ಕೆಲವರಿಗೆ ಹೊಟ್ಟೆಯೊಳಗೆ ಕೈಹಾಕಿ ಕಿವುಚಿದಂತಾಯ್ತು. 'ಊರಲ್ಲಿ ಚೂರು ಜಮೀನಿತ್ತು. ನನ್ನ ಪಾಲಿಗೆ ದುಡ್ಡೇ ತಗೊಂಡೆ' ಎಂದೇನೋ ದಾಸ ಹೇಳಿದ.

ಎದುರಿಗೆ ಹ್ಲೂಗುಟ್ಟಿದರೂ ಯಾರೂ ನಂಬಲಿಲ್ಲ. 'ಅದೃಷ್ಟ ತಂದ ಮನೆ. ಅದಕ್ಕೇ ತಗೊಂಡಿದಾನೆ' ಎನ್ನುವ ಸುದ್ದಿಯಾಯ್ತು. ಜನರ ನಂಬಿಕೆ ಒಮ್ಮೆ ಕೈಕೊಟ್ಟಿತು ಅಂದರೆ ಮತ್ತೆ ಅವರು ಯಾವುದನ್ನೂ ಸುಲಭಕ್ಕೆ ನಂಬುವುದಿಲ್ಲ. ದಾಸ, 'ಇಂತಿಷ್ಟಕ್ಕೆ ಖರೀದಿ ಮಾಡಿದೆ...' ಎಂದರೆ ಅದೂ 'ಸುಳ್ಳು' ಎನ್ನುವ ವದಂತಿ ಹಬ್ಬಿತು.

'ಅದರ ಎರಡರಷ್ಟು ಕೊಟ್ಟಿದಾನೆ. ಲೆಕ್ಕ ತೋರಿಸಿಲ್ಲ' ಎನ್ನುವ ಕುಹಕದ ಮಾತು ಬಂತು. ಹಳೆಯ ಮನೆ ತೆಗೆದುಕೊಂಡುಬಿಟ್ಟರೆ ಅಲ್ಲಿಗೆ ಮುಗಿಯಿತಾ ? ಸಣ್ಣಪುಟ್ಟ ಕಾಮಗಾರಿ ಎಂದು ಶುರು ಹಚ್ಚಿಕೊಂಡಿದ್ದು ದಾಸನ ಪ್ರಕಾರ 'ಕಬ್ಬಿನ ಗಾಣಕ್ಕೆ ಕೈ ಕೊಟ್ಟಹಾಗಾಯ್ತು.' ಮಕ್ಕಳು ಬೆಳೆಯುತ್ತಿವೆ. ಮನೆಗೆ ಬರಹೋಗುವವರ ಗಲಾಟೆ. ಗಂಡ, ಹೆಂಡತಿ ಇಬ್ಬರ ಕಡೆಯಲ್ಲೂ ತಲೆಕೂದಲಿನಷ್ಟು ಬಳಗ. ದಾಸನಿಗೆ ಎಲ್ಲರೂ ಬೇಕು. ಯಾವ ಊರಿನ, ಯಾರ ಪೈಕಿಯಲ್ಲಿ, ಏನು ವಿಶೇಷವಾದರೂ, ಕೊನೆಗೆ ಬಾಡಿಗೆ ಕಾರು ಮಾಡಿಕೊಂಡು ಊಟದ ಹೊತ್ತಿಗಾದರೂ ಹಾಜರಿ ಹಾಕಿ ಬರಬೇಕು. ಈ ಥರದ ಟ್ರಿಪ್ಪುಗಳು ಸದಾ ಇರುತ್ತವೆ. ಇವರು ಹೋಗುತ್ತಾರೆ ಅಂದರೆ ಅವರೂ ಬರುತ್ತಿರುತ್ತಾರೆ. ಇತ್ತೀಚೆಗಂತೂ ಮನೆ ಯಾವಾಗಲೂ ಗಿಜಿಗಿಜಿ. ಈ ಗೌಜಿನಲ್ಲಿ ಮಕ್ಕಳು ಮಗ್ನತೆಯಿಂದ ಓದುವುದು ಹೇಗೆ ? 'ಹೇಳಿ ಕಳಿಸಿದ ಹಾಗೆ ಪರೀಕ್ಷೆ ಹೊತ್ತಿಗೆ ಬಂದು ಬಿಡ್ತಾರೆ. ಹೇಳೋ ಹಾಗಿಲ್ಲ, ಬಿಡೋ ಹಾಗಿಲ್ಲ' ಅನ್ನುವುದು ದಾಸನ ಅಳಲು.

ಈ ಕಿರಿಕಿರಿಯಿಂದ ಮಕ್ಕಳನ್ನು ಬಚಾವು ಮಾಡುವುದಕ್ಕೆಂದೇ ಮೊದಲಿಗೆ ಮೇಲೆ ಎರಡು ರೂಮು ಕಟ್ಟಿಸುವುದು ಎನ್ನುವ ವಿಚಾರ ಬಂದಿದ್ದು. 'ಮುಂದೆ ಯಾವತ್ತಾದರೂ ಬಾಡಿಗೆ ಕೊಡುವುದಕ್ಕಾದರೂ ಬರುತ್ತೆ. ಕಟ್ಟಿಸೋದು ಕಟ್ಟಿಸ್ತಾ, ಹಾಗೇ ಜೊತೆಗೆ ಒಂದು ಹಾಲು, ಒಂದು ಡೈನಿಂಗು, ಅಡಿಗೆ ಮನೆ ಕಟ್ಟಿಸಿಬಿಡಿ' ಅಂತ ಹೆಂಡತಿ ಸಲಹೆ ಮಾಡಿದ್ದಂತೆ. ಇವನಿಗೂ 'ಸಮ' ಅನ್ನಿಸಿತು. ಇವೆಲ್ಲಾ ಪದೇ ಪದೇ ಹಚ್ಚಿಕೊಂಡು ರಂಪ ಮಾಡಿಕೊಳ್ಳುವ ಕೆಲಸ ಅಲ್ಲವಷ್ಟೇ ? ಕೈ ಹಾಕಿದ ಮೇಲೆ ಒಂದು ಸಲ ಅಚ್ಚುಕಟ್ಟಾಗಿ ಮಾಡಿ ಮುಗಿಸಿಬಿಡಬೇಕು. ಲೋನ್ ಸಿಕ್ಕಿತಂತೆ. ದಾಸ ಮೇಲೊಂದು ಮನೆಯನ್ನೇ ಎಬ್ಬಿಸಿದ.

ಯಾರ್‍ಯಾರೋ ಬಾಡಿಗೆಗೆ ಕೇಳಿಕೊಂಡು ಬಂದರು. 'ಸದ್ಯಕ್ಕಿಲ್ಲ' ಅಂತ ಕೈ ಝಾಡಿಸಿದ. ಕೆಳಗಿನ ಹಳೆ ಮನೆಗೂ ಗೋಡೆಗೆ ಗಿಲಾವು, ನೆಲಕ್ಕೆ ಮೊಸಾಯಿಕ್ ಎಂದು ಇಪ್ಪತ್ತೆಂಟು ಬದಲಾವಣೆ. 'ಮುದುಕಿಗೆ ಶೃಂಗಾರ ಮಾಡಿದ ಹಾಗೆ...' ಎಂದು ದಾಸ ಹೇಳಿಕೊಂಡರೂ ಮನೆ ಯಾವ ಚೆಲುವೆಗೂ ಕಮ್ಮಿ ಇಲ್ಲದಷ್ಟು ಡಿಂಗ್‌ಡಾಂಗ್ ಆಯಿತು. ಮನೆ ಕಟ್ಟಿಸಿದ ಮೇಲೆ ಮುಗಿಯಿತೇ ? ಹೋಮ, ಹವನ, ಪೂಜೆ, ಪುನಸ್ಕಾರ. ಉಂಡು ತೇಗಿದವರೆಲ್ಲಾ, 'ಲಕ್ಷಗಟ್ಟಲೆ ಸುರಿದಿದೆ ಪ್ರಾಣಿ. ಕಳ್ಳದುಡ್ಡು ಕೈಲಿ ಇಟ್ಕೊಳ್ಳೋ ಹಾಗೂ ಇಲ್ಲ. ಹೇಗೋ ವಿಲೇವಾರಿ ಮಾಡಬೇಕಲ್ಲ ?' ಎಂದು ಬೆನ್ನ ಹಿಂದೆ ಮಾತಾಡಿಕೊಂಡರು. ಉಪ್ಪುಂಡ ಕೃತಜ್ಞತೆ ಕೂಡಾ ನಾಲಿಗೆಗಿಲ್ಲ. ಬಡಪಾಯಿ ದಾಸ ಎಲ್ಲರೆದುರು ಗೋಳಾಡುತ್ತಿದ್ದ, 'ನಮ್ಮನೆಯೋಳಿಗೆ ಹೇಳ್ಬಿಟ್ಟಿದೀನಿ. ಇನ್ನು ಸುಮಾರು ವರ್ಷ ಗಂಜಿ ಕುಡ್ಕಂಡು ಕಾಲ ಹಾಕ್ಬೇಕು. ತಲೆ ಎಲ್ಲಾ ಸಾಲ ಮಾರಾಯ್ರೇ, ಥೋ, ಯಾಕಾರೂ ಮನೆ ಕಟ್ಟಿಸೋಕೆ ಹೋದ್ನೋ ? ಸಾಕಾಗ್ಹೋಯ್ತು.'

ಮುಂದೆ ದಾಸ ವಿಪರೀತ ಬದಲಾಗುತ್ತಾ ಹೋದ. ಮನೆಗೆ ಎಷ್ಟು ಪರಿ ರಕ್ಷಣೆ ಮಾಡಿಕೊಂಡರೂ ಸಾಲದು. ಹಳೆಮನೆಯ ಕಿಟಕಿಗಳಿಗೆಲ್ಲಾ ಉದ್ದುದ್ದ, ಅಡ್ಡಡ್ಡ, ಕಬ್ಬಿಣದ ಪಟ್ಟಿಗಳ ವೆಲ್ಡಿಂಗ್ ಆಯಿತು. ಮರಿ ಬೆಕ್ಕೂ ಕೂಡಾ ಒಳಗೆ ನುಸುಳದ ಹಾಗೆ ಭದ್ರತೆ. ಕಾಂಪೌಂಡು ಎತ್ತರೆತ್ತರಕ್ಕೇರಿತು. ಮನೆಗೆ ಒಂದಲ್ಲಾ, ಎರಡೆರಡು ಜಾತಿ ನಾಯಿಯ ಮರಿಗಳು ಬಂದುವು. 'ಇವರಿಬ್ಬರಿಗೂ ಒಂದೊಂದು...' ಎಂದು ಮಕ್ಕಳ ಹೆಳೆಯಲ್ಲಿ ದಾಸ ಸಮರ್ಥಿಸಿಕೊಂಡ.

ಕೆಲವೇ ತಿಂಗಳಲ್ಲಿ ಅವು ತೋಳನ ಹಾಗೆ ಬೆಳೆದುವು. ಕಾಂಪೌಂಡಿನೊಳಗೆ ಅಡ್ಡಾಡುತ್ತಾ, ಆಗೀಗ ಗೇಟಿನ ಬಳಿ ನಿಂತು ಗುರುಕಾಯಿಸುತ್ತಾ, ರಸ್ತೆಯಲ್ಲಿ ಓಡಾಡುವವರಿಗೂ ಹೆದರಿಕೆ ಹುಟ್ಟಿಸಿದುವು. ಆಚೀಚಿನ ಮನೆಯ ಮಕ್ಕಳು ತಪ್ಪಿಯೂ ದಾಸನ ಮನೆಯ ಬಳಿ ಸುಳಿಯದಂತೆ ಮಾಡಿದುವು. ಮನೆಯ ಆಂತರಿಕ ವಲಯದಲ್ಲೂ ಬಹಳಷ್ಟು ಬದಲಾವಣೆ. ದಾಸನ ಹೆಂಡತಿಗೆ ಮೂವತ್ಮೂರು ಕೋಟಿ ದೇವಾನುದೇವತೆಗಳ ಮೇಲೂ ಭಕ್ತಿ ಉಕ್ಕೇರಿದಂತೆ ಸದಾ ಏನಾದರೊಂದು ವ್ರತ. ಏನಾದರೊಂದು ನೆಪದಲ್ಲಿ ಉಪವಾಸ. ಸಂಕಷ್ಟ ಚತುರ್ಥಿ, ರಾಯರ ವಾರ, ಏಕಾದಶಿ, ದ್ವಾದಶಿ, 'ಕಟ್ಟಿದ್ದೇನಲ್ವಲ್ಲ, ಮಾಡ್ಕಳ್ಳಿ...' ಎಂದು ದಾಸ ಹಗುರವಾಗಿ ಹೇಳಿದರೂ ಅವನೂ ಅಂತಹ ನಿಟ್ಟುಪವಾಸಗಳಲ್ಲಿ ಭಕ್ತಿಯಿಂದ ಪಾಲ್ಗೊಳ್ಳುತ್ತಾನೆಂಬುದು ಸುದ್ದಿ. ಮಕ್ಕಳ ಹುಟ್ಟುಹಬ್ಬದ ದಿನ, ಮದುವೆಯ ವರ್ಷಾಚರಣೆಯ ದಿನ, ಮನೆಯಲ್ಲಿ ಭರ್ಜರಿ ಸತ್ಯನಾರಾಯಣ ವ್ರತ. ನೂರಾರು ಜನಕ್ಕೆ ಊಟ. ಪುಣ್ಯ ಗಂಟು ಕಟ್ಟಿಕೊಂಡಷ್ಟೂ ಸಾಲದು ಎನ್ನುವಂತೆ ಎಲ್ಲೆಲ್ಲಿಗೋ ಯಾತ್ರೆ. ಗಂಡ, ಹೆಂಡತಿ, ಇಬ್ಬರ ಕಡೆಯ ಹಿರಿಯರನ್ನೂ ಸೇರಿಸಿಕೊಂಡು ಒಂದು ಸಣ್ಣ ದಿಬ್ಬಣದಂತೆ ಪುಣ್ಯಕ್ಷೇತ್ರಗಳಿಗೆ ವ್ಯಾನು ತುಂಬಾ ತುಂಬಿಕೊಂಡು ಹೊರಟರೆಂದರೆ. 'ಅದಕ್ಕೂ ಯೋಗ ಬೇಕು...' ಎಂದು ರಸ್ತೆಯ ಹಲವು ಹಿರಿಯರ ನಿಟ್ಟುಸಿರು. ಮುದುಕಪ್ಪ ಏನು ಹೇಳುತ್ತಾನೆ, ಕೇಳಿ...

:

'ಹೀಗೆ ಇರ್ಲೇ ಇಲ್ಲ ನಮ್ಮ ದಾಸ. ಓದಿ ಮುಗಿದ ಮೇಲೆ ಕೆಲಸ ಸಿಕ್ಕೋ ವರೆಗೆ ನಾಲ್ಕು ವರ್ಷ ಗದ್ದೆ ಅಂಚು ಕಡೀತಾ ಹಳ್ಳೀಲಿ ಕಾಲ ಹಾಕಿದ್ನಲ್ಲ. ಏನಿತ್ತು ಸ್ವಾಮೀ? ಅರೆಹೊಟ್ಟೆ ಊಟ. ಹರಕಲು ಬಟ್ಟೆ. ಆದ್ರೂ ನನ್ನ ಮಗ ಖುಷಿಯಾಗೇ ಇದ್ದ. ಎಂಥಾ ಧೈರ್ಯಸ್ಥ ಅಂತೀರಿ? ನಡುರಾತ್ರೀಲಿ ಬೇಕಾದ್ರೂ ಗದ್ದೆ ಕಡೆ ಒಬ್ಬೊಬ್ನೇ ಸುತ್ತಾಕ್ಕೊಂಡು ಬರ್ತಿದ್ದ. ಈಗ ಏನಾಯ್ತು ಈ ಹುಡುಗಂಗೆ? ಬರೀ ಹೆದರುಪುಕ್ಕ ಆಗಿದಾನೆ. 'ನಿದ್ದೆ ಬರಲ್ಲ' ಅಂತಾನೆ. ಈ ವಯಸ್ಸಿನ ನಾನು ಮಾಡೋಷ್ಟು ನಿದ್ದೇನೂ ಇವನಿಗೆ ಬರಲ್ಲ ಅಂದ್ರೆ ಏನರ್ಥ? 'ಕೈ ತುಂಬಾ ಕೆಲ್ಸ, ಹೊಟ್ಟೆ ತುಂಬಾ ಊಟ, ಕಣ್ತುಂಬಾ ನಿದ್ದೆ' ಇಷ್ಟಿದ್ದರೆ ಮನುಷ್ಯಂಗೆ ಮತ್ತೇನು ಬೇಕು ಸ್ವಾಮೀ? ಈ ವಯಸ್ಸಿಗೇ ಬಿ. ಪಿ. ಅಂತೆ. ಸಕ್ಕರೆ ಖಾಯಿಲೆ ಅಂತೆ. ಮಾತ್ರೆ ನುಂಗೋದು ತಪ್ಪೋ ಹಾಗಿಲ್ಲ. ನಾಕು ದಿನ ಸುಖವಾಗಿರೋಣ ಅಂತ ಹಳ್ಳಿಯಿಂದ ಬಂದ್ರೆ ಇವನ್ನ ನೋಡಿ ಬೇಜಾರಾಗುತ್ತೆ ಬಿಡಿ. ಏನಿದ್ದರೆ ಏನು ಬಂತು. ಮನಸ್ಸಿಗೆ ಸಮಾಧಾನ ಬ್ಯಾಡ್ವಾ? ಅದೇನು ಸಿಟ್ಟು ಅಂತೀನಿ. ಅನ್ನದಲ್ಲಿ ಒಂದು ತಲೆಕೂದಲು ಬಂದ್ರೆ ತಟ್ಟೆ ಎತ್ತಿ ಮಕ್ಕೆ ಬಿಸಾಕೋದಾ? ಅವನ ಅಮ್ಮಂಗೆ ಕಣ್ಣು ಸರಿಯಾಗಿ ಕಾಣ್ತಿರಲಿಲ್ಲ. ಕನ್ನಡಕ ಹಾಕ್ತಿರಲಿಲ್ಲ. ಎಷ್ಟೋ ಸಲ ಅನ್ನದಲ್ಲಿ ಇಷ್ಟಿಷ್ಟುದ್ದದ ಹುಳ ಸಿಕ್ಕೋದು. ಬೆರಳ ತುದೀಲಿ ಪಕ್ಕಕ್ಕೆ ದೂಡಿಟ್ಟು ತೆಪ್ಪಗೆ ಉಣ್ತಿರ್ಲಿಲ್ವಾ ಇವ್ನು? ಈಗ ದೊಡ್ಡಸ್ತಿಕೆ ಬಂತು ಅಂತ ಜಬರ್ದಸ್ತು ಮಾಡೋದಾ? ಎರಡೆರಡು ನಾಯಿ ಎಂತಕ್ಕೆ ಹೇಳಿ? ಇವ್ನ ಮನೇನೇ ಹುಡುಕಿ ಕನ್ನ ಹಾಕೋಕೆ ಕಳ್ರು ಸಾಯ್ಕೊಂಡು ಕೂತಿದಾರಾ? ಮನೇಲಿ ನಿಧಿ ಹೂತಿಟ್ಟಿದಾನಾ ಅಂತೀನಿ? ಎಂತದೋ ಹೆದ್ರಿಕೆ, ಎಂತದೋ ಗುಟ್ಟು. ಆ ಹುಡುಗೀನೂ ಸರಿಯಾಗಿದೆ. ಯಾವಾಗ ನೋಡಿದ್ರೂ ಉಪವಾಸ, ವನವಾಸ. ನಂಬ್ತೀರಾ ಸ್ವಾಮೀ, ದೇವಸ್ಥಾನದ ದಿಕ್ಕಿಗೆ ತಲೆ ಹಾಕಿ ಮಲಗಿದೋನಲ್ಲ ಇವ್ನು. ಈಗ ನೋಡ್ತೀರಲ್ಲಾ, ದೇವ್ರ ಹೆಸರಲ್ಲೇ ಸಾವಿರಾರು ಹುಡಿ ಹಾರಿಸ್ತಾನೆ. ನಂಗೇನಾಗ್ಬೇಕಾಗಿದೆ ಹೇಳಿ, ಮಾತಾಡಿದ್ರೆ ಸುಮ್ನೆ ನಿಷ್ಠೂರ. ನನ್ನಷ್ಟಕ್ಕೆ ನಾನು ನಾಕ್ದಿನ ಇದ್ದು ಹೋಗೋದಪ್ಪಾ...'

:

ಹೊರಗಿನಿಂದ ಕಳ್ಳರು ನುಸುಳದ ಹಾಗೆ ಕೃಷ್ಣದಾಸ ಎಷ್ಟೆಲ್ಲಾ ಬಂದೋಬಸ್ತು ಮಾಡಿಕೊಂಡಿದ್ದಾನಲ್ಲಾ. ಪಾಪ. ಹೃದಯಾಘಾತದಿಂದ ಸತ್ತಾಗ ಇನ್ನೂ ನಲವತ್ತೊಂಭತ್ತು.

ವಸುಮತಿ ಉಡುಪ
ಗೌರಿ, ೪ ನೇ ಕ್ರಾಸ್, 'ಎ' ಬ್ಲಾಕ್, ಗಾಂಧೀನಗರ, ಶಿವಮೊಗ್ಗ - ೫೭೭ ೨೦೧

▲ಕವಿತೆ - ೧

ಹರೆಯದಗ್ನಿಧಾಮ

ದೊಡ್ಡರಂಗೇಗೌಡ

ತಾರುಣ್ಯದೊಳಗೆ ತ್ವರಿತವಾಗಿ
ಹರಿವುದೊಂದೇ ಭಾವ
ಗೂಳಿಯಾಗಿ ಗುಮ್ಮುವ ಅದಟು ಸ್ವಭಾವ:

ತಾರುಣ್ಯದೊಳಗೆ ಕಾರಂಜಿಯಾಗಿ
ಪುಟಿವುದೊಂದೇ ಆಟ
ಕುದುರೆಯಾಗಿ ಕೆನೆಕೆನೆಯುತ ನಿಲ್ಲದ ನಾಗಾಲೋಟ!

ಹುಡುಕಿ ಹುಡುಕಿ ಕಣ್ಣು
ಹಿಡಿದು ಹರಿಣಿ ಹೆಣ್ಣು
ಮೊರೆಮೊರೆಯುವ ಮೋಹ - ಧಗಧಗಿಸುವ ದಾಹ?

ಎದೆ ಬೆದಗಳ ತಡಕಿ
ಪೊದೆ ಮೆದೆಗಳ ಜೀಕಿ
ಹಾತೊರೆದ ನಾಗ ಬಂಧ... ರಾಗ ರತಿಯ ಚೆಂದ!

ಮಧುರ ಮಿಲನದಪ್ಪುಗೆಯಲಿ
ಅಧರ ಜೇನ ಈಂಟುವಲ್ಲಿ
ಮಾನ ಮರೆತ ಸ್ವೈರ - ದೋಣಿ ಮೀಟೋ ವಿಹಾರ!

ಪ್ರೀತಿಯ ಕಾಗುಣಿತ ಕಲಿತು
ಬೀದಿ ಸೊಣಗ ಸುರತ ಅರಿತು
ಪರವಶವೋ ಪ್ರೇಮ - ಹರೆಯ ಅಗ್ನಿಧಾಮ!

ದೊಡ್ಡರಂಗೇಗೌಡ
ಪ್ರಿನ್ಸಿಪಾಲರು, ಎಸ್‌ಎಲ್‌ಎನ್ ಕಾಲೇಜ್, ಕೋಟೆ, ಬೆಂಗಳೂರು - ೫೬೦ ೦೦೨

ಫಂಡಮೆಂಟಲ್ ಡಿಸೀಸ್

▲ ಲಲಿತ ಪ್ರಬಂಧ

ಮ. ಸು. ಕೃಷ್ಣಮೂರ್ತಿ

ಅಂದು ನಮ್ಮ ಮನೆಯ ಪಕ್ಕದ ಮನೆಯವರ ಜೊತೆ ಏನೋ ಮಾತನಾಡಬೇಕಿತ್ತು. ಆದ್ದರಿಂದ ಅಲ್ಲೇ ಅವರ ಕಾಂಪೌಂಡಿನಲ್ಲಿ ನಿಂತಿದ್ದ ಅವರ ಕುಮಾರಕಂಠೀರವನನ್ನು ಕೇಳಿದ. 'ಏನಪ್ಪಾ. ನಿಮ್ಮ ತಂದೆಯವರು ಇದ್ದಾರಾ?' ಆದರೆ ಅವನು ಏನೂ ಮಾತನಾಡದೆ ಮುಖ ಸಿಂಡರಿಸಿಕೊಂಡು ಒಳಕ್ಕೆ ಹೋದ. ಅವನು ಇಂಜನೀಯರಿಂಗ್ ವಿದ್ಯಾರ್ಥಿ. ಇಂಗ್ಲೀಷ್ ಭಕ್ತ. ಹೀಗಾಗಿ ನಾನು ಕನ್ನಡದಲ್ಲಿ ಮಾತನಾಡಿಸಿದ್ದು ಅವನಿಗೆ ಇಷ್ಟವಾಗಲಿಲ್ಲವೆಂದು ಕಾಣುತ್ತದೆ. ಅನಂತರ ಅವನ ತಮ್ಮ ಬಂದ. ಅವನು ಕಾನ್ವೆಂಟ್ ವಿದ್ಯಾರ್ಥಿ. ಅವನಿಗೂ ಪ್ರಶ್ನೆ ಹಾಕಿದೆ. ಆತ ಹೇಳಿದ. 'ನಮ್ಮ ಡ್ಯಾಡೀನಾ. ತಾಳಿ ನೋಡಿಕೊಂಡು ಬರುತ್ತೇನೆ.'

ಅನಂತರ ತಿಳಿಯಿತು ಅವರ ತಾಯಿ. ತಂದೆಗೆ ಮಮ್ಮಿ. ಡ್ಯಾಡಿ ಎಂದು ಕರೆಯದಿದ್ದರೆ ಕೋಪ ಬರುತ್ತದೆ ಎಂದು. ಇನ್ನು ಈ ಹುಡುಗರ ಮಮ್ಮಿಗೆ ತಾವು ಕನ್ನಡ ಮೀಡಿಯಂ ತೆಗೆದುಕೊಂಡು ಕೆಟ್ಟೆವು. (ಕನ್ನಡ ಮೀಡಿಯಂ ತೆಗೆದುಕೊಂಡೂ ಅವರು ಎಸ್‌ಎಸ್‌ಎಲ್‌ಸಿಯನ್ನು ದಾಟದೇ ಹೋದುದು ಬೇರೆ ಕಥೆ.) ಎಂದು ಅವರು ತಮ್ಮೆಲ್ಲ ಮಕ್ಕಳನ್ನು ಕಾನ್ವೆಂಟಿಗೆ ಕಳಿಸಿದ್ದರು. ತಮಗೆ ಇಂಗ್ಲೀಷ್ ಚೆನ್ನಾಗಿ ಬರದಿದ್ದರೂ ಬರುತ್ತದೆ ಎಂದು ತೋರಿಸಿಕೊಳ್ಳುವ ಚಟ! ಏಕೆಂದರೆ ಇಂಗ್ಲೀಷ್ ಪ್ರೇಮವನ್ನು ಒಂದಲ್ಲ ಒಂದು ರೀತಿಯಲ್ಲಿ ತೋರಿಸಿಕೊಳ್ಳುತ್ತಿದ್ದರು.

ಒಮ್ಮೆ ಅವರ ಯಜಮಾನರಿಗೆ ಹುಷಾರಿರಲಿಲ್ಲ. ಒಂದು ದಿನ ನಮ್ಮ ಮನೆಯಾಕೆ 'ನಿಮ್ಮ ಯಜಮಾನರ ಆರೋಗ್ಯ ಹೇಗಿದೆ?' ಎಂದು ವಿಚಾರಿಸಿದರು. ಅದಕ್ಕೆ ಉತ್ತರ ಕೊಡುವ ಬದಲು ಅವರು ಮುಖ ಗಂಟಿಕ್ಕಿ ಹೇಳಿದರು. "ಇದೇನ್ರೀ ಇದು. ನೀವು ಗ್ರಾಜ್ಯುಯೇಟ್ ಆಗಿ ಇಂಥ ಹಳೆಯ ಕಾಲದ ಮಾತಾಡುತ್ತೀರಲ್ರೀ? 'ಯಜಮಾನ' ಅಂತ ಯಾಕನ್ನುತ್ತೀರಿ? ಹಸ್ಬೆಂಡ್. ಅಥವಾ ಹಬ್ಬಿ ಎಂದರೆ ಎಷ್ಟು ಚೆನ್ನ? ಇನ್ನು ಮೇಲಿಂದ ಹಾಗೇ ಕರೆಯಿರಿ?"

ಅಂತೂ ಅಂದು ನನ್ನ ಮನೆಯ ಯಜಮಾನಿಗೆ ಮರೆಯದ ಪಾಠ. ಅವರೂ ನೆರೆಹೊರೆಯವರ ಜೊತೆ ಬಾಳಬೇಕಲ್ಲ? ಹೀಗಾಗಿ ಅವರ ಜೊತೆ ಮಾತನಾಡಬೇಕಾಗುತ್ತಿತ್ತು. ಆಕೆ ತನ್ನ ದೊಡ್ಡಸ್ತಿಕೆಯನ್ನು ಈ ರೀತಿ ತೋರಿಸಿಕೊಳ್ಳುತ್ತಿದ್ದಳು. ಒಮ್ಮೆ ಬೇರೆ ಯಾವುದೋ ಮಹಿಳೆಯ ವಿಷಯವಾಗಿ ನಮ್ಮ ಮನೆಯವರು ಏನನ್ನೋ ಕೇಳಿದರು. ಆಕೆ ಎಲ್ಲಿಲ್ಲದ ತಿರಸ್ಕಾರದಿಂದ ಹೇಳಿದಳು. 'She ಈಜ್. ಬಿ.ಎ. ಇಂಗ್ಲೀಷ್ ತಿಳಿಯದ ಗೂಷ್ಟು!' ಹೀಗೆ ಆಗಾಗ್ಗ ಅವರ ಬಾಯಿಂದ ಇಂಥ ಅಣಿಮುತ್ತುಗಳು ಉದುರುತ್ತಿದ್ದವು. ಒಮ್ಮೆ ನಮ್ಮ ಮನೆಯ ಗಡಿಯಾರ ಕೆಟ್ಟಿದ್ದರಿಂದಲೋ ಏನೋ ನಮ್ಮ ಮನೆಯಾಕೆ ಗಂಟೆ ಎಷ್ಟು ಎಂದು ಕೇಳಿದರು. ಇವರ ಮನೆಯಲ್ಲಿ ಒಂದು ಗಡಿಯಾರಕ್ಕೂ ಗತಿಯಿಲ್ಲವೆ? ಎಂದು ತಿರಸ್ಕಾರದಿಂದ ನೋಡಿ. ತಮ್ಮ ಕೈಗಡಿಯಾರವನ್ನು ನೋಡಿ ಹೇಳಿದರು. 'ಎರಡೂ...' ಅಷ್ಟರಲ್ಲೇ ಅವರಿಗೆ ಕನ್ನಡ ಶಬ್ದವನ್ನು ಬಳಸುವುದರಿಂದ ತಮ್ಮ ಘನತೆಗೆ ಕುಂದು ಎಂಬ ಜ್ಞಾನೋದಯವಾಯಿತು. ಅವರು ಹೇಳಿದರು. 'ಥರ್ಟಿ. ಎರಡೂ ಥರ್ಟಿ!' ನಗು ತಡೆಯಲಾರದೇ ನಮ್ಮ ಮನೆಯವರು ಒಳಕ್ಕೆ ಓಡಿ ಬಂದರು.

ನಮ್ಮ ಜನರ ಈ ಇಂಗ್ಲೀಷ್ ಪ್ರೇಮ ನಮ್ಮ ಪಕ್ಕದ ಕುಕ್ಕರಹಳ್ಳಿಗೂ ನುಸುಳಿದೆ. ಒಂದು ದಿನ ನಮ್ಮ ಪರಿಚಿತ ಮಾದಯ್ಯ ಬಂದು ಕೇಳಿದ. 'ಬುದ್ಧಿ. ನಮ್ಮ ಹುಡುಗನಿಗೆ ಕಾನ್ವೆಂಟಿನಲ್ಲಿ ಒಂದು ಸೀಟು ಕೊಡಿಸಬೇಕಲ್ಲ ?'

'ಯಾಕಪ್ಪ. ನಿಮ್ಮ ಸ್ಕೂಲ್ ಏನಾಗಿದೆ! ಅಲ್ಲಿ ನಿಮ್ಮ ಮಕ್ಕಳಿಗೆ ಕಾಲಕ್ಷೇಪ ದೊರೆಯುತ್ತದೆ. ಉಚಿತ ತಿಂಡಿ. ಬಟ್ಟೆ ಎಲ್ಲ ದೊರೆಯುತ್ತದಲ್ಲ!'

'ಅವೆಲ್ಲ ಯಾರಿಗೆ ಬೇಕು ಬುದ್ಧೀ. ನಮ್ಮ ಹುಡುಗರೂ ನನ್ನ ಹಾಗೇ ಕುರಿ ಕಾಯ್ಕೊಂಡಿರಬೇಕು ಎನ್ನುತ್ತೀರೇನು ?'

'ಕನ್ನಡ ಮಾಧ್ಯಮದಲ್ಲಿ ಓದಿದವರೆಲ್ಲ ಕುರಿ ಕಾಯುತ್ತಾರೆ ಎಂದು ಯಾರು ಹೇಳಿದರು ?'

'ಇನ್ನೇನು ಬುದ್ಧಿ. ನನ್ನ ತಮ್ಮನ ಮಕ್ಕಳು ಎಸ್‌ಎಲ್ಸಿ ಪಾಸು ಮಾಡಿ ರಿಕ್ಷಾ ಓಡಿಸ್ತಾ ಇಲ್ವಾ ? ಬುದ್ಧೀ. ನಿಮ್ಮ ಹಾರುವ ಹೈಕ್ಳು ಮಾತ್ರ ಅಮೇರಿಕಾಕ್ಕೆ ಹೋಗಬೇಕು. ನಮ್ಮ ಹೈಕ್ಳು ಹೋಗಬಾರ್ದು ಅಂತಲಾ ?' ಅವನ ಮಾತಿನಿಂದ ನಿರುತ್ತರನಾಗಿ ನಾನು ಹೇಳಿದೆ, 'ಅಲ್ಲಿ ಡೊನೇಷನ್ ಕೇಳುತ್ತಾರಲ್ಲ. ನಿನ್ನ ಕೈಲಿ ಕೊಡೋಕ್ಕಾಗುತ್ತ ?'

'ಕೊಟ್ಟರಾಯಿತು. ನಿಮ್ಮಂಥವರ ಮನೆ ಬಚ್ಚಲ ಬಳಿದಾದ್ರೂ ಸರಿ. ದುಡ್ಡು ತಂದು ಕೊಡ್ತೀವಿ. ಸೀಟು ಕೊಡ್ಸಿ. ನಿಮ್ಮ ದಮ್ಮಯ್ಯ !'

ಅಂತೂ ಮಾದಯ್ಯ ಹೊಟ್ಟೆ ಬಟ್ಟೆ ಕಟ್ಟಿ ತನ್ನ ಮಗನನ್ನು ಕಾನ್ವೆಂಟಿಗೇ ಸೇರಿಸಿದ. ಅಂದಿನಿಂದ ಅವನ ಚರ್ಯೆಯೇ ಬದಲಾಯಿತು. ಒಂದು ದಿನ ಆ ಹುಡುಗ ನಮ್ಮ ಮನೆಗೆ ಬಂದು ಕೂಗಿದ, 'ಅಂಕಲ್. ಅಂಕಲ್. ತೆಂಗಿನಕಾಯಿ ಕೀಳಬೇಕಂತಲ್ಲ. ಯಾವಾಗ ಬರಲಿ ?' ಇದಾರಪ್ಪ ಅಂಕಲ್ ಎನ್ನುವ ಸೋದರಳಿಯ ಎಂದು ಹೊರಗೆ ನೋಡಿದರೆ ನಮ್ಮ ಮಾದಯ್ಯನ ಕುಮಾರ. ಹೋಗಲಿ ಇಂಗ್ಲೀಷ್‌ನಿಂದಲಾದರೂ ಸರಿ. ಅವನು ನಮ್ಮ ಹತ್ತಿರ ಬಂದನಲ್ಲ ಎಂದು ನಾನು ಸಂತೋಷಪಟ್ಟರೆ ನನ್ನ ಹೆಂಡತಿಗೆ ಅಸಾಧ್ಯ ಕೋಪ ! 'ತಿರಿಕೆ ಮಕ್ಕಳೆಲ್ಲ "ಅಂಕಲ್" ಎನ್ನುವ ಕಾಲ ಬಂತಲ್ರೀ' ಎಂದು ಆಕೆ ಹಲುಬಿದಳು. ಅಂತೂ ಇಂಗ್ಲೀಷ್‌ನಿಂದಾಗಿ ಒಬ್ಬ ಬ್ರಾಹ್ಮಣ. ಒಬ್ಬ ಹರಿಜನನಿಗೆ 'ಅಂಕಲ್' ಆದರೆ ಅದೆಂಥ ದೊಡ್ಡ ಭಾಷೆ ! –ನಮ್ಮ ಇಂಗ್ಲೀಷ್ ಪ್ರೊಫೆಸರರ ಅಭಿಮಾನ.

ನಮ್ಮ ಈ ಇಂಗ್ಲೀಷ್ ಮೋಹ ನಮ್ಮ ಬೀದಿಯನ್ನು ದಾಟಿ ಮುಂದಕ್ಕೆ ಹೋಗಿದೆ. ನಮ್ಮ ದರ್ಜಿ ಪುಂಡಲೀಕುವಿಗೆ 'ದರ್ಜಿ' ಎಂದರೆ ಅಸಾಧ್ಯ ಕೋಪ. ತನ್ನ ಕತ್ತರಿಯಿಂದ ಬಟ್ಟೆ ಕತ್ತರಿಸುವ ಬದಲು ನಮ್ಮ ತಲೆಯನ್ನೇ ಕತ್ತರಿಸಿಬಿಟ್ಟಾನು ! 'ಟೈಲರ್' ಎಂದರೆ ಅವನಿಗೆ ಎಲ್ಲಿಲ್ಲದ ಆಪ್ಯಾಯಮಾನ. ಈ ಟೈಲರ್ ಪುಂಡಲೀಕು ತನ್ನ ಮಗನಿಗೆ 'ವಾಮನ್ ಟೈಲರ್' ಎಂದು ಹೆಸರಿಟ್ಟ. 'ಏಕಯ್ಯ ಇಂಗ್ಲೀಷ್ ಸೇರಿಸಿದೆ' ಎಂದರೆ ಅವನು ಹೇಳಿದ. 'ಅದರಲ್ಲಿ ತಪ್ಪೇನು ? ಅದರಿಂದ ನಮ್ಮ ಘನತೆ ಹೆಚ್ಚುತ್ತದೆ ? ರಾಜೇಶ್ ಪೈಲಟ್. ಜಗದೀಶ್ ಟೈಟ್ಲರ್. ಇವರೆಲ್ಲ ತಪ್ಪೆ ?' ಅಷ್ಟೇ ಅಲ್ಲ. ಅವರ ಈ ಇಂಗ್ಲೀಷ್ ಹೆಸರಿನಿಂದಲೇ ಅವರು ಮಂತ್ರಿಗಳಾದುದು ಎಂದು ಅವನ ಧೃಢ ನಂಬಿಕೆ ! 'ಆಗಲಪ್ಪ. ಈ ನೆವದಿಂದಲಾದರೂ ನಿನ್ನ ಮಗ ಮಂತ್ರಿಯಾಗಲಿ' ಎಂದು ಅವನ ಮಗನನ್ನು ಹರಸಿದೆ.

ದರ್ಜಿಯ ಕಥೆಯೇ ಹೀಗಾದರೆ ಇನ್ನು ಹಜಾಮನನ್ನು 'ಹಜಾಮ' ಎಂದು ಕರೆದು ಬದುಕುಳಿಯುವುದುಂಟೇ ? ನಮ್ಮ ಸೆಲೂನಿನ ಒಡೆಯ ಕೆಂಪರಾಜುವಿನ ಇಂಗ್ಲೀಷ್ ಪ್ರೇಮವಂತೂ ಹೇಳತೀರದು. ಅವನ ಸೆಲೂನಿನಲ್ಲಿ ಕನ್ನಡ ಪತ್ರಿಕೆಗಳ ಬದಲಿಗೆ ಸ್ಕ್ರೀನ್. ಫ್ಯಾಮಿನಾ ಮೊದಲಾದ ಇಂಗ್ಲೀಷ್ ಪತ್ರಿಕೆಗಳು ವಿಜೃಂಭಿಸುತ್ತವೆ. 'ಯಾಕಯ್ಯ ಹಾಗೆ ?' ಎಂದು

ಕೇಳಿದರೆ 'ಇಂಗ್ಲೀಷ್ ಪೇಪರ್ ತರಿಸಿದರೆ ಧಪೂತಿ ಆಸಾಮಿಗಳು ಬರುತ್ತಾರೆ. ಈ ಕನ್ನಡ ಕಂತ್ರಿಗಳಿಗೇ ಸರಿ!' ಎಂದು ಹೇಳಿದ.

ಅವನ ನಂಟನೊಬ್ಬ ಇಂಗ್ಲೆಂಡಿಗೆ ಯಾರ ಜೊತೆಯಲ್ಲೋ ಸೇವಕನಾಗಿ ಹೋಗಿ ಅಲ್ಲಿ ಒಂದು ಸೆಲೂನ್ ಇಟ್ಟು ತನ್ನ ಕೈಚಳಕದಿಂದಾಗಿ ಕೋಟ್ಯಧಿಪತಿಯಾಗಿದ್ದಾನಂತೆ. ಅದ್ದರಿಂದ ಇವನಿಗೂ ವಿಲಾಯತಿಗೆ ಹೋಗಿ ಕೋಟ್ಯಧೀಶನಾಗುವ ಕನಸು. ಅದ್ದರಿಂದ ಆದಷ್ಟು ಇಂಗ್ಲೀಷ್ ಕಲಿಯುವ ಬಯಕೆ. ಒಂದು ದಿನ ಅವನು 'ಹಜಾಮ ಎನ್ನುವುದಕ್ಕೆ ಇಂಗ್ಲೀಷಿನಲ್ಲೇನು?' ಎಂದು ಕೇಳಿದ. 'ಬಾರ್ಬರ್!' ಎಂಬ ಶಬ್ದ ಕೇಳಿ ಯಾಕೋ ಹರಳೆಣ್ಣೆ ಕುಡಿದವನಂತೆ ಅವನಿಗೆ ಅನ್ನಿಸಿರಬೇಕು. ನಾನು ಕೇಳಿದೆ. 'ಬೇರೆ ಯಾವ ಒಳ್ಳೆಯ ಶಬ್ದವೂ ಇಲ್ಲವಾ?' 'ಹಜಾಮ' ಎನ್ನುವುದಕ್ಕೆ 'ನಯನಜ ಕ್ಷತ್ರಿಯ'. 'ಸವಿತಾ ಸಮಾಜ' ಎಂಬ ಹೆಸರುಗಳಿವೆ ಎಂದ. 'ಹಾಗಾದರೆ 'ರಾಜು' ಎಂಬ ನಿನ್ನ ಹೆಸರು ಸರಿಯಾಗಿಯೇ ಇದೆಯಲ್ಲ, ಎಂದೆ. ಆದರೆ ಅದರಲ್ಲಿ ಇಂಗ್ಲೀಷಿನ ಗಂಧವಿಲ್ಲವಲ್ಲ ಎಂಬ ಅನುತಾಪ. ಆದರೆ ನಾನು ಅವನಿಗೆ ಯಾವ ಪರಿಹಾರವನ್ನೂ ಸೂಚಿಸದೆ ಅಂದು ಮನೆಗೆ ಮರಳಿದೆ.

ಮಾರನೆಯ ದಿನ ನಾನು ಅವನ ಸೆಲೂನ್ ಮುಂದೆ ಹೋಗುತ್ತಿದ್ದಾಗ ಅವನು ನನ್ನನ್ನು ಕೂಗಿದ. ಅವನು ಹಿಗ್ಗಿ ಹೀರೇಕಾಯಿಯಾಗಿದ್ದ. ಅವನಿಗೆ ಯಾರೋ ಕಾಲೇಜು ವಿದ್ಯಾರ್ಥಿ 'ರೆಡ್‌ಕಿಂಗ್' ಎಂದು ಅವನ ಹೆಸರನ್ನು ಇಂಗ್ಲೀಷಿಗೆ ಅನುವಾದಿಸಿ ಕೊಟ್ಟನಂತೆ. ಇಷ್ಟು ನಿಮಗೆ ತಿಳಿಯಲಿಲ್ಲವಲ್ಲ, ನೀವು ಎಂಥ ವಿದ್ಯಾವಂತರು ಎಂದು ಹಂಗಿಸುವ ಭಂಗಿಯಲ್ಲಿ ಮಾತನಾಡಿದ. ಅಂತೂ ಅವನಿಗೆ 'ರೆಡ್‌ಕಿಂಗ್' ಎಂಬ ಹೆಸರು ತುಂಬ ಪಸಂದ್ ಆಯಿತು. ಅಷ್ಟೇ ಅಲ್ಲ, ಈಚೆಗೆ ನಾನು ಹಾಗೆ ಕರೆದರೆ ಎಲ್ಲರಿಗಿಂತಲೂ ಮುಂಚೆ ನನ್ನನ್ನು ಕರೆದು ಕ್ಷೌರ ಮಾಡುತ್ತಾನೆ.

ಇನ್ನು ನಮ್ಮ ಅಗಸನ ಮಾತೇ ಬೇರೆ! ಅವನಿಗೂ ಅಗಸ, ಧೋಬಿ ಮೊದಲಾದ ಶಬ್ದಗಳು ಇಷ್ಟವಿಲ್ಲ. 'ವಾಷರ್‌ಮನ್' ಎಂದರೆ ನಮ್ಮ ಅಗಸ ಪುಟ್ಟಸ್ವಾಮಿ ಮುಖ ಸಿಂಡರಿಸುತ್ತ ಹೇಳಿದ (ಅವನು ಎಸ್ಸೆಲ್ಸಿ ಫೇಲಾದವನು) ಈ 'ವಾಷರ್‌ಮನ್'. 'ಫಿಶರ್‌ಮನ್' ಹಳೆಯದಾಯಿತು. ಹೊಸದೇನಾದರೂ ಇದ್ದರೆ ಹೇಳಿ ಸಾರ್. ಯಾವುದೂ ತೋಚದೆ ನಾನು ಸುಮ್ಮನಿದ್ದಾಗ ಅವನೇ ಹೇಳಿದ. 'ಸರ್. ನೀವು ನನಗೆ ನಿಮ್ಮ ಬಟ್ಟೆಗಳನ್ನು ವಾಷ್‌ಗೆ ಎಂದೂ ಕೊಟ್ಟವರಲ್ಲ. ಬರೀ ಐರನ್‌ಗೆ ಕೊಡುತ್ತೀರಿ. ಅದ್ದರಿಂದ ನಾನು 'ಐರನ್ ಮ್ಯಾನ್' ಎಂದಿಟ್ಟುಕೊಂಡರೆ ಹೇಗಿರುತ್ತದೆ?'

'ಛೇಷ್. ಆದರೆ ನಮ್ಮಲ್ಲಿ ಐರನ್ ಮ್ಯಾನ್ ಎಂದರೆ ಸರದಾರ್ ಪಟೇಲ್ ಒಬ್ಬರೆ! ಅವರ ಸಮ ನೀನು ಎನ್ನುತ್ತೀಯಾ?'

'ಏನಾದ್ರೂ ಆಗಲಿ ಸಾರ್. ನಾನು ಐರನ್ ಮಾಡುತ್ತಿರುವುದು ಸುಳ್ಳಲ್ಲವಲ್ಲ! ಹಾಗಿರುವಾಗ 'ಐರನ್ ಮ್ಯಾನ್' ಎಂದು ಕರೆಯುವುದರಲ್ಲಿ ತಪ್ಪೇನು?'

ಅಂತೂ ಅಂದಿನಿಂದ ಅವನು ನಮ್ಮ 'ಐರನ್ ಮ್ಯಾನ್.' ಬರಿಯ ಪುಟ್ಟಸ್ವಾಮಿ ಎಂದು ಕರೆದರೆ ಬಟ್ಟೆ ಹಿಂದಿರುಗಿಸಲು ಅವನು ತುಂಬ ಸತಾಯಿಸುತ್ತಾನೆ. ಅದೇ 'ಐರನ್ ಮ್ಯಾನ್' ಎಂದು ಕರೆದರೆ. ಕೂಡಲೇ ಐರನ್ ಮಾಡಿ ನಮ್ಮ ಮನೆಗೇ ತಂದು ಕೊಟ್ಟು, ಬಿಡುತ್ತಾನೆ. ಈ ಸೌಲಭ್ಯವನ್ನು ನಾನು ಕಳೆದುಕೊಳ್ಳಲು ಸಿದ್ಧನಿಲ್ಲ.

ನಮ್ಮ ವಿಭಾಗದ ಕ್ಲರ್ಕ್ ನರಸಿಂಹನ ಇಂಗ್ಲೀಷ್ ಪ್ರೇಮ ಇವರೆಲ್ಲರನ್ನೂ ಮೀರಿಸಿದುದು. 'ಗುಮಾಸ್ತ' ಎಂದು ಕರೆದರೆ ಅವನು ಕೆಂಡಮುಂಡೆ ಆಗಿ ಬಿಡುತ್ತಾನೆ. ಕ್ಲರ್ಕ್ ಎಂದು ಕರೆದರೆ ಅವನು ಪ್ರಸನ್ನವದನನಾಗುತ್ತಾನೆ. ತಮ್ಮ ಕೋಮಿನ ಧುರೀಣರ

ಮಾತು ಕೇಳಿ ತನ್ನ ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಿ ಅವರ ಕತ್ತು ಕುಯ್ದು ಎಂದು ಇಂದೂ ಅವನು ತಮ್ಮ ಧುರೀಣರಿಗೆ ಹಿಡಿ ಹಿಡಿ ಶಾಪ ಹಾಕುತ್ತಾನೆ.

ಅವನ ಮಕ್ಕಳು ಎಸ್ಸೆಸಲ್ಸಿ ಮುಗಿಸದುದು ಕನ್ನಡ ಮಾಧ್ಯಮದಲ್ಲಿ ಓದಿದ್ದಕ್ಕಾಗಿ ಅಲ್ಲ ಎಂದು ಎಷ್ಟು ಹೇಳಿದರೂ ಅವನು ಒಪ್ಪಲು ಸಿದ್ಧನಿಲ್ಲ. ತಾನು ಎಸ್ಸೆಸಲ್ಸಿ ಮುಗಿಸಿದ್ದು ಇಂಗ್ಲೀಷ್ ಮೀಡಿಯಂನಲ್ಲಿ ಓದಿದ್ದಕ್ಕಾಗಿ ಎಂಬ ಅವನ ದೃಢ ನಂಬಿಕೆಯನ್ನು ಯಾರೂ ಅಲುಗಿಸಲಾರರು.

ಈ ಕಾರಣದಿಂದಾಗಿ ಅವನು ತನ್ನ ಇಬ್ಬರು ಹೆಣ್ಣು ಮಕ್ಕಳಿಗೂ ಇಂಗ್ಲೀಷ್ ಮೀಡಿಯಂ ಕೊಡಿಸಿ. ತನ್ನ ಮಾತೃಭಾಷೆ ತೆಲುಗು ಎಂದು ಸುಳ್ಳು ಹೇಳಿ ಅವರನ್ನು ಕಾನ್ವೆಂಟಿಗೆ ಸೇರಿಸಿದ್ದಾನೆ. ಅದೇನು ವಿಚಿತ್ರ ಸಂಯೋಗವ್ರೋ ಏನೋ ಕಾಣೆ. ಆ ಇಬ್ಬರು ಹುಡುಗಿಯರು ಬುದ್ಧಿವಂತೆಯರು. ಒಳ್ಳೆಯ ಅಂಕಗಳನ್ನು ಗಳಿಸುತ್ತಿದ್ದಾರೆ. ಅದರ ಶ್ರೇಯಸ್ಸನ್ನು ಅವನು ಇಂಗ್ಲೀಷ್ ಮೀಡಿಯಂಗೆ ಕೊಡುತ್ತಾನೆ. ಅಷ್ಟೇ ಅಲ್ಲ. ಅವನು ಮನೆಯಲ್ಲಿ ಸಾಧ್ಯವಾದಷ್ಟು ಇಂಗ್ಲೀಷ್ ವಾತಾವರಣವನ್ನು ನಿರ್ಮಿಸಿದ್ದಾನೆ. 'ಮಮ್ಮಿ ಡ್ಯಾಡಿ' ಎಂದು ಕರೆಯುವಂತೆ ಮಕ್ಕಳಿಗೆ ತಾಕೀತು ಮಾಡಿದ್ದಾನೆ. ಒಮ್ಮೆ ನಾನು 'ನಿಮ್ಮ ಹೆಂಡತಿಯ ಆರೋಗ್ಯ ಹೇಗಿದೆ ?' ಎಂದು ಕೇಳಿದಾಗ. ಅವನಿಂದ ಛೀಮಾರಿ ಹಾಕಿಸಿಕೊಂಡೆ. ಹೇಳಿದ. "ಯಾವ ಸೀಮೆ ಮಾತಾಡ್ತೀರಿ ಸರ್. ನಿಮ್ಮ 'ಮಿಸೆಸ್' ಎನ್ನಿ. ಹೆಂಡತಿ ಎನ್ನಬೇಡಿ. ಪ್ರೊಫೆಸರ್ ಆದ ನಿಮಗೆ ನಾಗರಿಕತೆಯ ಮೊದಲ ಪಾಠ ಹೇಳಿಕೊಡಬೇಕಾಗಿ ಬಂದಿರುವುದು ನನ್ನ ದೌರ್ಭಾಗ್ಯ."

ಒಮ್ಮೆ ನರಸಿಂಹ ರಜಾ ಹಾಕದೆ ಎರಡು ಮೂರು ದಿವಸ ಚಕ್ಕರ್ ಹಾಕಿ ಆಮೇಲೆ ಬಂದ. 'ಯಾಕ್ರೀ ಹೀಗೆ ಮಾಡಿದಿರಿ ?' ಎಂದು ಕೇಳಿದೆ. ' Sir, I had a head going business ' ಎಂದ. ನನಗೆ ಅರ್ಥವಾಗದೆ ಅವನನ್ನೇ ಕೇಳಿದೆ. ಆವನು ಹೇಳಿದ: 'ತಲೆ ಹೋಗುವ ಕೆಲಸ. ಸರ್. ನನ್ನ ತಂಗಿಯ್ಹ ಮದುವೆ ನಿಂತು ಹೋಗುವುದರಲ್ಲಿತ್ತು. ಅದನ್ನು ಸರಿ ಮಾಡಿದೆ.'

ಅಂತೂ ಅವನ ಈ ಇಂಗ್ಲೀಷ್ ಪ್ರೇಮ ನನಗೆ ಮನರಂಜನೆಯನ್ನು ಒದಗಿಸಿದ್ದೇ ಅಲ್ಲ. ಕೆಲವು ವೇಳೆ ನನ್ನ ಸಹಾಯಕ್ಕೂ ಬರುತ್ತಿತ್ತು. ಏನಾದರೂ ಹೆಚ್ಚು ಕೆಲಸ ಬಿದ್ದರೆ ಅವನ ಈ ದೌರ್ಬಲ್ಯವನ್ನು ನಾನು ಉಪಯೋಗಿಸಿಕೊಳ್ಳುತ್ತಿದ್ದೆ. ಇಂಗ್ಲೀಷ್‌ನಲ್ಲಿ ಮಾತನಾಡಿಸಿದರೆ ಅವನು ಹೆಚ್ಚು ಆತ್ಮೀಯನಾಗುತ್ತಿದ್ದ. ಕನ್ನಡದಲ್ಲಿ ಮಾತನಾಡಿಸಿದರೆ ಕೆರಳುತ್ತಿದ್ದ. ಒಮ್ಮೆ ಅವನನ್ನು 'ನಿಮ್ಮ ಮಗಳು ಹೇಗೆ ಓದುತ್ತಿದ್ದಾಳೆ ?' ಎಂದು ಕೇಳಿದೆ. ಅದಕ್ಕೆ ಅವನು ನನ್ನನ್ನು ತಿದ್ದುತ್ತ ಹೇಳಿದ. 'ನನ್ನ ಡಾಟರ್ರೇ. ಸರ್. ಚೆನ್ನಾಗಿ ಓದುತ್ತಿದ್ದಾಳೆ. ಕ್ಲಾಸಿಗೇ ಫಸ್ಟ್.'

ಒಮ್ಮೆ ಏನೋ ಹೆಚ್ಚಿಗೆ ಕೆಲಸ ಮಾಡಿಸಲು ಕಾಫೀ ತಿಂಡಿ ತರಿಸಿ ಕೊಟ್ಟೆ. ಅವನೊಡನೆ ಆತ್ಮೀಯವಾಗಿ ಎಂದರೆ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದೆ. ಅವನೂ ಚಳಿ ಬಿಟ್ಟು ಮಾತನಾಡುತ್ತ ಹೇಳಿದ. 'ನೀವು ಏನೇ ಹೇಳಿ ಸರ್. ಇಂಗ್ಲೀಷ್ ಸಮ ಬೇರೆ ಭಾಷೆ ಇಲ್ಲ. ಆ ಜನದಂಥ ಜನ ಇಲ್ಲ. ನಮ್ಮ ದೇಶದ ಇಂದಿನ ಸಮಸ್ಯೆಗಳಿಗೆಲ್ಲ ಕಾರಣ ಬ್ರಿಟೀಷರು ನಮ್ಮ ದೇಶವನ್ನು ಬಿಟ್ಟು ಹೋದದ್ದು. ಆ ಶಿಸ್ತೆಲ್ಲಿ. ಈ ಅಶಿಸ್ತೆಲ್ಲಿ ! ಈ ಭಾಗ್ಯಕ್ಕೆ ನಮಗೆ ಯಾಕೆ ಸ್ವತಂತ್ರ ಬರಬೇಕಿತ್ತು ?'

ಇಂಗ್ಲೀಷಿನ ಬಗೆಗೇ ಮತ್ತೆ ಒಂದು ಹೇಳಿದ. 'ಸರ್. ನೀವೇ ಹೇಳಿ ಲವ್ ಮಾಡೋಕ್ಕೆ ಇಂಗ್ಲೀಷ್ ಸಮ ಬೇರೆ ಭಾಷೆ ಯಾವುದಿದೆ ಅಂತ ?'

'ಯಾಕ್ರೀ. ಕನ್ನಡದಲ್ಲಿ ಲವ್ ಮಾಡೋಕ್ಕಾಗುವುದಿಲ್ಲವೇನ್ರಿ ?'

‘ಇಲ್ಲ, ನೀವೇ ಹೇಳಿ ಸರ್. ‘ಡಾರ್ಲಿಂಗ್’ ಎಂದರೆ ಬರೋ ಮಜ. ಪ್ರಿಯೆ. ನಲ್ಲೆ. ಜಿಲ್ಲೆ. ಜಲ್ಲೆ ಅಂದರೆ ಬರುತ್ತದೆಯೋ ಸರ್ ?’

‘ಭೇಷ್. ಮೆಚ್ಚಿದೆ ನಿಮ್ಮ ಭಾಷಾಪ್ರಜ್ಞೆಯನ್ನು.’

ಅದರಿಂದ ಹುಮ್ಮಸ್ಸುಗೊಂಡು ಅವನು ಹೇಳಿದ. ‘ಸರ್, ಅದರಿಂದ ಇನ್ನೂ ಒಂದು advantage ಇದೆ ಸರ್. ನಾನು ನನ್ನ ಮದುವೆಗಾಗಿ ಹೆಣ್ಣು ನೋಡಹೋದೆ ಸರ್, ಹುಡುಗಿ ಚೆನ್ನಾಗಿದ್ದಳು. ಚೆನ್ನಾಗಿ ಹಾಡಿದಳು. ಅವಳನ್ನು ಮಾತನಾಡಿಸಬೇಕು ಎನ್ನಿಸಿತು. ಆಗ ನನಗೊಂದು ಸಮಸ್ಯೆ ಎದುರಾಯಿತು.’

‘ಏನಪ್ಪಾ ಅದು ?’

‘ಅವಳನ್ನು ಹೇಗೆ ಮಾತನಾಡಿಸುವುದು ಎಂದು. ‘ನೀನು’ ಎಂದರೆ ಆಕೆಯನ್ನು ನಾನಿನ್ನೂ ಮದುವೆಯಾಗಿಲ್ಲ. ತಪ್ಪು ತಿಳಿದುಕೊಂಡಾಳು. ‘ನೀವು’ ಎಂದರೆ ನನ್ನ ಘನತೆಗೆ ಕುಂದು. ಈ ಉಭಯ ಸಂಕಟದಲ್ಲಿರುವಾಗ ಮಿಂಚು ಹೊಳೆದಂತಾಯಿತು. ಆ ದೇವರು ದೊಡ್ಡವನು. ಅವನು ಒಂದು ಉಪಾಯ ತೋರಿಸಿಕೊಟ್ಟ. ‘ನೀನೂ’ ಬೇಡ. ‘ನೀವೂ’ ಬೇಡ. ‘ You ’ ಎಂದು ಬಿಟ್ಟೆ. ‘ You sings well ’ ಎಂದೆ.

ನಾನು ಕೇಳಿದೆ, ‘ಅಯ್ಯಾ. ಆಕೆಗೆ ಇಂಗ್ಲೀಷ್ ಬಂದಿದ್ದರೆ ನಿನ್ನ ಇಂಗ್ಲೀಷಿನ ಬಂಡವಾಳ ಬಯಲಾಗುತ್ತಿತ್ತಲ್ಲಯ್ಯ ?’

‘ಹೋಗಿ ಸರ್. ನೀವು ಎಂಥ ಸೀರಿಯಸ್ ಪ್ರಾಬ್ಲಮ್ಮನ್ನೂ ತಮಾಷೆ ಮಾಡಿ ತೇಲಿಸಿ ಬಿಡುತ್ತೀರಿ ?’ ‘ಅದೇನಾದರೂ ಆಗಲಿ. ನನ್ನ ಇಂಗ್ಲೀಷಿಗೆ ಮಾರು ಹೋಗಿ ಅವಳು ನನ್ನನ್ನು ಒಪ್ಪಿಕೊಂಡು ಬಿಟ್ಟಳು ಸರ್. ಅದಕ್ಕೆ ನಮ್ಮ ಇಂಗ್ಲೀಷಿನ ಶಬ್ದ “ You ”, ಅದಕ್ಕೆ ಸರಿಸಮನಾದ ಶಬ್ದ ನಮ್ಮ ದರಿದ್ರ ಕನ್ನಡದಲ್ಲಿದೆಯೋ ನೀವೇ ಹೇಳಿ ಸರ್ !’

ಅಂತೂ ಆತನಿಗೆ ಕಂಕಣ ಕೂಡಿಸಿ ಕೊಟ್ಟ ಇಂಗ್ಲೀಷ್. ಅದರಲ್ಲೂ ‘ You ’ ವನ್ನು ಹೊಗಳಿ ಅಂದು ನನ್ನ ಕೆಲಸವನ್ನು ಚೆನ್ನಾಗಿ ಮಾಡಿಸಿಕೊಂಡೆ.

ಹೀಗೆ ನಮ್ಮ ನರಸಿಂಹನ ಜೊತೆ ಮಾತನಾಡುವುದೆಂದರೆ ನನಗೆ ಎಲ್ಲಿಲ್ಲದ ಮೋಜು. ಒಮ್ಮೆ ಆತ ವಿಭಾಗಕ್ಕೆ ಬರದೆ ರಜಾ ಚೀಟಿ ಕಳಿಸಿದ. ಅದರಲ್ಲಿ ಆತ ತಾನು ಫಂಡಮೆಂಟಲ್ ಡಿಸೀಸ್‌ನಿಂದ ನರಳುತ್ತಿರುವುದರಿಂದ ಮೂರು ದಿವಸ ರಜೆ ಬೇಕೆಂದು ಕೇಳಿದ್ದ. ನಾನು ಈ ಕಾಯಿಲೆಯ ಹೆಸರೇ ಕೇಳಿರಲಿಲ್ಲ. ನನ್ನ ಮಗಳು. ಅಳಿಯ ಇಬ್ಬರೂ ಡಾಕ್ಟರು. ಅವರನ್ನು ಕೇಳಿದೆ. ಅವರು ತಾವು ಆ ಕಾಯಿಲೆಯ ಹೆಸರೇ ಕೇಳಿಲ್ಲವೆಂದರು.

ಇವನೇನೋ ಸುಳ್ಳು ಹೇಳುತ್ತಿದ್ದಾನೆ. ಇರಲಿ. ಇವನಿಗೆ ಬುದ್ಧಿ ಕಲಿಸೋಣವೆಂದು ಅವನು ರಜೆಯಿಂದ ಹಿಂದಿರುಗುವುದನ್ನೇ ಕಾಯುತ್ತಿದ್ದೆ. ಅವನು ಬಂದಾಗ ಕೇಳಿದೆ. ಅವನು ಹೇಳಿದ. ‘ಏನು ಸಾರ್. ಇಷ್ಟು ದೊಡ್ಡ ಪ್ರೊಫೆಸರ್ ಆಗಿ ಇಷ್ಟು ಸಣ್ಣ ಶಬ್ದದ ಅರ್ಥ ನಿಮಗೆ ಗೊತ್ತಿಲ್ಲವಲ್ಲ ! ಫಂಡಮೆಂಟಲ್ ಡಿಸೀಸ್ ಎಂದರೆ ಮೂಲವ್ಯಾಧಿಯಲ್ಲವೆ ಸರ್ !’

ನಿಜ. ನಮ್ಮ ನರಸಿಂಹನಿಗೇ ಅಲ್ಲ. ನಮ್ಮ ಇಡೀ ರಾಷ್ಟ್ರಕ್ಕೆ ಈ ಫಂಡಮೆಂಟಲ್ ಡಿಸೀಸ್ ಬಡಿದಿದೆ ಅನ್ನಿಸಿತು.

ಮ. ಸು. ಕೃಷ್ಣಮೂರ್ತಿ
೭೧೮. ೧೬ ನೇ ಮೇನ್. ಸರಸ್ವತೀಪುರಂ. ಮೈಸೂರು - ೫೭೦ ೦೦೯

ಖಾಸಗೀಕರಣ ಮತ್ತು ಅವಕಾಶವಂಚಿತರು

ಮೂಡ್ನಾಕೂಡು ಚಿನ್ನಸ್ವಾಮಿ

'ಜಾಗತೀಕರಣ' ಇವತ್ತಿನ ಎಲ್ಲರ ಬಾಯಿಯ ಚಿಲ್ಲದ ಮಾತು. ತರುಣ ಪೀಳಿಗೆಯಂತೂ Globalisation ಎನ್ನುವ ಮಂತ್ರವಾಕ್ಯವನ್ನು ಜಪಿಸುತ್ತಾ ಅಮೆರಿಕಾದ ಕನಸು ಕಾಣುತ್ತಾ ತಮ್ಮ ವಿದ್ಯಾರ್ಹತೆ, ಅಂದರೆ ಡಿಗ್ರಿ, ಡಿಪ್ಲೋಮಾಗಳನ್ನು ಪಡೆದುಕೊಳ್ಳುತ್ತಿದ್ದಾರೆ. 'ಉದಾರೀಕರಣ' ಕೆಲವು ದಶಕಗಳ ಹಿಂದಷ್ಟೆ ಚಾಲ್ತಿಗೆ ಬಂತು. ಬಹುಶಃ ಡಂಕೆಲ್ ಪ್ರಸ್ತಾವ ಮತ್ತು ಗ್ಯಾಟ್ ಒಪ್ಪಂದಗಳಿಂದ ಪ್ರಾರಂಭವಾಗಿರಬೇಕು. 'ಖಾಸಗೀಕರಣ' ಶತಮಾನಗಳಷ್ಟು ಹಳೆಯದು. ಸಮಾಜವಾದದ ಪರಿಕಲ್ಪನೆ ಖಾಸಗೀಕರಣವೆಂಬ ಹೆಬ್ಬಂಡೆಯನ್ನು ಸಿಡಿಸುವ ಡೈನಮೈಟ್‌ನಂತೆ ಬಂದೆರಗಿತು. ಬಂಡವಾಳವಾದದ ಮುಖ್ಯ ನೆಲೆ ಖಾಸಗೀಕರಣ. ಉತ್ಪಾದನೆಯ ಧ್ರುವೀಕರಣವಾಗುವುದರಿಂದ ಬಂಡವಾಳವಾದ ಶೋಷಣೆಯನ್ನು ಒಡಲೊಳಗಿಟ್ಟುಕೊಂಡಿದೆ. ಇನ್ನೊಂದು ಅರ್ಥದಲ್ಲಿ ಶೋಷಿತರ ಬಂಡಾಯವೇ ಸಮಾಜವಾದದ ಪರಿಕಲ್ಪನೆ. ಆದ್ದರಿಂದ ಖಾಸಗೀಕರಣ ಸಮಾಜವಾದದ ಬೀಜ ಬಿತ್ತಿದ ಹೆಗೆಲ್‌ನಷ್ಟು ಹಳೆಯದೆನ್ನಬಹುದು.

ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಅವಕಾಶವಂಚಿತರಿದ್ದರು. ಈಗಲೂ ಇದ್ದಾರೆ. ಇವತ್ತಿನ ಶ್ರೀಮಂತ ರಾಷ್ಟ್ರವಾದ ಅಮೆರಿಕೆಯ ಶಿಕಾಗೊದಲ್ಲಿ ಸಮಾಜವಾದದ ಮೊದಲ ಗುಡುಗು ಕೇಳಿಸಿತು. ಅಂದಿನ ಔದ್ಯಮಿಕ ರಾಷ್ಟ್ರವೆನಿಸಿದ್ದ ಇಂಗ್ಲೆಂಡಿನಲ್ಲಿ ಇದರ ಪ್ರತಿಧ್ವನಿ ಕೇಳಿಸಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಅಷ್ಟೇನು ಶ್ರೀಮಂತವಲ್ಲದ ರಶಿಯಾದಲ್ಲಿ ಆ ಕ್ರಾಂತಿಯ ಕಹಳೆ ಮೊಳಗಿತು. ಬಡ ದೇಶಗಳಲ್ಲಿ ಶೋಷಣೆ ಅಪಾಯಕಾರಿ ಮಟ್ಟದಲ್ಲಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಖಾಸಗೀಕರಣ ಅರ್ಥವಾಗಬೇಕಾದರೆ ಸಮಾಜವಾದವನ್ನು ತಿಳಿದುಕೊಳ್ಳಬೇಕಾದ ಆವಶ್ಯಕತೆಯಿದೆ. 'ಪ್ರತಿಯೊಬ್ಬನಿಂದಲೂ ಅವನ ಸಾಮರ್ಥ್ಯದನುಸಾರ. ಪ್ರತಿಯೊಬ್ಬನಿಗೂ ಅವನ ಆವಶ್ಯಕತೆಗನುಸಾರ' ಎಂಬುದು ಕಾರ್ಲ್ ಮಾರ್ಕ್ಸ್‌ನ ತತ್ವ. ಅಂದರೆ ಉತ್ಪಾದನೆಯ ಸಮಾಜ ಹಂಚಿಕೆಯಾಗಬೇಕು ಎಂಬುದು ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ಮಂಡಿಸಿದ ಸಿದ್ಧಾಂತದ ತಿರುಳು. ಉತ್ಪಾದನೆ ಧ್ರುವೀಕರಣಗೊಂಡು ಒಬ್ಬನ ಬಳಿ ಉಳಿಯುವ ಮೌಲ್ಯವನ್ನೆ ಮಾರ್ಕ್ಸ್ surplus value, ಮಿಗುಮೌಲ್ಯವೆಂದು ಕರೆದ. ಅದರಲ್ಲಿ ಕಾರ್ಮಿಕನ ಬೆವರಿರುವುದನ್ನು ಅವನು ಸರಿಯಾಗಿಯೆ ಗುರುತಿಸಿದ. 'ಪ್ರತಿಯೊಬ್ಬನಿಗೂ ಅವನ ಆವಶ್ಯಕತೆಗನುಸಾರ' ಎಂಬುದು ಧರ್ಮಸೂಕ್ಷ್ಮದ ಮಾತು. ಶ್ರಮದ ಪೂರ್ಣ ಬೆಲೆಯನ್ನು ಕಾರ್ಮಿಕನ ಕೈಗೆ ಹಾಕದೆ ಅವನನ್ನು ಶೋಷಿಸುವುದರಿಂದ 'ಮಿಗುವ ಮೌಲ್ಯ' ದೊರೆಯುತ್ತದೆ. ಆದ್ದರಿಂದ ಸಾಮಾಜಿಕ ಉಳಿತಾಯ ಶೋಷಣೆಯಿಂದ ದೊರೆತದ್ದು ಎಂಬುದು ಅವನ ವಾದ. ಅದನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಿದ್ದರೆ, ಮಾರ್ಕ್ಸ್‌ವಾದ ಒಂದು ಧರ್ಮದಂತೆ ಬೆಳೆಯುತ್ತಿತ್ತು. ಅದನ್ನು ಲೆನಿನ್ 'ನಿಷ್ಪ್ರಯೋಜಕ ಶೋಷಣೆ' ಎಂದು ಕರೆದು ಈ ಸೂತ್ರವಾಕ್ಯವನ್ನು ತಿಳಿಗೊಳಿಸಿಬಿಟ್ಟ. 'ಪ್ರತಿಯೊಬ್ಬನಿಂದಲೂ ಅತನ ಸಾಮರ್ಥ್ಯಾನುಸಾರ. ಪ್ರತಿಯೊಬ್ಬನಿಗೂ ಅತನ ಕಾರ್ಯಾನುಸಾರ' ಎಂಬುದು ಲೆನಿನ್ ಸಿದ್ಧಾಂತವಾಯಿತು. ಸಾಮರ್ಥ್ಯವಿಲ್ಲದೆ ಕಾರ್ಯ ಮಾಡದೆ ಇದ್ದವರು ಬದುಕಲು ಬೇಕಾದ ಮೂಲಭೂತ ಆವಶ್ಯಕತೆಗಳಿಂದ ವಂಚಿತರಾದರು. ಇಲ್ಲಿ ಧರ್ಮಸೂಕ್ಷ್ಮ ಮರೆಯಾಗಿ ಭೌತಿಕತ ಮೆರೆಯಿತು. ಹೀಗೆ ಸಮಾಜವಾದದ ಬೃಹತ್ ಛತ್ರಿಯ ಅಡಿಯಲ್ಲಿಯೂ ಅವಕಾಶವಂಚಿತರು ಇರುವುದು ಸಾಧ್ಯವೂ, ಅನಿವಾರ್ಯವೂ ಆಯಿತು. ಆದ್ದರಿಂದ

ಬಂಡವಾಳವಾದವಡಿ ಅವಕಾಶವಂಚಿತರು ಇರುವುದು ಅಷ್ಟೇನು ಪಾಪವೆಂದು ಕಂಡುಬರಲಿಲ್ಲ. ಇದರ ಪರಿಣಾಮವೇ 'ಗೊರ್ಬಚೆವ್ ಪರಿಣಾಮ'.

ಭಾರತ ಒಂದು ಬೃಹತ್ ಪ್ರಜಾಪ್ರಭುತ್ವ. ೬೦ ರ ದಶಕದಲ್ಲಿ ಬ್ಯಾಂಕ್ ರಾಷ್ಟ್ರೀಕರಣದೊಂದಿಗೆ. ಖಾಸಗೀಕರಣದ ವಿರುದ್ಧ ಒಂದು ದೊಡ್ಡ ಸಮರವನ್ನ ಸಾರಿದರು ಅಂದಿನ ಪ್ರಧಾನಿ ಇಂದಿರಾ ಗಾಂಧಿ. ಇದರಿಂದ ಬಡವರಿಗೆ. ಅವಕಾಶವಂಚಿತರಿಗೆ ಪ್ರಯೋಜನವಾಗುತ್ತದೆಂಬುದು ಅವರ ಕನಸಾಗಿತ್ತು. ಆದರೆ ಉತ್ಪಾದನೆ ಕುಂಠಿತವಾಯಿತು. ಸುಮಾರು ೩೦-೩೫ ವರ್ಷಗಳ ನಂತರ ಸರ್ಕಾರದ ತತ್ವನಿರೂಪಣೆ ಅದರ ವಿರುದ್ಧ ದಿಕ್ಕಿನಲ್ಲಿ ಸಾಗಿದೆ. ಇದರಿಂದ ಅವಕಾಶವಂಚಿತರು ಹೆಚ್ಚುವುದರಲ್ಲಿ. ಸಾಮಾಜಿಕ ಉಳಿತಾಯದ ಧ್ರುವೀಕರಣವಾಗುವುದರಲ್ಲಿ ಸಂಶಯವಿಲ್ಲ. ಉತ್ಪಾದನೆಯಲ್ಲಿ ಹೆಚ್ಚಳ ಕಾಣಬಹುದು. ನೀತಾ ಅಂಬಾನಿಯಂಥವರೂ ಸುಧಾ ಮೂರ್ತಿಯಂಥವರೂ ಹೆಚ್ಚುತ್ತಾರೆ. ಕೋಟಿ ಕಾಣಿಕೆಗಳನ್ನು ಅವಕಾಶ ವಂಚಿತರು ಬಾಯಿಬಿಟ್ಟುಕೊಂಡು ಆತುಕೊಳ್ಳುತ್ತಾರೆ.

'ಸಂಸದೀಯ ಪ್ರಜಾಪ್ರಭುತ್ವದಲ್ಲಿನ ಮೂಲಭೂತ ದೋಷವಿರುವುದು ಉದಾರವಾದದಲ್ಲಿಯ ತಾತ್ವಿಕ ಹಿನ್ನೆಲೆಗೂ ರಾಜಕೀಯ ಆಚರಣೆಗೂ ಇದ್ದ ವಿರೋಧದಿಂದ' ಎಂದು ಎಂ. ಎನ್. ರಾಯ್ ಅಭಿಪ್ರಾಯಪಡುತ್ತಾರೆ. ಅಂದರೆ ಭಾರತದಲ್ಲಿ ಪ್ರಜಾಪ್ರಭುತ್ವವೆಂಬ ಬಂಡಿಗೆ, ಸಮಾಜವಾದದ ಜೋಡೆತ್ತುಗಳನ್ನು ಕಟ್ಟಿ ಓಡಿಸಲಾಗುತ್ತಿತ್ತು. ಬಂಡಿಗೂ ಎತ್ತುಗಳಿಗೂ ಹೊಂದಾಣಿಕೆಯಾಗದೆ ದಾರಿ ಸಾಗುತ್ತಿರಲಿಲ್ಲ. ತಟಸ್ಥ ಸ್ಥಿತಿ ಕಾಣಿಸುತ್ತಿತ್ತು. ಇದರಿಂದ ಆರ್ಥಿಕ ಸ್ಥಗಿತತೆಯನ್ನು ಗುರುತಿಸಬಹುದು. ೧೯೬೭ ರಲ್ಲಿ ಇಬ್ಬರು ಅರ್ಥಶಾಸ್ತ್ರಜ್ಞರು ಭಾರತದ ಆರ್ಥಿಕ ಬೆಳವಣಿಗೆಯನ್ನು ಅತ್ಯಂತ ಮಂದಗತಿಯದೆಂದು ಗುರುತಿಸಿದರು. ಕಳೆದ ಐವತ್ತು ವರ್ಷಗಳಲ್ಲಿ ಐದು ಬಾರಿ ವಿದೇಶ ವಿನಿಮಯದ ಸಂಕಟವನ್ನು ಎದುರಿಸಬೇಕಾಗಿ ಬಂದುದು (೧೯೫೭. ೬೬. ೭೪. ೮೦. ೯೦) ಇದಕ್ಕೆ ಸಾಕ್ಷಿಯಾಗಿದೆ ಎನ್ನುತ್ತಾರೆ ಅವರು (Hindustan Times). ಈ ಹಿನ್ನೆಲೆಯಲ್ಲಿ ದೇಶೀಯ ಮತ್ತು ಅಂತರ್‌ರಾಷ್ಟ್ರೀಯ ಬೂರ್ಜ್ವಾ ಶಕ್ತಿಗಳು. ದೇಶದ ಆರ್ಥಿಕ ಬೆಳವಣಿಗೆಗೆ ಖಾಸಗೀಕರಣ ಅಗತ್ಯವೆಂದು ಒತ್ತಿಹೇಳಬಹುದು.

ಆದರೆ ಮನು ಮತ್ತು ಕೌಟಿಲ್ಯನ ಹಿನ್ನೆಲೆಯಿರುವ ಭಾರತದ ಸಂದರ್ಭದಲ್ಲಿ ಖಾಸಗೀಕರಣದ ಪರಿಣಾಮಗಳನ್ನು ವಿಶೇಷ ಮಸೂರದ ಮೂಲಕ ನೋಡಬೇಕಾಗುತ್ತದೆ. ಆರ್ಥಿಕವಾಗಿ ಬಡವನಾದ ಒಬ್ಬ ವ್ಯಕ್ತಿ ಸಾಮಾಜಿಕವಾಗಿಯೂ ಸಾಂಸ್ಕೃತಿಕವಾಗಿಯೂ ಬಡವನಾಗಿಬಿಡುತ್ತಾನೆ. ತನ್ನ ನಾಲಗೆಯನ್ನು ಕಳೆದುಕೊಳ್ಳುವಷ್ಟು ಅಪಾಯಕಾರಿ ಸ್ಥಿತಿಯಲ್ಲಿ ಅವನಿರುತ್ತಾನೆ. ಜಾತಿಪದ್ಧತಿಯಿಂದ ಜರ್ಝರಿತವಾಗಿರುವ ಈ ದೇಶದಲ್ಲಿ ಆಳುವ ವರ್ಗವೆಂದರೆ ಮೇಲ್ಜಾತಿಯ ಅಲ್ಪಸಂಖ್ಯಾತ ವರ್ಗವೇ ಆಗಿದೆ. ಅದು ಬಂಡವಾಳಶಾಹಿಯಷ್ಟೇ ಅಲ್ಲ ಸರಂಜಾಮಶಾಹಿ(Feudalist)ಯೂ ಆಗಿದೆ. ಇಂಥವರ ಕೈಯಲ್ಲಿ ಬಂಡವಾಳವಿರುವುದೆಂದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಶೋಷಣೆಯ ಮುಂದುವರಿಕೆ ಕಟ್ಟಿಟ್ಟ ಬುತ್ತಿ.

ಇದರ ಫಲವೆ ೬೦ರ ದಶಕದಲ್ಲಿ ಕೇರಳದ ಅಲೆಪ್ಪಿ. ತಂಜಾವೂರುಗಳಲ್ಲಿ ನಡೆದ ದಲಿತರ ಮೇಲಿನ ಹಲ್ಲೆ. ೭೦ರ ಬೆಲ್ಚಿ. ಗೋವಿಂದಪುರಗಳ ವರ್ಗಹೋರಾಟ. ೮೦ರ ರೈತ ಚಳವಳಿ ಮತ್ತು ೯೦ರ ಕಂಬಾಲಪಲ್ಲಿಯ ನರಮೇಧ. ಹುಂಗರಹಳ್ಳಿಯಂಥ ಬರ್ಬರ ಶೋಷಣೆಯ ಘಟನೆಗಳು ವರದಿಯಾಗಿರುವುದು. "Chandalas shall live beyond burial ground" (Arthashastra V56 N55) ಎಂದು ಕೌಟಿಲ್ಯ ಹೇಳುತ್ತಾನೆ. ಇದು ಆಳುವ ವರ್ಗದಲ್ಲಿ ಅಪ್ರಜ್ಞಾಪೂರ್ವಕವಾಗಿ ಪೂರ್ವಗ್ರಹವಾಗಿ ಮನೆಮಾಡಿರುತ್ತದೆ. ಆದ್ದರಿಂದಲೇ ಇಂಥ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ. ಇವುಗಳ ಬಗ್ಗೆ ಬಂಡವಾಳಶಾಹಿ ಮತ್ತು ಫ್ಯೂಡಲ್‌ಗಳ ಹಿಡಿತದಲ್ಲಿರುವ ಸರ್ಕಾರಗಳು ತನಿಖೆಯ ನಾಟಕವಾಡಿ ಜಾಣ ಮೌನ ವಹಿಸುತ್ತವೆ.

ಮುಜಫ್ಫರ್ ಆಸಾದಿಯವರು ತಮ್ಮ 'ಇಂಡಿಯಾ ರಾಜ್ಯ: ದಲಿತರು ಮತ್ತು ಅಲ್ಪಸಂಖ್ಯಾತರು' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ: "ಅಂತರ್‌ರಾಷ್ಟ್ರೀಯ ಬಂಡವಾಳವು ತಾನೊಬ್ಬ ಮಹಾನ್ ಸ್ವತಂತ್ರವಾದಿ ಮಾನವ ಹಕ್ಕುಗಳ ಪ್ರತಿಪಾದಿ ಎಂದೆಲ್ಲಾ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬೊಬ್ಬಿಡುತ್ತದೆ. ಆದರೆ ಇಂಡಿಯಾಕ್ಕೆ ಬರುವಾಗ ಅದರಲ್ಲೂ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆದಾಗ ಅದು ತೀರಾ ಮೌನವನ್ನು ತಾಳುತ್ತದೆ. ಆದರೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕರಿದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ಆಕ್ರಮಣವನ್ನು ಇದೇ 'ಸ್ವತಂತ್ರ'ದ ಹೆಸರಿನಲ್ಲಿ ಪ್ರಗತಿಯ ಹೆಸರಿನಲ್ಲಿ ನಡೆಸುತ್ತದೆ. ಇಂಡಿಯಾದಲ್ಲಿನ ಆಕ್ರಮಣ ಕುರಿತಾದ ಇದರ ಮೌನವನ್ನು ಸಮ್ಮತಿಯೆಂದು ಪರಿಗಣಿಸಬಹುದು. ಎರಡನೆಯದಾಗಿ ತಾನು ಇಂಡಿಯಾಕ್ಕೆ ಸಾಲ ನೀಡುವಾಗ ಕೆಲವು conditionsಗಳನ್ನು ಮುಂದಿಡುತ್ತದೆ. ಈ ಕಂಡೀಶನ್‌ಗಳು ' Structural adjustment ' ಮೂಲಭೂತವಾಗಿ ಇಂಡಿಯಾದ ಬೂರ್ಜ್ವಾ ಮತ್ತು ಅಂತರ್‌ರಾಷ್ಟ್ರೀಯ ಬೂರ್ಜ್ವಾ ಸಂಬಂಧಗಳನ್ನು ಗಟ್ಟಿಗೊಳಿಸುವುದರ ಪ್ರಯತ್ನ ಅನ್ನಬಹುದು. ಈ ಕಂಡೀಶನ್‌ಗಳಲ್ಲಿ Privatisation (ಖಾಸಗೀಕರಣ). cut in subsidy, cut in social security ಇತ್ಯಾದಿಗಳು ಸೇರಿಕೊಂಡಿವೆ. ಖಾಸಗೀಕರಣ ನಡೆದರೆ ಇಂಡಿಯಾದ ದಲಿತರು ಮತ್ತು ಅಲ್ಪಸಂಖ್ಯಾತರು ತಮ್ಮ purchasing power ಅನ್ನು ಕಳೆದುಕೊಳ್ಳುತ್ತಾರೆ. ಅಂತರ್‌ರಾಷ್ಟ್ರೀಯ ಬಂಡವಾಳಕ್ಕೆ cheap labour ಗಳಾಗಿ ಬಂಡವಾಳದ ಪುನರ್ ಬೆಳವಣಿಗೆಗೆ ಸಲಕರಣೆಗಳಾಗಿ ಬೆಳೆಯುತ್ತಾರೆ" (ಸಂಕ್ರಮಣ. ಏಪ್ರಿಲ್ - ಮೇ ೧೯೯೩).

ಉದಾರೀಕರಣದ ನೀತಿಯಿಂದಾಗಿ ಅನೇಕ ಅಂತರ್‌ರಾಷ್ಟ್ರೀಯ ಬಹುರಾಷ್ಟ್ರೀಯ ಕಂಪನಿಗಳು ದೇಶದೊಳಕ್ಕೆ ನುಗ್ಗಿ ನಮ್ಮ ಅಗ್ಗದ ಶ್ರಮವನ್ನು ಕಸಿದು ಲಾಭ ಮಾಡಿಕೊಳ್ಳುತ್ತಿದ್ದಾರೆ. ಜತೆಗೆ ದೇಶೀಯ ಬಂಡವಾಳಗಾರರಿಗೂ ಹೊಡೆತ ಕೊಡುತ್ತಿದ್ದಾರೆ. ಖಾಸಗೀಕರಣದೊಂದಿಗೆ. ಉದಾರೀಕರಣವೂ ಬೆರೆತರೆ ಅವಕಾಶವಂಚಿತರಿಗೆ ಹುಣ್ಣು. ಗ್ಯಾಂಗ್ರೀನ್ ಆಗಿ ಮಾರ್ಪಾಡಾದಂತೆ. ದೇಶೀಯ ಕಂಪನಿಗಳ ಕನಿಷ್ಠ ವೇತನವನ್ನು ಅವರು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಹೊರಗಿನ ದೈತ್ಯ ಉತ್ಪಾದಕ ಸಂಸ್ಥೆಗಳ ಅಗತ್ಯವಿದ್ದಲ್ಲಿ. Trans-national ಕಂಪನಿ ಮತ್ತು Global ಕಂಪನಿಗಳನ್ನು ಪ್ರೋತ್ಸಾಹಿಸಬೇಕು. ಅಲ್ಲಿ ದೇಶೀಯ ಹೂಡಿಕೆ ಮತ್ತು ದೇಶೀಯ ಶ್ರಮ ಕಡ್ಡಾಯವಾಗಬೇಕು. ಹೀಗೆ ಮಾಡಿ ಉತ್ಪಾದನೆಯನ್ನು ಅಂತರ್‌ದೇಶೀಯ ಬೆಳವಣಿಗೆಗೆ ವಿನಿಯೋಗಿಸುವ ಮಾರ್ಗ ಕಂಡುಹಿಡಿಯುವುದು ಒಳ್ಳೆಯ ಸರ್ಕಾರ ಮಾಡಬೇಕಾದ ಕೆಲಸ.

ಗಾಂಧಿ ಭಾರತದ ಸಂದರ್ಭದಲ್ಲಿ ಹೇಳಿದ ವಿಷಯಗಳಲ್ಲಿ. ಅವರ ಜೀವಿತದಲ್ಲಿ ಅಗಾಧವಾಗಿ ಬರೆದವರು. ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಅವರ ಮಾತುಗಳನ್ನು ಲಘು ಹಾಸ್ಯಕ್ಕಾಗಿಯಾದರೂ ತಿಳಿದುಕೊಳ್ಳಬೇಕಾದ ಅವಶ್ಯಕತೆಯಿದೆ. 'ಬಂಡವಾಳಗಾರರು ಹಾಗೂ ಶ್ರಮಿಕರು ಸೇರಿ ಐಕ್ಯ ಹಾಗೂ ಸಾಮರಸ್ಯದಿಂದಿರುವ ದೊಡ್ಡ ಕುಟುಂಬದಂತಿರಬೇಕು' ಎಂದು ಗಾಂಧಿ ಹೇಳುತ್ತಾರೆ. ಮುಂದುವರಿಯುತ್ತಾ 'ಶ್ರಮಿಕರ ಹಿತಸಾಧನೆಗಾಗಿ ಬಂಡವಾಳಗಾರರು ಧರ್ಮದರ್ಶಿಗಳಂತೆ ವರ್ತಿಸಬೇಕು ಹಾಗೂ ಶ್ರಮಿಕರು ಅವರಾರ ಸ್ವೀಕರಿಸಿದ ಮೇಲೆ ತಾವು ಸ್ವೀಕರಿಸಬೇಕು' ಎನ್ನುತ್ತಾರೆ. ಒಂದು ಗಹನವಾದ ಆರ್ಥಿಕ / ಸಾಮಾಜಿಕ ಸಮಸ್ಯೆಯನ್ನು ಕುರಿತು ಇಂಥ ಪ್ರವಾದೀ ಉವಾಚಗಳು ಎಷ್ಟರ ಮಟ್ಟಿಗೆ ಪ್ರಯೋಗಶೀಲ. ಪ್ರಯೋಜಕ ಎಂದು ಇಂದಿನ ಪೀಳಿಗೆ ಯೋಚಿಸಬೇಕಾಗಿದೆ.

'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ....' ಎಂಬ ಭಗವದ್ಗೀತೆಯ ಉಕ್ತಿಯನ್ನು ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಸಾರಾಸಗಟಾಗಿ ಅಲ್ಲಗಳೆಯುತ್ತಾ ಉದ್ಯೋಗಿಯು ಪಡೆಯುವ ಸಂಭಾವನೆಗೂ. ಆತ ಉದ್ಯಮಕ್ಕೆ ನೀಡುವ ಉತ್ಪಾದನೆಗೂ ನೇರವಾದ ಸಂಬಂಧವಿರುತ್ತದೆ ಎಂದು ಹೇಳುತ್ತಾರೆ. ಉದ್ಯೋಗ ವಿಸ್ತರಣೆ. ವರಮಾನದ

ಮರುವಿತರಣೆಯಾಗಬೇಕು ಎನ್ನುತ್ತಾರೆ. ಸಾರ್ವಜನಿಕ ಉದ್ಯಮಗಳು ಈ ನೀತಿಯನ್ನು ಅನುಸರಿಸಿದರೆ ದೇಶಕ್ಕೂ ಸಮಾಜಕ್ಕೂ ಒಳಿತಾಗುತ್ತದೆ. 'ಎಲ್ಲರ ಆಸ್ತಿ ಯಾರ ಆಸ್ತಿಯೂ ಅಲ್ಲ' ಎಂಬ ನಾಣ್ನುಡಿಯನ್ನು ಪಾಲಿಸಿ ಅರಾಜಕತೆಯನ್ನು ಬೆಳೆಸಿಕೊಂಡ ಫಲವಾಗಿ ರಾಷ್ಟ್ರೀಕರಣವಾಗಿದ್ದ ಕಂಪನಿಗಳು ಬಾಗಿಲು ಮುಚ್ಚಿಕೊಳ್ಳುತ್ತಿವೆ. ಉದಾರೀಕರಣದೊಂದಿಗೆ ಬಂಡವಾಳಗಾರರು ದಾಪುಗಾಲಿಟ್ಟು ಬರತೊಡಗಿದ್ದಾರೆ. ಅವಕಾಶವಂಚಿತರಿಗೆ ಮೆರಿಟ್‌ನ ನೆಪದಲ್ಲಿ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾಫಿ ಸರಬರಾಜು ಮಾಡುವ, ಮೊಗಸಾಲೆಗಳನ್ನು ಸ್ವಚ್ಛ ಮಾಡುವ ಕೆಲಸ ಲಭ್ಯವಾದರೆ ಪುಣ್ಯವೆಂದುಕೊಳ್ಳಬೇಕಾಗಿದೆ. ▼

ಮೂಡ್ನಾಕೂಡು ಚಿನ್ನಸ್ವಾಮಿ
ವಿಭಾಗೀಯ ನಿಯಂತ್ರಣಾಧಿಕಾರಿ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಗದಗ ವಿಭಾಗ, ಗದಗ - ೫೮೨ ೧೦೩

▲ ಕವಿತೆ - ೨, ೩, ೪

ರತಿಗೀತಗಳು

ಭಾರತಿ ಮೋಹನ ಕೋಟಿ

೧. ಗುಟ್ಟು

ಇರುಳೆಲ್ಲ ಬೀಸುವ ಚಳಿಗಾಳಿ
ಬೆಂದಿ ಮೋಡಗಳ
ಏಕೈಕ ಸಂಗಾತಿ ಚಂದ್ರ

ಯಾವ ಎಲೆ ಮೊದಲು ಉದುರುವುದೋ
ಗೊತ್ತಿಲ್ಲ ಎಲೆಗಳಿಗಂತೂ
ಗಾಳಿಗಾದರೂ ಗೊತ್ತೆ ?

ಮಾಗಿ ಮುಸ್ಸಂಜೆಯಲೇ ಏನು ಚಳಿ
ಚಿತ್ತಾಲೆ ಆಗಸದಿ ಚಂದಿರನೂ
ಮಲಗಿಹನು ಮೈ - ಮುದುರಿ

ನಿಂತವಲ್ಲ ಮರಗಿಡ ಹಸಿರು ಚಿಗುರನುಟ್ಟು
ಮೊದಲು ಮುತ್ತಿಟ್ಟ ಮರ ಯಾವುದೆಂದು
ವಸಂತನಿಗೆ ಮಾತ್ರ ಗೊತ್ತು ಗುಟ್ಟು.

೨. ಗಜಲ್

ಸನಿಹವಿದ್ದರೂ ದೂರವೇನೋ ಎನಿಸುವುದು
ಈ ಬದುಕೆ ವಿಶ್ವಾಸಘಾತಕವೇನೋ ಎನಿಸುವುದು

ನಿನ್ನಿಂದ ದೂರವಾಗಿ ನಾನು ಜೀವಿಸುವುದು
ಈ ಹರಕೆಯೋ ಶಾಪವೇನೋ ಎನಿಸುವುದು

ಕಂಗಳ ಮುತ್ತಿನಲಿ ಅವನ ಹೆಸರು ಬರೆದಿಹುದು
ಈ ಕಂಬನಿಯೋ ದ್ರೋಹಿಯೇನೋ ಎನಿಸುವುದು

ಇದೀಗ ಹಾದು ಹೋದನವನು ಇಲ್ಲಿ ಸುಳಿದು
ಈ ಬುವಿಯೋ ಸ್ವರ್ಗವೇನೋ ಎನಿಸುವುದು

ಪ್ರೀತಿಸುವುದೇ ಅಪರಾಧವಾಗಿದೆಯೋ ಓ 'ರತಿ'
ಈ ಜಗವೆ ಮುನಿಸಿಕೊಂಡಿದೆಯೇನೋ ಎನಿಸುವುದು.

೩. ಬಿಡಿ ದ್ವಿಪದಿಗಳು

ಆಣೆ ತಿಂದು ಹೇಳುವೆ ನನ್ನ ನಗುನಲಿವು ಎಲ್ಲ ಹೋಗಿವೆ ನಿನ್ನ ಒಂದೆ
ಗಂಟು ಮೋರೆಯುವಳೆಂದು ಜರೆಯುವ ಜಗಕೇನು ಹೇಳುವುದೋ ತಿಳಿಯೆ

ನಿನ್ನ ದರುಶನದಿಂದ ನಗುನಲಿವು ಒಮ್ಮೆಲೆ ಎಲ್ಲ ತೆಕ್ಕೆ ಬಿದ್ದುವು
ಸುಮ್ಮಸುಮ್ಮನೆ ನಗುವಳಲ್ಲ ಎಂಬ ಅಪವಾದವೂ ಅದರೊಡನೆ ಬಂತು

ಯಾವ ಬಂಧ ಬೆಸೆದಿಹುದೋ ನಮ್ಮಿಬ್ಬರನು
ಎಲ್ಲೋ ವಸಂತ ಮತ್ತೆಲ್ಲೋ ಅರಳುವುದು ಹೂ

ಒಂದು ಅಪ್ಪುಗೆ ಬಿಸಿ ಮುತ್ತು ನೀಡದಷ್ಟು ಜಿಪುಣನಾಗದಿರು
ಯಾರಿಗ ಗೊತ್ತು ಕಾಲ ನಿನಗಿಂತ ಮುನ್ನ ಬಂದು ತಬ್ಬಬಹುದು

ಕಣ್ಣರೆಪ್ಪೆಯಲಿ ನಿನ್ನ ಬಂಧಿಸಿರುವೆ ಎಂದುಕೊಳ್ಳುವೆ
ಅಷ್ಟರಲೆ ಎದೆಯ ಕಿಟಕಿಯಲಿ ಹಣಕಿಕ್ಕಿ ಕಣ್ಣು ಮಿಟುಕಿಸುವೆ

ಭಾರತಿ ಮೋಹನ ಕೋಟಿ
ಚೈತ್ರ. ಎಂಆಯ್‌ಜಿ - ೨. ೧೩೫ - ೧೩೬. ಸಿದ್ಧಲಿಂಗನಗರ. ಗದಗ - ೫೮೨ ೧೦೩

ಬೆಳಕು ಹಂಚಿದ ಬಾಲಕ

▲ ಮಕ್ಕಳ ನಾಟಕ

ಆರ್. ವಿ. ಭಂಡಾರಿ

ಸುತ್ತೆಲ್ಲ ನರಳುತಿವೆ ನೂರೊಂದು ಜೀವ
ಮೂಡಣದಿ ಮೂಡುತಿದೆ ಹೊಸದೊಂದು ಭಾವ
ಕತ್ತಲೆಯು ಹಡೆದಂಥ ದಟ್ಟಾದ ಇರುಳು
ಕಡುಚಳಿಗೆ ಕೊರೆಯುತ್ತಿದೆ ಎಲ್ಲರ ಕರುಳು
ಬಡತನವೆ ಮೈವೆತ್ತ ಸುಡುಡುಡುವ ಬೆಂಕಿ
" ಮುಟಬೇಡ ಮುಟಬೇಡ " ಎನುತಿಹರು ಕೊಂಕಿ
ಸುತ್ತೆಲ್ಲ ಮಲಗಿರಲು ಇವನೊಬ್ಬ ಎದ್ದ
ಬೆಳಕನ್ನು ತಾ ತರುವೆ ಎನುತಿಹನು ಖಿದ್ದ
ಸುತ್ತೆಲ್ಲ ನರಳುತಿವೆ ನೂರೊಂದು ಜೀವ
ಮೂಡಣದಿ ಮೂಡುತಿದೆ ಹೊಸದೊಂದು ಭಾವ.

ದೃಶ್ಯ - ೧

ರಾತ್ರಿ ಮಂದ ಬೆಳಕು. ಎಲ್ಲರೂ ಮಲಗಿದ್ದಾರೆ. ಮಲಗಿದವರು ಹುಡುಗರು. ಗಾಢ ನಿದ್ರೆ. ಕೆಲವರಿಗೆ ಅರೆನಿದ್ರೆ. ಹಾಡು ಸಾಗುತ್ತಿರುತ್ತದೆ. ಅಂತ್ಯದಲ್ಲಿ ನಗರದ ಗಡಿಯಾರ ೧೨ ಹೊಡೆಯುತ್ತದೆ. ಆಗ ಬಾಲಕ ಭೀಮ ಆಂಬೇಡ್ಕರ ಏಳುತ್ತಾನೆ.

ಭೀಮ : ಆ ! ಹನ್ನೆರಡು ಹೊಡೆಯಿತು. ಎಲ್ಲರೂ ಮಲಗಿದ್ದಾರೆ. ಅಬ್ಬ ! ಏನು ಗೊರಕೆ ! ಮಳೆಗಾಲದ ಶುರೂನಲ್ಲಿಯ ಕಪ್ಪೆಗಳ ಗೊರೋಗೊರ. (ನಕ್ಕು) ಈಗ ತೊಂದರೆಯಿಲ್ಲ. ದೀಪ ಹಚ್ಚಿದರೆ ಎಚ್ಚರವಾಗಲಿಕ್ಕಿಲ್ಲ.
ಎರಡು ದಿನಗಳಿಂದ ಒಂದೇ ಸಮನೆ ಗೌಜು-ಗದ್ದಲ. ಏನು ಮಾಡುವುದು. ನೆಂಟರೇನೂ ದಿನಾ ಬರುವವರಲ್ಲ. ಇರುವ ಎರಡೇ ಕೋಣೆಯಲ್ಲಿ ಎಲ್ಲಾ ಸಾಗಬೇಕಲ್ಲ ! ತುಕಾರಾಮನ ಉತ್ಸವ ಆಗುವುದು ವರ್ಷಕ್ಕೊಮ್ಮೆ. ಆಗ ಒಂದೆರಡು ದಿನ ಹೀಗೇ. ಈ ವರ್ಷ ಬಂದರೆ ಇನ್ನು ಮುಂದಿನ ವರ್ಷ. ಇಲ್ಲದಿದ್ದರೆ ಮತ್ತೆ ಮುಂದಿನ ವರ್ಷ. ಅವರಾದರೂ ಏನು ಮಾಡುತ್ತಾರೆ ?
ಅದೇನೋ ಸರಿ. ಆದರೆ ನಾನೋ ಎರಡು ದಿನಗಳಿಂದ ಪುಸ್ತಕ ಕೈಯಲ್ಲಿ ಹಿಡಿದಿದ್ದಿಲ್ಲ. ದಿನಾ ಹನ್ನೆರಡು ಗಂಟೆಗೆ ಎಚ್ಚರ. ಗಡಿಯಾರ ಹೊಡೆಯಲಿ ಬಿಡಲಿ ಎಚ್ಚರ. ಸಿಟಿ ಕ್ಲಾಕ್ ಪ್ರತಿ ಗಂಟೆಗೆ ಹೊಡೆಯುತ್ತ ಹೋದರೂ ನನಗೆ ಎಚ್ಚರ ಹನ್ನೆರಡು ಗಂಟೆಗೇ ! ಅದು ನನ್ನ ಅಪ್ಪನಿಂದ ಬಂದ ರೂಢಿ. ಸಿಟಿ ಕ್ಲಾಕ್ ಹನ್ನೆರಡು ಬಡಿಯಿತೋ ಅಪ್ಪ ಏಳುವನು. ನನ್ನನ್ನು ಎಚ್ಚರಿಸುವ. 'ಮಗಾ, ಏಳು, ಏಳು. ಅಭ್ಯಾಸ ಮಾಡು. ಮೊದಲು ಕಷ್ಟಪಟ್ಟರೆ ಕೊನೆಗೆ ಸುಖ ಉಂಟು' ಎನ್ನುವ. ಅಷ್ಟು ಹೇಳಿ ತುಕಾರಾಮನ ಒಂದು ಅಭಂಗ ಗುಣುಗುಣಿಸುವ.

ಬೈಗು ಬೆಳಗು ಒಂದೇ ಸಮ ಯುದ್ಧ
ಈ ಜಗಕೂ ನನಗೂ ಭೀಕರ ಯುದ್ಧ
ಏಕದಂ ಎರಗಿದರೂ ಎಚ್ಚರ ತಪ್ಪಲ್ಲ
ಗಟ್ಟಿ ನಿಲ್ಲದೆ ನಾವು ಹಾಗೇ ಬಿಡಲ್ಲ

ಬ್ರಿಟಿಶ್ ಅಧಿಕಾರಿಯ ಕೆಳಗೆ ಹವಾಲ್ದಾರ ಮನೆಕೆಲಸಕ್ಕೂ ಹೋಗುತ್ತಿದ್ದ. ನಾನೂ ಅವನ ಸಂಗಡ ಹೋಗುತ್ತಿದ್ದೆ. ಅಪ್ಪನ ಸಂಗಡ ಒಳ-ಹೊರ ಓಡಾಡುತ್ತಿದ್ದೆ. ಬ್ರಿಟಿಶ್ ಸಾಹೇಬರ ಮಕ್ಕಳು 'ಕಂ ಆನ್ ಭೀಮಾ' ಎಂದು ನನ್ನ ಕರೆಯುತ್ತಿದ್ದರು. ಅವರ ಜೊತೆ ನಾನು ಕ್ರಿಕೆಟ್ ಆಡಿದ್ದೂ ಉಂಟು. ಮೇಡಂ 'ಕಂ ಚಾಯಿಲ್ಡ್. ಈಟ್' ಎಂದು ತಮ್ಮ ಮಕ್ಕಳೊಡನೆ ನನಗೂ ಕೇಕ್ ಕೊಡುತ್ತಿದ್ದರು. ಅಪ್ಪ ಹೇಳುತ್ತಿದ್ದ –

ಹಿಂದಿನಿಂದ ಧ್ವನಿ

'ಮಗಾ. ಕಲೀಬೇಕು. ಇಷ್ಟು ಕಾಲ ಮಹಾರರಿಗೆ. ಚಾಂಡಾಲರಿಗೆ ಎಲ್ಲಿ ವಿದ್ಯೆ ಸಿಗ್ತಿತ್ತು? ಈಗ ಪಡೆಯುವ ಅವಕಾಶ. ಇದು ಹೊಸ ಮನ್ವಂತರ ಮಗನೆ!'

ಬೈಗು ಬೆಳಗು ಒಂದೇ ಸಮ ಯುದ್ಧ
ಈ ಜನಕು ನನಗೂ ಭೀಕರ ಯುದ್ಧ
ಏಕದಂ ಎರಗಿದರೂ ಎಚ್ಚರ ತಪ್ಪಲ್ಲ
ಗಟ್ಟಿ ನಿಲ್ಲದೆ ನಾವು ಹಾಗೇ ಬಿಡಲ್ಲ
ಎಲ್ಲರ ಬೆದರಿಸೊ ತುಕಾನ ನುಡಿಯಿದು
ಬಲಬಂತೊ ಬಲ ನಿನ್ನ ಹೆಸರಿಂದ........

ಭೀಮ : (ಒಬ್ಬಿಬ್ಬರು ಮಗ್ಗಲು ಮರಚುತ್ತಾರೆ. ಭೀಮ ಹೆದರುತ್ತಾನೆ.) ಪುಸ್ತಕ ಹಿಡಿಯದಿದ್ದರೆ ನನಗೆ ತಿಂದ ಅನ್ನ ಕರಗುವುದಿಲ್ಲ.

ಮೆಲ್ಲನೆ ನಡೆದು ದೀಪ ಹಚ್ಚುತ್ತಾನೆ.

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡೆಸೆನ್ನನು....

ಯಾರೋ ಹೊರಳುತ್ತಾರೆ. ಕನವರಿಸುತ್ತಾರೆ. ಭೀಮ ಹೆದರುತ್ತಾನೆ. ಮತ್ತೆ ಸ್ತಬ್ಧ. ತಗ್ಗು ದನಿಯಲ್ಲಿ

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು....

ಒಬ್ಬ : ಥೂತ್! ಗದ್ದಲ ಮಾಡಬೇಡಯ್ಯ. ಎಂಥ ಸುಖ ನಿದ್ದೆ.

ಇನ್ನೊಬ್ಬ : ಥೂತ್! ಎಂಥ ಬೆಳಕಪ್ಪ ಇದು! ನನಗಂತೂ ಬೆಳಕು ಕಂಡರೆ ಆಗದು. ಎಂಥ ಸಿಹಿ ಸಿಹಿ ನಿದ್ದೆ.

ಮತ್ತೊಬ್ಬ : ಯಾ ರಾಕ್ಷಸನಯ್ಯ ಅವನು. ಈ ರಾತ್ರಿ ಹೊತ್ತಿಗೆ ದೀಪ ಹಚ್ಚಿ ನಿದ್ದೆ ಕೆಡಿಸುವನು.

ಮಗದೊಬ್ಬ : (ಎದ್ದು ಆಕಳಿಸಿ) ಇದೇ ಏನಯ್ಯ ನೆಂಟರಿಗೆ ಮಾಡೂ ಉಪಚಾರ?

ಭೀಮ : ಅಯ್ಯಾ. ನಾನು ಸುಮ್ಮನೆ. ಗೌಜು ಆಗದ ಹಾಗೆ ಓದಕೊಳತೇನೆ. ನಾಳೆ ನನಗೆ ಪರೀಕ್ಷೆ.

ಒಬ್ಬ : (ದಡಕ್ಕನೆ ಎದ್ದು) ಓ ಹೊ ಹೊ ಹೋ ಮಹಾ ಪರಿಕ್ಷಿ. ಹೊಡ್ಡ ಸಾಯ್ಬ. ಬರಮಣ ಸಾಯ್ಬ.

ಇನ್ನೊಬ್ಬ : ಆ ಹಾ ಹಾ! ಇಂಗ್ಲೀಸ್ ದೊರೆ.

ಮತ್ತೊಬ್ಬ : ಸಾಕು... ಸಾಕು... ಮಲಗಯ್ಯ. **(ಆಕಳಿಕೆ)**

ಭೀಮ : ನೀವು ಕಣ್ಣು ಮುಚ್ಚಿ ಮಲಗಿ. ನಾನು ತೊಂದರೆ ಕೊಡೂದಿಲ್ಲ.

ಮಗದೊಬ್ಬ : ತೊಂದರೆ ಕೊಡೂದಿಲ್ಲ ? ನಮಗೇ ಬುದ್ಧಿ ಹೇಳ್ತೀಯ ?

ಒಬ್ಬ : ಪುಸ್ತಕ ಹಿಡದ್ ಹೊತ್ಗೆ ತಲೆ ಕೆಟ್ಟೋಯ್ತು ?

ಇನ್ನೊಬ್ಬ : ಹಿರೀರು ಕಿರೀರು ಎಂಬ ಭಾವನೇನೇ ಬೇಡ್ವಾ ?

ಮತ್ತೊಬ್ಬ : ಇವೊಬ್ಬ ಓದಿ ಉದ್ಧಾರ ಮಾಡಾಂವ. ನಮ್ಮ ಜನ್ವೆಲ್ಲಿ ಓದೇ ಬದಕಿದ್ರು ?

ಮಗದೊಬ್ಬ : ನಮ್ಮ ಅಪ್ಪ ಓದಿದ್ನಾ ?

ಇನ್ನೊಬ್ಬ : ನಮ್ಮ ಅಜ್ಜ ಓದಿದ್ನಾ ?

ಮತ್ತೊಬ್ಬ : ನಮ್ಮ ಪಿಜ್ಜ ಓದಿದ್ನಾ ?

ಮಗದೊಬ್ಬ : ನಾವು ಬದುಕಿಲ್ವಾ ?

ಭೀಮಾ : ನೀವು ಬದುಕಿದ್ದೀರಾ ?

ಒಬ್ಬ : ನೋಡಿದ್ರಾ ಅಧಿಕ ಪರಸಂಗಿನಾ ?

ಇನ್ನೊಬ್ಬ : ನಂದಿಸ್ರೋ ದೀಪ. ನೋಡವಾ ಅವನ ಪರಾಕರ್ಮಾನ.

ಎಲ್ಲರೂ ಎದ್ದು ಬಂದು ದೀಪ ಆರಿಸುವರು.

ಭೀಮ : ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡೆಸೆನ್ನನು...

ಮಂದ್ರದಲ್ಲಿ ಹಾಡಿಕೊಳ್ಳುವನು.

ದೃಶ್ಯ - ೨ : ಶಾಲೆ

ಎಲಿಜಾ : ಭೀಮಾ. ಭೀಮಾ. ಎಲ್ಲಿಗೆ ಹೋಗತಾ ಇದ್ದಿ ? ಪಿರಿಯಡ್ ಬೆಲ್ ಆಗಲು ಬಂತು. ಹಾಂ ? **(ಹೋಗುವಳು.)**

ಭೀಮ : ನನಗೆ ಆಸರು ಆಗಿದೆ. ಯಾರಾದರೂ ನೀರು ಹನಿಸಿ.

ರಾಮು : ಪ ಪ. ಲೋಟಾ ಮುಟ್ಟಬೇಡ. ಮೈಲಿಗೆ ಮಾಡಬೇಡ.

ಶ್ಯಾಮು : ಓ ಹೊ ಹೊ ! ದೊಡ್ಡ ದೊರೆ. ಪಂಚಮ ಜಾರ್ಜ. ನೀರು ಹಾಕಬೇಕು.

ಮಾಧವ : ಹೋಗರೂ ಹೋಗರೊ. ಗಂಟೆ ಆಗೂ ವೇಳೆ ಆಯ್ತು.

ಭೀಮು : ದಮ್ಮಯ್ಯ ಯಾರಾದರೂ ನೀರು ಹನಿಸಿ. ಗಂಟಲು ಒಣಗಿ ಹೋಗಿವೆ. ನೀರು ಹಾಕಿ, ದಮ್ಮಯ್ಯ.

ರಾಮು : ಓಹೊ ! ಭಾರಿ ಸರದಾರ. ಬಂದ್ಬಿಟ್ಟ. ನಿನಗ್ಯಾಕೊ ಶಾಲೆ ?

ಶ್ಯಾಮು : ಅವರು ಬಾ ಅಂದರು. ಇವ ಬಂದುಬಿಟ್ಟ. ಕಿಂಗು.

ನಾರಾಯಣ : ಶಾಲೆಗೆ ಬರಲು ಕೊಟ್ಟಿದ್ದಲ್ಲದೆ ನೀರು ಬೇರೆ ಹಾಕಬೇಕು.

ಶಂಕರ : ಮಹಾರರಿಗೆ, ಗೂಲಾರರಿಗೆಲ್ಲ ಶಾಲೆ ! ನೀನ್ಯಾಕೊ ಟೀಚರ್ ಹೇಳುವ ಲೆಕ್ಕ ಎಲ್ಲ ಬಿಡಿಸೋದು ?

ರಾಮು : ತಾನು ಬಿಡಿಸಿದ್ದಲ್ಲದೆ ತನ್ನ ಜಾಪೆ ಮೇಲೆ ಕೂತ ತನ್ನ ಜಾತಿಯವರಿಗೆಲ್ಲ ಹೇಳಿಕೊಡುವ.

ನಾರಾಯಣ : ಯಾಕೊ ಮಹಾರ ಹೇಳಿಕೊಟ್ಟೆ ?
ಮಾಧವ : ಟೀಚರು ಹೇಳಿದ್ದೆಲ್ಲ ಮಾಡಿಬಿಡತಾನೆ.
ಭೀಮ : ನೀರೂ... ನೀರು.
ಶಂಕರ : ನೀರು. ಹ ಹ ಹ... ನೀರು. ಯಾಕೊ ಟೀಚರ್ ಹೇಳಿಕೊಟ್ಟ ಸಂಸ್ಕೃತ ಶ್ಲೋಕ ಹೇಳಿದೆ ? ಅದಕಂತಲೇ ಗಂಟಲು ಕಟ್ಟಿಹೋಯ್ತು. ಗಂಟಲು ಕಟ್ಟಿ ಗಗಗಗಗ ಆಗಿ ಸಾಯಿ.

ಎಲ್ಲರೂ ನಗುವರು.

ರಾಮ : ಯಾಕೋ, ಟೀಚರು ಹೇಳಿದ್ದಕ್ಕೆಲ್ಲ ಉತ್ತರ ಕೊಡತಿ ?
ಭೀಮ : ನೀರು...
ಮಾಧವ : ಯಾಕೊ, ನೀನು ಇಂಗ್ಲಿಶಿನಲ್ಲಿ ಫಸ್ಟ್ ಬಂದದ್ದು ?
ನಾರಾಯಣ : ಕಿಂಗ್. ಕಿಂಗ್ ಆಗಲಿಕ್ಕೆ.
ಶಂಕರ : ನಾನೂ ನೋಡತೇನೆ, ನೀನು ಹೇಗೆ ನಂಬರ ಬರತಿಯೋ ಅಂತ.
ರಾಮ : ಶಂಕರನ ಅಪ್ಪ ಸಂಸ್ಕೃತದಲ್ಲಿ ಸ್ಕಾಲರ್.
ಶ್ಯಾಮ : ನನ್ನಪ್ಪ ಇಂಗ್ಲಿಶಿನಲ್ಲಿ ಸ್ಕಾಲರ್.
ಮಾಧವ : ನನ್ನಪ್ಪ ಲ್ಯಾಟಿನಿನಲ್ಲಿ ಸ್ಕಾಲರ್.
ಭೀಮ : ನೀರು... ನೀರು...
ಎಲ್ಲರೂ : ಹ ಹ ಹ ನೀರು... ನೀss s s s ರು...
ರಾಮ : ಒಂದು ಕತೆ ಹೇಳತೆ, ಕೇಳಿ.
ಎಲ್ಲರೂ : ಹೇಳಪಾ ಅಜ್ಜ, ಕತೆಯಜ್ಜ ಹೇಳು. **(ಕಿವಿಗೊಡುವರು.)**
ರಾಮ : ಏಕಚಕ್ರ ನಗರ ಅಂತ ಒಂದು ಪಟ್ಟಣ. ಅಲ್ಲಿ ಬಕಾಸುರ ಅಂತ ಒಬ್ಬ ರಾಕ್ಷಸ ಇದ್ದನಂತೆ. ಹೂಂ ಹಾಕಿರೊ.
ಎಲ್ಲರೂ : ಹೂಂ s s.
ರಾಮ : ಒಂದು ದಿನ ಅವನಿಗೆ ಊರವರೆಲ್ಲ ಕೂಡಿ ಒಂದು ಕೊಪ್ಪರಿಗಿ ಅನ್ನ. ಒಂದು ಕೊಪ್ಪರಿಗಿ ಜಿಲೇಬಿ...
ಶ್ಯಾಮ : ಅಬಬಬಬ ಜಿಲೇಬಿ.
ರಾಮ : ಒಂದು ಕೊಪ್ಪರಿಗೆ ಚುರೂಟಿ.
ನಾರಾಯಣ : ಅಹಹಹ ಒಂದು ಕೊಪ್ಪರಗಿ ಚುರೂಟಿ.
ರಾಮ : ಒಂದು ಕೊಪ್ಪರಗಿ ಕೇಸರೀ ಭಾತು.
ಶಂಕರ : ಹ ಹ ಹ, ಕೇಸರೀ ಭಾತು.
ರಾಮ : ಎಲ್ಲಾನೂ ಗಾಡಿ ತುಂಬಿ ಕಳಿಸಿದರಂತೆ. ಗಾಡಿ ಹೊಡಕೊಂಡು ಹೋದವ ಯಾರು ಗೊತ್ತಾ ? **(ಭೀಮನ ಕಡೆ ಕಣ್ಣು ಹೊಡೆದು)** ಭೀಮ. ಭೀಮ ಗಾಡಿ ಹೊಡಕೊಂಡ್ ಹೋದ. ದಾರಿಯ ಮೇಲೆ ಒಂದು ಕೊಪ್ಪರಗಿ ಅನ್ನ ತಿಂದ.
ಎಲ್ಲರೂ : ಅರೇರೇರೇ **(ಮುಂದಿನವರು ಲಯವಾಗಿ ಹೇಳುತ್ತಾ ಕುಪ್ಪಳಿಸುವರು.)**
ರಾಮ : ಒಂದು ಕೊಪ್ಪರಗಿ ಪಾಯಸ ಕುಡಿದ ಏಸ ಏಸ. **(ತೇಗು)**
ಎಲ್ಲರೂ : ಒಂದು ಕೊಪ್ಪರಗಿ ಪಾಯಸ ಕುಡಿದ ಏ ಏss.
ರಾಮ : ಒಂದು ಕೊಪ್ಪರಗಿ ಜಿಲೇಬಿ ನುಂಗಿದ !
ಎಲ್ಲರೂ : ಜಿಲೇಬಿ ಜಿಲೇಬಿ.

ರಾಮ : ಒಂದು ಕೊಪ್ಪರಗಿ ಕೇಸರೀ ಭಾತ್.

ಎಲ್ಲರೂ : ಕೇಸರೀ ಭಾತ್ ಕೇಸರೀ ಭಾತ್.

ರಾಮ : ಗಾಡಿಗೆ ಕಟ್ಟಿದ ಒಂದು ಕೋಣ

ಎಲ್ಲರೂ : ಕೋಡು ಬಾಲ ಎಲ್ಲಾ ಸೇರಿ

ರಾಮ : ಮತ್ತೊಂದು ಕೋಣ

ಎಲ್ಲರೂ : ಮತ್ತೊಂದು ಕೋಣ ಗುಳುಂ ಗುಳುಂ ಗುಳುಂ.

ಭೀಮ : ನೀರು... ನೀರು... ನೀರು.

ಎಲ್ಲರೂ : ಹೋಗಯ್ಯ ಕೋಣನ ನುಂಗುವವನೆ

ಭೀಮ : ಗಂಟಲು ಕಟ್ಟಿ ಹೋಯ್ತು. ನೀರು ಕೊಡಿ. ನಾನು ಸಾಯ್ತೀನಿ. ಒಂದು ಗುಟುಕು ನೀರು.

ಎಲಿಜಾ : (ಪ್ರವೇಶಿಸಿ, ಆಶ್ಚರ್ಯದಿಂದ) ಏನದು ಭೀಮಾ. ಇನ್ನೂ ಇಲ್ಲೇ ಇದ್ದೀಯಾ ? ಯಾಕ್ರೋ ಅದು. ಅವನ ಸುತ್ತ ಕುಪ್ಪಳಿಸ್ತಿದ್ದೀರಾ ? ಏನಾಯ್ತು ಭೀಮಾ ?

ಭೀಮ : (ಸನ್ನೆ ಮಾಡಿ) ನೀರು... (ಕ್ಷೀಣವಾಗಿ) ನೀರು.

ಬೀಳಲಿರುವ ಅವನನ್ನು ಎಲಿಜಾ ಹಿಡಿಯುತ್ತಾಳೆ.

ನಾನು ಕೊಡತೇನೆ, ಕುಡಿ ನೀರು.

ಎಲ್ಲರೂ : ಕೂಡದು. ಲೋಟಾ ಮುಟ್ಟಕೂಡದು.

ಎಲಿಜಾ : ಯಾಕೆ ಮುಟ್ಟಕೂಡದು ? ನನ್ನನ್ನ ತಡೇಬೇಡಿ.

ಎಲ್ಲರೂ : ಸರಿ ಸರಿ. ಅವನು ಕೋಣನ ತಿನ್ನುವವ. ನೀನು ಹಂದಿ ತಿನ್ನುವವಳು. ಜೋಡಿ ಸರಿಹೋಯ್ತು.

ಎಲಿಜಾ : ಏನೆಲ್ಲಾ ಹೇಳ್ತೀರಿ ನೀವು ! ಇನ್ನೊಂದು ಸಲ ಹೇಳಿದರೆ ಪ್ರಿನ್ಸಿಪಾಲ್. ಥಾಮಸ್ ಸರ್ ಹತ್ತಿರ ಹೇಳತೇನೆ.

ಎಲ್ಲರೂ ಸ್ತಬ್ಧ. ಎಲಿಜಾ ಹೌದಿನಿಂದ ನೀರು ತೆಗೆಯುತ್ತಾಳೆ. ಭೀಮ ಕೈ ಒಡ್ಡುತ್ತಾನೆ.

ಎಲಿಜಾ : ಯಾಕೆ ಬೊಗಸೆ ಒಡ್ಡುತಿಯಾ ? ಹಿಡಿ ಲೋಟ. ತೆಗೆದಿಕೊ. ಹೆದರಬೇಡ. ನಾನಿದ್ದೇನೆ, ತೆಗೆದಿಕೊ.

ಭೀಮ ನೀರನ್ನು ಮೇಲಿನಿಂದ ಕುಡಿದು ಇಡುತ್ತಾನೆ. ಎಲಿಜಾ ಅವರ ಕಡೆ ನೋಡುತ್ತ ಹೋಗುತ್ತಾಳೆ. ನಂತರ ಉಳಿದವರು ಸುತ್ತ ಬರುತ್ತಾರೆ.

ಶಂಕರ : ಯಾಕೋ ಲೋಟಾ ಮುಟ್ಟಿದೆ ?

ಭೀಮಾ : ಎಲಿಜಾ ಹೇಳಿದಳೆಂದು.

ರಾಮ : ಅವಳು ಹೇಳಿದರೆ.... ?

ಶಾಮ : ಹೇಳಿದಳು ಅಹಾ. ಹೇಳಿದಳು. ಹಂದಿ ತಿನ್ನುವವಳು ಹೇಳಿದಳು. ದನ ತಿನ್ನುವವನು ಕೇಳಿದ. ಅಷ್ಟು ತಿಳೀಬಾರದಾ ನಿನಗೆ.

ನಾರಾಯಣ : ಎಲ್ಲಾ ಕೆಡಿಸಿಬಿಟ್ಟ.

ಶಂಕರ : ಜೆಸ್ಸಿಗೆ ಬಗಿರೋ ನಾಲ್ಕು.... ಇನ್ನು ಹಾಗೆ ಮಾಡಬಾರದು.

ಶಾಲೆ ಗಂಟೆ. ಎಲ್ಲರೂ ಹೋಗುತ್ತಾರೆ.

ಶಿಕ್ಷಕರು : ಎಲ್ಲರೂ ಬಂದಿರಾ ?

ಭೀಮ : ಮೇ ಐ ಕಮಿನ್ ಸರ್ ?

ಶಿಕ್ಷಕರು : ಬಾ. ತಡ ಮಾಡಿದಿ ಯಾಕೆ ? ಮುಖವೆಲ್ಲ ಬೆವರಿ ಹೋಗಿದೆ. ಏನು. ಕುಸ್ತಿ ಮಾಡಿದೆಯಾ ?

ಭೀಮ : ಇಲ್ಲ ಸರ್. ನೀರು ಕೊಡಲಿಲ್ಲ. ಬಯ್ದರು.

ಶಿಕ್ಷಕರು : ಯಾಕೆ ? ಯಾರು ಕೊಡಲಿಲ್ಲ ? ಯಾರು ಬಯ್ದವರು ?

ಭೀಮ : ನೀರು ಹನಿಸಿ ಎಂದು ಬೇಡಿದೆ. ಎಲ್ಲರೂ ನನ್ನನ್ನು ಬಯ್ದರು.

ಶಿಕ್ಷಕರು : ಕೊಡಲಿಲ್ಲ ಎಂದರೆ ? ಕೊಡದಿರುವುದಕ್ಕೆ ಅವರು ಯಾರು ? ಕೊಡದಿದ್ದರೆ ನೀನು ಪಡೆಯಬೇಕು. ನೀರು ಪಡೆಯುವುದು ನಿನ್ನ ಹಕ್ಕು.

ಭೀಮ : ಅವರು ಕೊಡುತ್ತಿಲ್ಲ. ನನಗೆ ಮುಟ್ಟಲೂ ಬಿಡುತ್ತಿಲ್ಲ. ನಾನು ಬೇಡಿದೆ. ಆದರೂ...

ಶಿಕ್ಷಕರು : ಬೇಡುವುದು ? ಬೇಡುವುದೇನು ? ಅದನ್ನು ಪಡೆಯುವುದು ನಿನ್ನ ಹಕ್ಕು.

ಭೀಮ : ಹೊಡೆಯುತ್ತಾರೆ.

ಶಿಕ್ಷಕರು : **(ಆತನ ಬಳಿ ಹೋಗಿ)** ಕುಲ ಕುಲ ಕುಲವೆನ್ನುತಿಹರು
ಕುಲವಾವುದು ಸತ್ಯಸುಖವುಳ್ಳ ಜನರಿಗೆ

ಭೀಮ : ಹಾಗಾದರೆ ನಮ್ಮನ್ನು ಯಾಕೆ ಮುಟ್ಟಿಸಿಕೊಳ್ಳುವುದಿಲ್ಲ ?

ಶಿಕ್ಷಕರು : ಏನು ? ಪದ್ಯದ ಅರ್ಥ ಗ್ರಹಿಸಿದೆಯಾ ? ಶಹಬಾಸ್. ಶಹಬಾಸ್. ಇನ್ನು ಮೇಲೆ ನೀನು ನೀರು ಬೇಡುವುದು ಬೇಡ.

ಭೀಮ : ಅಂದರೆ ?

ಶಿಕ್ಷಕರು : ನಾನು ಇರುತ್ತೇನಲ್ಲ ? ನನಗಾಗಿ ನಾನು ತರುತ್ತೇನೆ. ಅದರಿಂದಲೇ ನೀನು ತೆಗೆದುಕೊ.

ಭೀಮ : ಯಾಕೆ, ಯಾಕೆ, ನಿಮಗೆ... ?

ಶಿಕ್ಷಕರು : ನೀರು ಪಡೆಯುವುದು ನಿನ್ನ ಹಕ್ಕು. ಅಂದರೆ ರಾಮ. ಶಂಕರ. ನಾರಾಯಣ ಎಲ್ಲರಂತೆ ಎಲ್ಲರ ಹಕ್ಕು, ನಿನ್ನದೂ ಹಕ್ಕು. ಇನ್ನು ಮೇಲೆ ನೀರು ಬೇಡುವುದು ಬೇಡ. ನನ್ನ ಪಾತ್ರೆಯಿಂದಲೇ....

ಭೀಮ : ಬೇಡ ಟೀಚರ್. ಆಮೇಲೆ ಅವರು ನನಗೆ ಹೊಡೆಯುತ್ತಾರೆ.

ಶಿಕ್ಷಕರು : ಹಾಗಾದರೆ....

ಭೀಮ : ನಾನು ಅಲ್ಲಿಂದಲೇ ನೀರು ಕುಡಿಯುತ್ತೇನೆ. ನೀರು ಪಡೆಯುವುದು ನನ್ನ ಹಕ್ಕು, ನಮ್ಮೆಲ್ಲರ ಹಕ್ಕು.

ದಿಢೀರನೆ ನಡೆಯುತ್ತಾನೆ.

ದೃಶ್ಯ - ೩ : ಒಂದು ಕಟ್ಟೆ ತರಹದ ವೇದಿಕೆ

ಮಾಧವ : ಭೀಮಾ, ಭೀಮಾ, ಇಲ್ಲಿ ಬಾ.

ಭೀಮ : ನೊ ನೋ, ನಾ ಬರೂದಿಲ್ಲ.

ಮಾಧವ : ಪ್ಲೀಸ್, ಪ್ಲೀಸ್ ಕಂ, ಪ್ಲೀಸ್ ಕಮಾನ್.

ಭೀಮ : ಇದೇನಪಾ ಹೊಸಾ ಅವತಾರ, ಮಾಧವ ವೇಶವೆಯುವರದ್ದು. ಅಪರೂಪದ ಪ್ರೀತಿ ?

ಮಾಧವ : ತಮಾಶೆ ಅಲ್ಲ ಮಾರಾಯ, ಈ ಇಂಗ್ಲೀಶು ಬಾಳ ಉಲ್ಟಾಪಲ್ಟಾ ಮಾಡಬಿಡ್ತು ನೋಡು.

ಭೀಮ : ಏನು ಅದು ಉಲ್ಟಾಪಲ್ಟಾ ?

ಮಾಧವ : ಈ ವಾಕ್ಯರಚನೆ.... ಒಟ್ಟಾರೆ ವ್ಯಾಕರಣವೇ ಉಲ್ಟಾಪಲ್ಟಾ.

ಭೀಮ : ಹಾಗಂದರೆ, ಒಳ್ಳೇ ಒಗಟಾಯ್ತಲ್ಲ ನಿಂದು.

ಮಾಧವ : ಈಗ ನೋಡಪ್ಪಾ. ಈ ವಾಕ್ಯ ನೋಡು : ಅವನು ಒಂದು ಹಣ್ಣನ್ನು ತಿನ್ನುತ್ತಾನೆ.

ಭೀಮ : ನೀನು ಕೊಟ್ಟರೆ

ಮಾಧವ : ಏನು ?

ಭೀಮ : ನೀನು ಕೊಡಬೇಕಲ್ಲ ಮಾರಾಯ ಅವ ಹಣ್ಣು ತಿನ್ನಬೇಕಾದರೆ ?

ಮಾಧವ : ಹಾಗಾ ? ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ. ನಿನಗೆ ತಮಾಷೆ. ಹಾಗೆ ಕೊಟ್ಟೆ ಅಂತಾನೇ ಇಟ್ಕೊ.

ಭೀಮ : ನೀನು ಕೊಟ್ಟರೆ ಅಂತಾದರೆ ಅವನೇನು. ನಾನೂ ಒಂದು ಹಣ್ಣನ್ನು ತಿನ್ನುತ್ತೇನೆ.

ಮಾಧವ : ನೀನು ಅಲ್ಲಯ್ಯ. ಅವನು ಒಂದು ಹಣ್ಣನ್ನು ತಿನ್ನುತ್ತಾನೆ.

ಭೀಮ : **(ಅದೇ ದಾಟಿಯಲ್ಲಿ)** ಅವನು ತಿಂದರೆ ನಿನ್ನ ಗಂಟು ಹೋಗುವುದೇನು ?

ಮಾಧವ : ಗಂಟು ಹೋಗುವುದಿಲ್ಲ: ಗಂಟು ಬೀಳುವುದು ಜಣಕು. ಗಮನವಿಟ್ಟು ಕೇಳು. ಪ್ಲೀಸ್ ಈ ವಾಕ್ಯದಲ್ಲಿ ಕರ್ತೃ ಯಾವುದು ?

ಭೀಮ : ಓಹೋ ಇದು ವಾಕ್ಯ ವಿಭಜನೆಯಾ ?

ಮಾಧವ : ಅದೇ. ಇದರಲ್ಲಿ ಕರ್ತೃ ಯಾವುದು ?

ಭೀಮ : ' ಅವನು '

ಮಾಧವ : ಸರಿ. ಸರಿ. ಕರ್ಮ ?

ಭೀಮ : ' ಹಣ್ಣನ್ನು '

ಮಾಧವ : ಹೌದಾ ? ಕ್ರಿಯಾಪದ ?

ಭೀಮ : ' ತಿನ್ನುತ್ತಾನೆ '

ಮಾಧವ : ಒಪ್ಪಿದೆ. ದೇವರಾಣೆ ಒಪ್ಪಿದೆ. ಅಂದರೆ ನೇರ. ಎಲ್ಲ ನೇರ ಸರಳ ರೇಖೆಯ ಹಾಗೆ. ಕರ್ತೃ. ಕರ್ಮ. ಕ್ರಿಯಾಪದ. ಇದು ನಮ್ಮ ರೀತಿ. ಇದೇ ಇಂಗ್ಲಿಶಿನಲ್ಲಿ ಬರೆದಾಗ ಹೇಗಾಗುತ್ತದೆ ?

ಭೀಮ : ಹೀ ಈಟ್ಸ್ ಅ ಫ್ರೂಟ್.

ಮಾಧವ : ಇಲ್ಲೇ ಬಂತು ಗೋಟಾಳಿ.

ಭೀಮ : ಏನು ಗೋಟಾಳಿ ? ಏನು ತೊಂದರೆ ?

ಮಾಧವ : ಇದರಲ್ಲಿ ಕರ್ತೃ ಯಾವುದು ?

ಭೀಮ : ' ಹೀ ಹೀ ಹೀ.... '

ಮಾಧವ : ಒಪ್ಪಿದೆ. ಅನಂತರ ?

ಭೀಮ : ' ಈಟ್ಸ್ '

ಮಾಧವ : ' ಈಟ್ಸ್ ' ಏನು ?

ಭೀಮ : ಕ್ರಿಯಾಪದ.

ಮಾಧವ : ಕರ್ಮ ಎಲ್ಲಿ ಹೋಯ್ತು ?

ಭೀಮ : ಕೊನೆಗೆ.

ಮಾಧವ : ಹೌದಾ. ನಮ್ಮದು ಹೇಗೆ ಕರ್ತೃ - ಕರ್ಮ - ಕ್ರಿಯಾಪದ: ಇಂಗ್ಲಿಶರದ್ದು ಕರ್ತೃ - ಕ್ರಿಯಾಪದ - ಕರ್ಮ. ಕೊನೇಗ ಕರ್ಮ. ಎಲ್ಲಾ ಉಲ್ಟಾಪಲ್ಟಾ. ಇದೇ ತೊಂದರೆ ಆಗಿರೂದು. ನಮ್ಮ ಪದ್ಧತಿನೇ ಒಂದು. ಈ ಇಂಗ್ಲಿಶಿಂದೇ ಒಂದು. ಹೀಗಾಗಿ ಎಲ್ಲಾ ಗೋಟಾಳಿ. ಕಷ್ಟ ಬಂದಿರೂದೇ ಇಲ್ಲಿ.

ಭೀಮ : ನನಗೇನೂ ಕಷ್ಟ ಅನಸೂದಿಲ್ಲ ಬಿಡು.

ಮಾಧವ : ನಿನಗ ಅಲ್ಲ ಮಾರಾಯ. ನಿನಗ ಯಾವುದೂ ಕಷ್ಟ ಅಲ್ಲ. ಕಷ್ಟ ನನಗ. ನಮ್ಮ ಟೀಚರು ಇಂಥವೆ ವಾಕ್ಯ ಕೊಟ್ಟಿದ್ದಾರೆ. ಇಂಗ್ಲಿಶಿಗೆ ಅನುವಾದ ಮಾಡಬೇಕಂತೆ. ಈ ಅಷ್ಟಕ್ಕೂ ಕರ್ತೃ ಆದೊಡನೆ ಕ್ರಿಯಾಪದ ಹಾಕಬೇಕಲ್ಲ.

ಭೀಮ : ಅದೇ ಸುಲಭ ನೋಡು. ಇಷ್ಟು ದಿನ ನೀನು ಕರ್ತೃ ಆದೊಡನೆ ' ಕರ್ಮ ಕರ್ಮ ' ಅಂತ ಹಣೇ ಬಡ್ಕಿಕೊಳ್ತಿದ್ದಿಯಾ. ಈಗ ಕರ್ತೃ. ಕ್ರಿಯಾಪದ ಒಟ್ಟಿಗಿರಲಿ. ಇದೇ ಸರಿ. ಕರ್ತೃ ಕ್ರಿಯ ಸಹಿತ ಇರಬೇಕು. ಆಮೇಲೆ ಕರ್ಮ. ಕರ್ಮ ಅನುಸರಿಸಿ ಕ್ರಿಯ ಅಲ್ಲ. ಕ್ರಿಯೆಯ ಹಿಂದೆ ಕರ್ಮ ಬರಲಿ. ಮೊದಲೇ ಕರ್ಮ ಯಾಕೆ ಬರಬೇಕು ? ಆದ್ದರಿಂದ ಇಂಗ್ಲಿಶ್ ಪದ್ಧತಿಯೇ ಸರಿ ಅಂತೇನೆ ನಾನು.

ಮಾಧವ : ಹಾಗಾದರೆ ನೀನೇ ಹೇಳಿಬಿಡು. ಇಪ್ಪತ್ತು ವಾಕ್ಯ ಉಂಟು.

ಭೀಮ : ಇಪ್ಪತ್ತು ವಾಕ್ಯ ?

ಮಾಧವ : ಒಂದೆರಡು ಬಿಡು. ನಾನೇ ಬರೆಯುತ್ತೇನೆ ತಪ್ಪು ತಪ್ಪಾಗಿ. ಯಾಕೆಂದರೆ ಟೀಚರಿಗೆ ಗೊತ್ತಾಗಿಬಿಡುತ್ತದೆ – ಯಾವಾಗಲೂ ಸರಿಗಿಂತ ತಪ್ಪೇ ಹೆಚ್ಚು ಬರೆವವ ಇಂದೇಕೆ ಪೂರ್ತಿಯಾಗಿ ತಪ್ಪಿಲ್ಲದೆ ಬರೆದಿದ್ದಾನೆ ಅಂತ. ಒಂದು ವೇಳೆ ಅಂಥಾದೇನಾದರೂ ಆದರೂ ಸಂಶಯ ಬಂತೋ ವಾಕ್ಯಕ್ಕೆ ಒಂದೊಂದರಂತೆ ಇಪ್ಪತ್ತು ಪೆಟ್ಟು ಗ್ಯಾರಂಟೀ. ಮೇಲಾಗಿ ಬೋನಸ್ಸು ಅಂತ.... ಆದ್ದರಿಂದ....

ಭೀಮ : ಆದ್ದರಿಂದ ?

ಮಾಧವ : ಇದು ನೋಡು ಚಿರೋಟಿ. ಎಂಥಾ ರುಚಿ !

ಭೀಮ : ಓಹೋ. ಆ ಬಕಾಸುರನಿಗೆ ಕಳಿಸಿದ್ದು ಇರಬೇಕು ಅಲ್ಲಾ ? ನನಗೆ ಬೇಡ ಮಾರಾಯ....

ಮಾಧವ : ಎಲಾ ಗಣೆಯ. ತಿನ್ನು. ಸವಿ ನೋಡು. ನಿನಗಾಗಿ ತಂದಿದ್ದೇನೆ.

ಭೀಮ : ಹಾಗಾದರೆ ತಾ.

ಮಾಧವ : ಥ್ಲ್ಲ ಥ್ಲ್ಲ ಮುಟ್ಟಬೇಡ ಮಾರಾಯ. ಹಿಡಿ.

ಭೀಮ : ನನಗ ಬೇಡ. ನಾನು ಭಿಕ್ಷುಕನಲ್ಲ. ನಿನ್ನ ಚಿರೋಟಿಯೂ ಬೇಡ. ನಿನ್ನ ವಾಕ್ಯವೂ ಬೇಡ.

ಮಾಧವ : ತಪ್ಪಾಯ್ತು ಗಣೆಯಾ. ವೆರಿ ವೆರಿ ಸೋರಿ ಭೀಮರಾವ್. ಪ್ಲೀಸ್ ಎಕ್ಸ್‌ಕ್ಯೂಸ್ ಮಿ. ಈಗ ತಕೊ. ನೀನೂ ಒಂದಿನ ತಾರಲಾ.

ಭೀಮ : ನಮ್ಮದೆಲ್ಲ ನಿಮಗೆ ಲಾಯ್ಕ್ ಆಗತದಾ ?

ಮಾಧವ : ಹಾಗೇನೂ ಇಲ್ಲ. ಒಂದಿನ ತಾರಲಾ.

ಭೀಮ : ತರತೇನ. ನಮ್ಮದು ನಿಮ್ಮದು ಮಿಸಳಬಾಜಿ ಮಾಡುವ. ಮಜಾ ಇರ್ತದಲ್ಲಾ ?

ಕೈ ಮುಂದೆ ಮಾಡುತ್ತಾನೆ. ಅಷ್ಟರಲ್ಲಿ ಪಿರಿಯಡ್ ಗಂಟೆ ಆಗುತ್ತದೆ.

ದೃಶ್ಯ - ೪ : ಶಾಲೆ

ಶಿಕ್ಷಕರು : ಹಿಂದಿನ ಪಾಠ ಓದಿಕೊಂಡು ಬಂದಿದೀರಾ ?

ಎಲ್ಲರೂ : ಓ ಯಸ್ ಟೀಚರ್.

ಶಿಕ್ಷಕರು : ಪ್ರಶ್ನೆ ಕೇಳಲಾ ?

ಎಲ್ಲರೂ : ಓ ಯಸ್ ಟೀಚರ್.

ಶಿಕ್ಷಕರು : ಶಿವಾಜಿ ಯಾವ ರಾಜ್ಯ ಸ್ಥಾಪಿಸಿದ ?

ಶಾಮು : ಲೆಟ್ ಮಿ ಸೇ ಟೀಚರ್.

ರಾಮು : ನಾ ಹೇಳತೆ.

ನಾರಾಯಣ : ಮರಾಠಾ ಸಾಮ್ರಾಜ್ಯ.

ಶಿಕ್ಷಕರು : ಯಾರೋ ಅದು ಮಧ್ಯೆ ಬಾಯಿ ಹಾಕಿದವರು ?

ಮಾಧವ : ಪೇಶ್ವೆ ಸಾಮ್ರಾಜ್ಯ ಟೀಚರ್.

ಶಿಕ್ಷಕರು : ಮಾಧವ ಪೇಶವೆ ಮಧ್ಯೆ ಬಾಯಿ ಹಾಕಬೇಡ.

ಎಲ್ಲರೂ : ಇವನೇ ಸರ್ ಮಾಧವ ಪೇಶವೆ. (ಎಲ್ಲರೂ ನಗುವರು.)

ಶಿಕ್ಷಕರು : ನಾರಾಯಣ ಹೇಳಿದ್ದು ಸರಿ, ಮರಾಠಾ ಸಾಮ್ರಾಜ್ಯ ಸ್ಥಾಪಿಸಿದ. ಅವನಿಗೆ ಮಹಾರಾಜನ ಪಟ್ಟಾಭಿಷೇಕ ಆಯ್ತು.

ಎಲ್ಲರೂ : ಯಸ್ ಟೀಚರ್.

ಭೀಮ : ಅದು ಹೇಗಾಯ್ತು ಸರ್ ?

ಎಲ್ಲರೂ : ಓಹೊ ಹೊ ಎಲ್ಲರದೂ ಒಂದಾದರೆ ಇವನದೇ ಒಂದು. ದೊಡ್ಡ ಪಂಡಿತ.

ಶಿಕ್ಷಕರು : ಏನು ಭೀಮರಾವ್, ನಿನ್ನ ತಕರಾರು ?

ಭೀಮ : ತಕರಾರು ಇಲ್ಲ ಟೀಚರ್.

ಶಿಕ್ಷಕರು : ಹಾಗಾದರೆ ಏನು ಅನುಮಾನ ?

ಭೀಮ : ರಾಜನಾಗುವುದು ಕ್ಷತ್ರಿಯರು ಮಾತ್ರ ಅಲ್ಲವೇ ಟೀಚರ್ ?

ಶಿಕ್ಷಕರು : ಹೌದು. ಕ್ಷತ್ರಿಯರೇ ರಾಜ್ಯ ಆಳಬೇಕು. ಆದರೆ ಆತ ಬಲಶಾಲಿಯಾಗಿದ್ದ....

ಭೀಮ : ಬಲಶಾಲಿಯಾಗಿದ್ದರೆ ?

ಶಿಕ್ಷಕರು : ಬಲಶಾಲಿಯಾಗಿದ್ದ...

ಭೀಮ : ಆದರೆ ಬ್ರಾಹ್ಮಣರು ಒಪ್ಪಬೇಕಲ್ಲ ?

ಶಿಕ್ಷಕರು : ಹೌದು. ಆದರೆ ಅವನು ಶಾಸನ ಮಾಡುವ ಅಧಿಕಾರ ಹೊಂದಿದ್ದ. ಟೇಕ್ ಇಂಟು ಮೈಂಡ್. ಅದು ಮರಾಠಾ ಸಾಮ್ರಾಜ್ಯ ಅಂತ ಹೆಸರಾಯ್ತು.

ಮಾಧವ : ಅಲ್ಲ ಸರ್. ಅವನು ಸ್ಥಾಪಿಸಿದ್ದು ಹಿಂದೂ ಸಾಮ್ರಾಜ್ಯ ಅಂತ ನನ್ನ ಅಜ್ಜ ಹೇಳತಾನೆ ಟೀಚರ್.

ಶಿಕ್ಷಕರು : ಹಿಂದುವೂ ಅಲ್ಲ ಮುಂದುವೂ ಅಲ್ಲ. ಒಟ್ಟಾರೆ ರಾಜ್ಯ. ಅವನ ಸೈನ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರಿದ್ದರು. ಹಾಗೆಯೇ ಮುಸ್ಲಿಮ ರಾಜರಲ್ಲಿ ಹಿಂದೂ ಸೈನಿಕರೂ. ಅಧಿಕಾರಿಗಳೂ ಇದ್ದರು. ಆದ್ದರಿಂದ ಅವೆಲ್ಲ ರಾಜ್ಯಾಧಿಕಾರಗಳ ಮಧ್ಯೆಯ ಹೊಡೆದಾಟ ಹೋರಾಟ. ಧರ್ಮಗಳ ಮಧ್ಯೆಯದಲ್ಲ. ಅದಿರಲಿ. ಭೀಮಾ. ಇದನ್ನೆಲ್ಲ ನೀನು ಎಲ್ಲಿಂದ ತೀಕೊಂಡೆ ?

ಮಾಧವ : ಅದೆಲ್ಲ ನಮ್ಮ ಪುಸ್ತಕದಲ್ಲಿ ಇಲ್ಲ ಸರ್.

ಶಿಕ್ಷಕರು : ಮಾಧವ ನೀ ಸುಮ್ಮನಿರು.

ಭೀಮ : ಲೈಬ್ರರಿಯಿಂದ ಟೀಚರ್.

ಶಿಕ್ಷಕರು : ಗುಡ್, ಗುಡ್. ಎಷ್ಟು ಪುಸ್ತಕ ಓದಿದಿ ?

ಭೀಮ : ರಾಶಿ ರಾಶಿ. ಹಿಂದಿನ ವರ್ಷ ಏಳನೇ ತರಗತಿಯಲ್ಲಿ ಎಲ್ಲಾ ಪುಸ್ತಕ ಓದಿದೆ.

ಶಿಕ್ಷಕರು : ಶಹಬಾಸ್. ಹಾಗಾದರೆ ಈ ವರ್ಷ ನಿನಗಾಗೇ ಸ್ಪೇಶಲ್ ಲೈಬ್ರರಿ ಮಾಡಬೇಕಾದೀತು ! ಕೇಳಿದಿರೇನೊ ಮಕ್ಕಳ ? ಮಾಧವ, ನೀ ಯಾವ ಯಾವ ಪುಸ್ತಕ ಓದಿದಿಯಾ ?

ಮಾಧವ : ನಾನು ಓದೂದಿಲ್ಲ ಟೀಚರ್. ಬೇರೆ ಬೇರೆ ಪುಸ್ತಕ ಓದಿದರೆ ಹೋಂ ವರ್ಕ್ ಮಾಡಲಿಕ್ಕೆ ವೇಳೆ ಸಿಕ್ಕೂದಿಲ್ಲ.

ಶಿಕ್ಷಕರು : ನಾರಾಯಣ, ನೀನು ?

ನಾರಾಯಣ : ನಾನು ಹಿಂದಿನ ವರ್ಷ ರಜೆಯಲ್ಲಿ ಅಜ್ಜನ ಮನೆಗೆ ಹೋದಾಗ ಒಂದು ಪುಸ್ತಕ ಓದಿದ್ದೆ. **(ಎಲ್ಲರ ನಗು.)**

ಶಿಕ್ಷಕರು : ನೀನು, ರಾಮಾ ?

ರಾಮ : ನನಗ ಪುಸ್ತಕ ಹಿಡಿದ ಕೂಡಲೇ ನಿದ್ದೆ ಬಂದುಬಿಡತದ, ಸರ್. **(ಎಲ್ಲರ ನಗು.)**

ಶಿಕ್ಷಕರು : ಶಂಕರ, ನೀನು ?

ಶಂಕರ : ನಾನು ಪುಸ್ತಕಾನೇ ಓದೂದಿಲ್ಲ ಸರ್. ಬರೀ ಗೈಡ್ ಓದತೇನೆ.

ನಾರಾಯಣ : ಸರ್, ಸರ್.

ಶಿಕ್ಷಕರು : ಏನೋ ಅದು ನಾರಾಯಣ ?

ನಾರಾಯಣ : ಸರ್. ಭೀಮ ಹೊಸ ಶಾಲೆ ಮಾಡತಾನಂತೆ.

ಶಿಕ್ಷಕರು : ಕೂಡ್ರೊ ಸುಮ್ಮನೆ.

ಎಲ್ಲರೂ : ಹೌದು ಟೀಚರ್. ಅವನ ಶಾಲೆಗೆ ಬಸ್ಸ, ರಂಘು, ಪದ್ದು ಎಲ್ಲಾ ಹೋಗತಾರಂತೆ.

ಶಿಕ್ಷಕರು : ಯಾವಾಗ ?

ಎಲ್ಲರೂ : ರಾತ್ರಿ.

ರಾಮ : ಹಾದಿ ಮೇಲೆ. ಮುನ್ಸಿಪಾಲ್ಟಿ ದೀಪದ ಕೆಳಗೆ.

ಎಲ್ಲರೂ ಹೋ ಎಂದು ಕೂಗುವರು.

ಶಿಕ್ಷಕರು : ಸ್ಯಾಲೆನ್ಸ್. ಸ್ಯಾಲೆನ್ಸ್. **(ಮೇಜಿಗೆ ಬೆತ್ತ ಬಡಿಯುವರು)** ಈಗ ಹಾಜರಿ ಹೇಳಿ.

ಎಲ್ಲರೂ : ಹಾಜರಿ ಆದ ಕೂಡಲೇ ಗೇಮ್ಸ್ ಪಿರಿಯಡ್ ಟೀಚರ್.

ಶಿಕ್ಷಕರು : ಸರಿ, ಸರಿ. ನಾರಾಯಣ ಉಪಾಧ್ಯ.

ನಾರಾಯಣ : ಯಸ್ ಸರ್.

ಶಿಕ್ಷಕರು : ಎಲಿಜಾ ಕೋಸ್ತಾ.

ಎಲಿಜ : ಯಸ್ ಟೀಚರ್.

ಶಿಕ್ಷಕರು : ರಾಮು ಶಾಸ್ತ್ರಿ.

ರಾಮ : ಹೀಯರ್ ಟೀಚರ್.

ಶಿಕ್ಷಕರು : ಶಂಕರ ಜೋಯಿಶಿ.

ಶಂಕರ : ಪ್ರೆಸಂಟ್ ಟೀಚರ್.

ಶಿಕ್ಷಕರು : ಭೀಮ ಆಂಬೇವಾಡಕರ್.

ಎಲ್ಲರೂ : (ನಗುವರು.)

ಶಿಕ್ಷಕರು : ಏನದು ಗೌಜು. ಬಿ ಸ್ಯಾಲೆಂಟ್.

ಭೀಮ : ಸರ್. ಇವರು ನನಗೆ ಇನ್ಸಲ್ಟ್ ಮಾಡತಾರೆ. ಹೋದ ಹೋದಲ್ಲೆಲ್ಲ 'ಅಂಬೇವಾಡಕರ, ಅಂಬೇವಾಡಕರ್' ಅಂತ ಚಪ್ಪಾಳೆ ಹಾಕಿ ಕುಣೀತಾರೆ. ಅಂಬೇವಾಡಕರ್ ಅಂದರೆ ಮಹಾರರ ಹೆಸರಂತೆ. **(ತಲೆ ತಗ್ಗಿಸಿ ನಿಲ್ಲುವನು)** ಅದನ್ನು ಕೇಳಿದರೂ ಮೈಲಿಗೆಯಂತೆ.

ಶಿಕ್ಷಕರು : ಓಹೋ! ನಿನ್ನ ಅಡ್ಡ ಹೆಸರು ಕೇಳಿದರೂ ಮೈಲಿಗೆ ಆಗತದಂತೊ! ಭೀಮಾ. ಇನ್ನು ಮೇಲೆ ನೀನು 'ಅಂಬೇವಾಡಕರ' ಅಲ್ಲ: ಅಂಬೇಡ್ಕರ. ನಾನು ಬ್ರಾಹ್ಮಣ. ನನ್ನ ಅಡ್ಡ ಹೆಸರು 'ಅಂಬೇಡ್ಕರ'. ನನ್ನ ಹೆಸರೇ ನಿನ್ನದಾಗಲೀ. ಇನ್ನು ಮುಂದೆ ನೀನು ಭೀಮರಾವ್ ಅಂಬೇಡ್ಕರ.

ಭೀಮ ತಲೆ ಎತ್ತಿ ನೋಡುವನು. ಬೆಲ್.

ದೃಶ್ಯ - ೫

ಆಟದ ಬಯಲು. ಮಕ್ಕಳು ಎರಡು ಪಕ್ಷ ರಚಿಸುವರು. ಒಂದು ಪಕ್ಷಕ್ಕೆ ಒಬ್ಬ ಸದಸ್ಯ ಕಡಿಮೆ ಬೀಳುವನು. ಅವರು ಭೀಮನನ್ನು ಕರೆಯುತ್ತಾರೆ.

ಭೀಮ : ನಾನು ಬರೂದಿಲ್ಲ. ನನಗೆ ಯಾಕೊ ಹಾಗೆ ನಗೆಯಾಡಿದಿರಿ?

ರಾಮ : ಯಾರು. ನಾನು? ದೇವರಾಣೆ ನಾನು ನಗೆಯಾಡಲಿಲ್ಲ.

ಮಾಧವ : ನಾನು ಬೇಕಾದರೆ ಕುತ್ತಿಗೆ ಮುಟ್ಟಿ ಹೇಳತೇನೆ– ನಾನು ನಗೆಯಾಡಲಿಲ್ಲ **(ಹತ್ತಿರ ಬಂದು ಸಣ್ಣಗೆ)** ನಾನು ಚಿರೂಟಿ ಕೊಡಲಿಲ್ಲಾ?

ಶಂಕರ : ನಾ ನಗೆಯಾಡಲಿಲ್ಲ ಭೀಮಾ, ಹ್ಲಾ. ನೀ ಕೆಳಮೋರೆ ಹಾಕ್ಕಂಡಿದ್ದೆ. ಕಾಣಲಿಲ್ಲ.

ಭೀಮ : ನೀವೆಲ್ಲ ನಗೆಯಾಡಿದಿರಿ. ಈಗ ಸುಳ್ಳು ಹೇಳತೀರಿ.

ಎಲ್ಲರೂ : ಇಲ್ಲಪ್ಪಾ ಇಲ್ಲ. ಇನ್ನು. ದೇವರಾಣೆಗೂ ನಗೆಯಾಡೂದಿಲ್ಲ. ನೀನು ಭೀಮರಾವ್ ಅಂಬೇಡ್ಕರ. ಬಾ, ಬಾ ಪ್ಲೀಸ್.

ಭೀಮ : ಬರತೇನೆ. ನೋಡುವ.

ಕಬಡ್ಡಿ ಆಟ ಆಡುತ್ತಾರೆ. ಭೀಮನ ಪಕ್ಷದಲ್ಲಿ ಎಲ್ಲರೂ ಔಟ್ ಆಗಿ ಭೀಮ ಉಳಿಯುತ್ತಾನೆ. ಆತ ಕಬಡ್ಡಿ ಒಯ್ಯುತ್ತಾನೆ. ಆತನಿಗೆ ಮುತ್ತಿಗೆ ಹಾಕುತ್ತಾರೆ. ಭೀಮ ಇವರನ್ನೆಲ್ಲ ಎಳೆದುಕೊಂಡು ಮಧ್ಯದ ಗೆರೆ ಮುಟ್ಟುತ್ತಾನೆ. ಭೀಮನ ಪಕ್ಷದವರು ಹಿಪ್ ಹಿಪ್ ಹುರ್ರೇ ಎಂದು ಕುಪ್ಪಳಿಸುತ್ತಾರೆ. ಶಂಕರನ ಪಕ್ಷದವರು ತಕರಾರು ತೆಗೆಯುತ್ತಾರೆ.

ಶಂಕರ : ಇದನ್ನು ನಾವು ಒಪ್ಪುವುದಿಲ್ಲ.

ಭೀಮ : ಯಾಕೆ?

ರಾಮ : ನಿನ್ನನ್ನ ಆಟಕ್ಕೆ ತೆಗೆದುಕೊಂಡಿದ್ದೇ ತಪ್ಪು.

ಭೀಮ : ನೀವೆಲ್ಲ ಬಾ ಅಂದದ್ದಲ್ಲಾ?

ಶಂಕರ : ನೀನು ಯಾಕೆ ನಮ್ಮನ್ನು ಮುಟ್ಟಿದೆ?

ಭೀಮ : ಇದೊಳ್ಳೆ ಕಾಟ. ನನ್ನ ಹಿಡಿದದ್ದೇಕೆ?

ಇತರರು : ಮಹಾರ, ಹೊಲೆಯ.

ಭೀಮ ಏರಿ ಹೋಗುತ್ತಾನೆ. ಉಳಿದವರು ' ಬಂದರು, ಬಂದ್ರು, ಮುಟ್ಟಿಬಿಡತಾರೆ, ಮೈಲಿಗಿ ' ಎಂದು ಓಡುತ್ತಾರೆ. ಶಾಲೆ ಗಂಟೆ ಹೊಡೆಯುತ್ತದೆ.

ದೃಶ್ಯ - ೬

ಶಿಕ್ಷಕರು : ಎಲ್ಲರೂ ಬಂದಿದ್ದೀರಲ್ಲ ? ಇನ್ನು ಒಂದೇ ವಾರ ಉಳಿಯಿತು ನಾಟಕ ಪ್ರದರ್ಶನಕ್ಕೆ.

ಶ್ಯಾಮಲೆ : ಎಂಟು ದಿನ ಟೀಚರ್.

ಶಿಕ್ಷಕರು : ಹೌದಮ್ಮ. ಒಂದು ವಾರದ ಮೇಲೆ ಒಂದು ದಿನ. ಆಯ್ತು ?

ಮಕ್ಕಳು : ಅಮ್ಮ... ಅಮ್ಮ... ಹಹಹ

ಶ್ಯಾಮಲೆ : ನೋಡಿ ಟೀಚರ್. ನನಗೆ 'ಅಮ್ಮ ಅಮ್ಮ' ಅಂತ ಟೀಸ್ ಮಾಡ್ತಾರೆ.

ಶಿಕ್ಷಕರು : (ಛಡಿ ಬಡಿದು) ಸೈಲೆನ್ಸ್. ಈ ವಾರದಲ್ಲಿ ಚೆನ್ನಾಗಿ ರಿಹರ್ಸಲ್ ಮಾಡಬೇಕು. ಜಿಲ್ಲಾ ಮಟ್ಟದ ಸ್ಪರ್ಧೆ. ಹದಿನೈದು - ಇಪ್ಪತ್ತು ತಂಡಗಳು ಬರತವೆ. ಯಾವುದಕ್ಕೆ ಪ್ರಶಸ್ತಿ ?

ಮಕ್ಕಳು : ನಮ್ಮದಕ್ಕೇ.

ಶಿಕ್ಷಕರು : ಅ ಹ ಹ ಹ.... ನಮ್ಮದಕ್ಕೇ ಅಲ್ಲ. ಚೆನ್ನಾಗಿ ಯಾರು ನಾಟಕ ಮಾಡತಾರೊ. ಅವರಿಗೆ. ನಾಟಕ ಎಂದರೆ ಏನು ಅಂತ ತಿಳಕೊಂಡಿದೀರಿ !

ಶಂಕರ : ಚಲೋ ಡ್ರೆಸ್ ಮಾಡಿಕೊಳ್ಳೂದು. ಕುಣಿಯೂದು.

ಶಿಕ್ಷಕರು : ಅಲ್ಲ, ಹ ಹ. ಕುಣಿಯೋದು. ಅಲ್ಲ.

ರಾಮು : ಮೊಕ ತುಂಬ ಬಣ್ಣ ಬಳಿದುಕೊಳ್ಳೂದು.

ಶಿಕ್ಷಕರು : ಹ ಹ ಹ ..... ಅಲ್ಲ.

ನಾರಾಯಣ : ನಮ್ಮ ಶ್ಯಾಮಲಮ್ಮನ ನರ್ತನ ಇಟ್ಟುಬಿಡೂದು ಸರ್.

ಶ್ಯಾಮಲೆ : ನೋಡಿ ಟೀಚರ್. ನನಗೆ 'ಶ್ಯಾಮಲಮ್ಮ' ಅಂತ ಟೀಸ್ ಮಾಡತಾನೆ.

ಶಿಕ್ಷಕರು : ನೀನು ಸುಮ್ಮನಿರಮ್ಮ. (ಎಲ್ಲರೂ ನಗುತ್ತಾರೆ) ಸೈಲೆನ್ಸ್ ಸೈಲೆನ್ಸ್.

ಶ್ಯಾಮ : ಯಾವುದೂ ಅಲ್ಲ ಟೀಚರ್. ಮಾತು ಚೆನ್ನಾಗಿ ಬಾಯಿಪಾಟ ಮಾಡಿ ಕತ್ತೆ ಹಾಗೆ ಒದರೂದು.

ಶಿಕ್ಷಕರು : ಶ್ಯಾಮ. ನಿನ್ನ ನಾಲಿಗೆ ಉದ್ದ ಆಯ್ತು.

ಮಾಧವ : ಸರ್. ಸರ್. ಅವ ಹೀಗೆ ನಾಲಿಗ ತೆಗೆದು ಮೂಗಿನ ತುದಿಗೆ ತಾಗಿಸಿ ನಮಗೂ ಹಾಗೆ ಮಾಡಲು ಚಾಲೇಂಜ್ ಮಾಡತಾನೆ.

ಶಿಕ್ಷಕರು : ಏನದು ಶ್ಯಾಮ. ಸ್ಟುಪಿಡ್.

ಶ್ಯಾಮ : ಚೆನ್ನಾಗಿ ಅಳೂದು.

ಶಿಕ್ಷಕರು : ಹೌದೌದು. ನಾನು ಅಳೂದು. ನಿಮ್ಮೆಲ್ಲರನ್ನ ಕಟ್ಟಿಕೊಂಡು.

ಮಕ್ಕಳು : ಹಾಗಾದರೆ ನೀವೇ ಹೇಳಿ ಟೀಚರ್.

ಶಿಕ್ಷಕರು : ಈಗ ನೀವು ಹೇಳಿದ್ದು ಎಲ್ಲವೂ ಹೌದು. ಆದರೆ ಅವೆಲ್ಲವನ್ನು ಶಿಸ್ತಾಗಿ. ಘಟನೆಗೆ ಸಂಬಂಧಿಸಿ, ಭಾವನೆಗೆ ಸಂಬಂಧಿಸಿ. ಹಾವ-ಭಾವದೊಡನೆ ಸ್ಪಷ್ಟವಾಗಿ ಮಾತಾಡಿ. ಪ್ರೇಕ್ಷಕರೆದುರು ನಟಿಸಬೇಕು. ನೀವು ನೀವೇ ಆಗಿರದೆ. ಕಥೆಯೊಳಗಿನ ಪಾತ್ರ ಆಗಬೇಕು. ದುಃಖದಲ್ಲಿ ಧ್ವನಿ ತಗ್ಗಿಸಿ. ಸಿಟ್ಟಿನಲ್ಲಿ ಧ್ವನಿ

ವಿಸ್ತರಿಸಬೇಕು. ಹಾಸ್ಯ ಬಂದಾಗ ನಗಿಸಬೇಕು. ಸಾತ್ವಿಕ ಪಾತ್ರದಲ್ಲಿ ಗಂಭೀರವಾಗಿರಬೇಕು. ಬುದ್ಧ ಎಂದರೆ. ಚರಿತ್ರೆ ಪುಸ್ತಕದಲ್ಲಿ ಓದಿದ್ದೀರಲ್ಲ ? ಹಾಗೆ ಗಂಭೀರ ಮುಖಮುದ್ರೆ. ಸಾವಧಾನ ಮಾತು ಇರಬೇಕು. ಅಂಗುಲಿಮಾಲ ಕ್ರೂರಿ. ಕಿರಚಬೇಕು.

ಮಕ್ಕಳು : ಹಾಗೇ ಮಾಡತೇವೆ ಟೀಚರ್.

ಶಿಕ್ಷಕರು : ಮೊದಲು ಒಂದು ಹಾಡು. ಯಾರು ? ಶಾಂತಿ. ಭಾನು. ಶಾರದೆ. ಎಲಿಜಾ... ಇದ್ದೀರಲ್ಲ ? ಶುರು. ಹಾಡು ಶುರುವಾಗಲಿ.

ಹಾಡು :

ಸುತ್ತೆಲ್ಲ ನರಳುತಿವೆ ನೂರೊಂದು ಜೀವ
ಮೂಡಣದಿ ಮೂಡುತಿದೆ ಹೊಸದೊಂದು ಭಾವ
ಸುತ್ತೆಲ್ಲ ಮಲಗಿರಲು ಇವನೊಬ್ಬ ಎದ್ದ
ಬೆಳಕನ್ನು ತಾ ತರುವೆ ಎನುತಿಹನು ಬುದ್ಧ

ಹಾಡು ಮುಗಿಯುತ್ತಿದ್ದಂತೆ ಹಿಂದಿನಿಂದ

ಬುದ್ಧಂ ಶರಣಂ ಗಚ್ಛಾಮಿ. ಧಮ್ಮಂ ಶರಣಂ ಗಚ್ಛಾಮಿ. ಸಂಘಂ ಶರಣಂ ಗಚ್ಛಾಮಿ. ಮಹಾಭಿಕ್ಷು ತಥಾಗತ ಬುದ್ಧನಿಗೆ ಜಯವಾಗಲಿ.

ಬುದ್ಧ : **(ಮಧ್ಯ ಕುಳಿತು, ಹಿಂದಿನಿಂದ ಗಲಾಟೆ ಗಮನಿಸಿ)**
ಆನಂದ. ಏನದು ಗಲಾಟೆ ? ಆಕ್ರಂದನ ಯಾರದು ? ಯಾಕೆ ?

ಒಬ್ಬ ಬ್ರಾಹ್ಮಣನನ್ನು ಎಳೆದು ತರುವರು.

ಭಿಕ್ಷು : ಮಹಾತ್ಮರೇ. ಈತ ಉಜ್ಜಯಿನಿ ನಗರದ ಬ್ರಾಹ್ಮಣ.

ಬುದ್ಧ : ಇವನು ಮಾಡಿದ ಅಪರಾಧವೇನು ?

ಭಿಕ್ಷು : ತಥಾಗತರು ಬ್ರಾಹ್ಮಣ ಧರ್ಮವನ್ನು ಹಾಳು ಮಾಡುತ್ತಿರುವಿರೆಂದೂ. ನಾಸ್ತಿಕ ಧರ್ಮ ಪ್ರಸಾರ ಮಾಡುತ್ತಿರುವರೆಂದೂ ಹಳಿಯುತ್ತಾನೆ.

ಬುದ್ಧ : ಇವನಿಗೆ ಯಾವ ಶಿಕ್ಷೆ ವಿಧಿಸಬೇಕೆಂದಿರುವಿರಿ ?

ಭಿಕ್ಷು : ಇವನ ಯಜ್ಞೋಪವೀತವನ್ನು ಹರಿದೊಗೆದು. ಧರ್ಮಾಂತರ ಮಾಡಿ. ಬೌದ್ಧ ಧರ್ಮಕ್ಕೆ ಸೇರಿಸಿಕೊಳ್ಳಬೇಕೆಂದು....

ಬುದ್ಧ : ಆನಂದ....

ಆನಂದ : ಪ್ರಭು....

ಬುದ್ಧ : ಈ ಬ್ರಾಹ್ಮಣ ಹಸಿವಿನಿಂದ ಬಳಲಿದ್ದಾನೆ.

ಆನಂದ : ಮೇಲಾಗಿ ಸಾಕಷ್ಟು ಥಳಿಸಿರಲೂ ಸಾಕು. ನರಳುತ್ತಿದ್ದಾನೆ.

ಬುದ್ಧ : ಇವನಿಗೆ ಯಾವ ಶಿಕ್ಷೆ ?

ಆನಂದ : ಇವನು ಹಸಿವೆಯಿಂದ ಸಾಯುತ್ತಿದ್ದಾನೆ. ಮೊದಲು ಇವನಿಗೆ ಆಹಾರ ನೀಡಬೇಕು.

ಬುದ್ಧ : ಭಿಕ್ಷುಗಳೇ. ಈತ ಹಸಿದಿದ್ದಾನೆ. ಮೊದಲು ಅನ್ನ ಪಾನ ಕೊಡಿ.

ಆನಂದ : ಬಹಳ ಬಳಲಿದ್ದಾನೆ: ವಿಶ್ರಾಂತಿ ಕೊಡಿ.

ಬುದ್ಧ : ಬಂಧನದಿಂದ ಬಿಡುಗಡೆ ಮಾಡಿ. ಆಮೇಲೆ ಮನಸಿಗೆ ಕಂಡ ಕಡೆ ಹೋಗಲಿ.

ಆನಂದ : ಒಂದು ವೇಳೆ....

ಬುದ್ಧ : ನನ್ನ ಬಳಿಗೆ ಬರುವುದಾದರೆ ಬರಲಿ.

ಭಿಕ್ಷು : ಹಾಗೇ ಆಗಲಿ.

ಕರೆದುಕೊಂಡು ಹೋಗುವರು.

ಬುದ್ಧ : ಅನ್ನವೇ ಜೀವ. ಚೇತನ. ಬುದ್ಧಿ. ನೀರು. ಆಹಾರ. ಮನೆ. ಬಟ್ಟೆ ಇದು ಪ್ರಾಥಮಿಕ ಆವಶ್ಯಕತೆ. ಇದು ಎಲ್ಲರಿಗೂ ಬೇಕು. ಉಳಿದದ್ದು ವಿವೇಕಕ್ಕೆ ಬಿಟ್ಟದ್ದು.

ಆನಂದ : ದೇವಾ, ದುಃಖಕ್ಕೆ ಯಾವುದು ಕಾರಣ ?

ಬುದ್ಧ : ಆನಂದ, ದುಃಖಕ್ಕೆ ಅತ್ಯಾಶೆಯೇ ಕಾರಣ.

ಆನಂದ : ಅದು ಹೇಗೆ ?

ಬುದ್ಧ : ಅತ್ಯಾಶೆಯಿಂದ ಆರೋಗ್ಯ ಕೆಡುತ್ತದೆ: ಆರೋಗ್ಯ ಕೆಡುವುದರಿಂದ ಇಂದ್ರಿಯಗಳು ಕೆಡುತ್ತವೆ. ಇವೆರಡೂ ವೈಯಕ್ತಿಕ ದುಃಖಕ್ಕೆ ಕಾರಣ. ಆದರೆ ಇನ್ನೊಂದು ಇದೆ.

ಆನಂದ : ಅನುಗ್ರಹವಾಗಲಿ.

ಬುದ್ಧ : ಆನಂದ. ಸಂಪತ್ತಿನ ಅತ್ಯಾಶೆಯೇ ಸಾಮಾಜಿಕ ದುಃಖಕ್ಕೆ ಕಾರಣ.

ಆನಂದ : ವಿವರಿಸಬಹುದೇ ?

ಬುದ್ಧ : ಸಂಪತ್ತು ಎನ್ನುವುದು ೧೦೦ ಎಂದು ತಿಳಿ. ಜನರೂ ನೂರು ಇದ್ದಾರೆಂದು ತಿಳಿ. ಆಗ ಸಂಪತ್ತನ್ನು ಸಮನಾಗಿ ಹಂಚಿದರೆ ಒಬ್ಬೊಬ್ಬರಿಗೆ ಎಷ್ಟು ಬರುತ್ತದೆ ?

ಆನಂದ : ಒಂದೊಂದು.

ಬುದ್ಧ : ಇದು ನ್ಯಾಯದ ಹಂಚಿಕೆ. ಇಲ್ಲಿ ದುಃಖಕ್ಕೆ ಯಾರೂ ಕಾರಣರಾಗಲಿಲ್ಲ. ಯಾರಲ್ಲೂ ಅತ್ಯಾಶೆ ಇಲ್ಲದ್ದರಿಂದ ದೋಚುವಿಕೆ ನಡೆಯಲಿಲ್ಲ. ಸಮಾನತೆ ಸಾಧ್ಯವಾಯಿತು. ಯಾರಿಗೂ ದುಃಖವಿಲ್ಲ.

ಆನಂದ : ಹಾಗಾದರೆ ದುಃಖಕ್ಕೆ ಕಾರಣವಾದುದು ಹೇಗೆ ?

ಬುದ್ಧ : ೧೦೦ ಸಂಪತ್ತಿನಲ್ಲಿ ಇಪ್ಪತ್ತೈದರಂತೆ ಇಬ್ಬರು ದೋಚಿಕೊಂಡರೆ ?

ಆನಂದ : ಉಳಿದ ೯೮ ಜನರಿಗೆ ೫೦ ಸಂಪತ್ತು ಉಳಿಯಿತು. ಒಬ್ಬರಿಗೆ ಒಂದು ಸಹ ಬರದು.

ಬುದ್ಧ : ಆ ಇಬ್ಬರ ಅತ್ಯಾಶೆ ೯೮ ಜನರ ಬಡತನಕ್ಕೆ ಅಂದರೆ, ದುಃಖಕ್ಕೆ ಕಾರಣವಾಯಿತು.

ಆನಂದ : ಹಾಗಾದರೆ ಸಂಪತ್ತನ್ನು ನಾಶ ಮಾಡಬೇಕೆ ?

ಬುದ್ಧ : ನಾನು ಹಾಗೆ ಹೇಳುತ್ತಿಲ್ಲ. ಆನಂದ. ಸಂಪತ್ತನ್ನೇ ನಾನು ನಿರಾಕರಿಸುವುದಿಲ್ಲ. ಅದು ತೀರಾ ಆವಶ್ಯಕ. ಆದರೆ ಅದು ಕೆಲವರಲ್ಲೇ ಶೇಖರಣೆ ಆಗಬಾರದು. ಅಂದರೆ ಖಾಸಗಿ ಸಂಪತ್ತು ದುಃಖಕ್ಕೆ ಕಾರಣವಾಗುತ್ತದೆ. ಆದ್ದರಿಂದ ಆನಂದ. ಅದಕ್ಕೆ ನಮ್ಮ ಸಂಘವೇ ಉದಾಹರಣೆಯಾಗಲಿ. ಸಂಘದ ಸದಸ್ಯರು ಯಾರೂ ಖಾಸಗಿ ಆಸ್ತಿ ಹೊಂದತಕ್ಕದ್ದಲ್ಲ.

ಆನಂದ : ದೇವ. ನೀವು ವೈದಿಕ ಧರ್ಮವನ್ನು ಹಾಳುಗೆಡುವುತ್ತೀರಿ ಎಂದು ಆ ಬ್ರಾಹ್ಮಣ ಹೇಳಿದನಂತೆ.

ಬುದ್ಧ : ಆನಂದ, ಅದು ತಪ್ಪು ತಿಳಿವಳಿಕೆ. ಯಾವ ಧರ್ಮದಲ್ಲಿ ಅಸಮಾನತೆ. ಮೌಢ್ಯ ನೆಲೆಸಿರುತ್ತದೋ ಆ ಧರ್ಮ ತನ್ನಿಂದ ತಾನೇ ನಾಶ ಹೊಂದುತ್ತದೆ. ಯಾವ ಧರ್ಮ ತನ್ನನ್ನು ವಿಮರ್ಶೆಗೆ ಒಡ್ಡಿಕೊಳ್ಳುವುದಿಲ್ಲವೋ ಆ ಧರ್ಮ

ತಿರಸ್ಕಾರಕ್ಕೆ ಪಕ್ಕಾಗುತ್ತದೆ. ವರ್ಣ ಧರ್ಮ ಒಂದು ಭಯಂಕರ ಮೌಢ್ಯ. ಅಸಮಾನತೆಯ ರೂಪ. ಅನ್ಯಾಯದ ಮೂಲ.

ಆಗಂತುಕ : (ಒಬ್ಬ ಆಗಂತುಕನ ಆಗಮನ) ತಥಾಗತರಿಗೆ ಆಗಂತುಕನ ನಮಸ್ಕಾರ. ತಥಾಗತರು ಇಂದು ನಮ್ಮ ಮನೆಗೆ ಭಿಕ್ಷಕ್ಕೆ ಬರಬೇಕು.

ಒಬ್ಬ ಭಿಕ್ಷು : ಆದಾಗದು. ಆತ ಚಾಂಡಾಲ. ಅಸ್ಪೃಶ್ಯ.

ಬುದ್ಧ : (ತುಸು ನಕ್ಕು ನಂತರ ಗಂಭೀರವಾಗಿ) ಅಸ್ಪೃಶ್ಯತೆ ಒಂದು ಮೌಢ್ಯ. ಒಂದು ಅನ್ಯಾಯ. ಅದು ಸಮಾಜಕ್ಕೆ ಹತ್ತಿದ ಒಂದು ರೋಗ. ಅದನ್ನು ಎಷ್ಟು ಬೇಗ ಗುಣಪಡಿಸಲಾಗುತ್ತದೋ ಅಷ್ಟು ಬಲಶಾಲಿಯಾಗುತ್ತದೆ ಆ ಸಮಾಜ. ಆನಂದ. ನಾನು ಆತನ ಮನೆಗೆ ಹೋಗುತ್ತೇನೆ. ಯಾರೂ ಆಕ್ಷೇಪಿಸಬಾರದು. ಮತ್ತು ಆತನನ್ನು ನಮ್ಮ ಸಂಘದ ಮುಖ್ಯಸ್ಥನನ್ನಾಗಿ ಮಾಡಬೇಕು.

ಆನಂದ : ತಮ್ಮ ಆರೋಗ್ಯ ಸರಿಯಿಲ್ಲ....

ಬುದ್ಧ : ಗೊತ್ತು. ಆದರೆ ಅದು ನೆಪವಾಗುತ್ತದೆ. ನನಗೆ ಏನೇ ಆದರೂ ಯಾರೂ ಅವನನ್ನು ಶಿಕ್ಷಿಸಕೂಡದು. ಯಾವ ಧರ್ಮ ನಮ್ಮನ್ನು ಶೋಷಣೆಗೆ ಗುರಿಪಡಿಸಿತೊ ಅದನ್ನು ಸರಿಪಡಿಸಬೇಕು.

ಶಂಕರ : ತಪ್ಪು, ತಪ್ಪು ಟೀಚರ್. ಇದು ಪುಸ್ತಕದಲ್ಲಿ ಇಲ್ಲ. ಭೀಮ ಕೈಯಿಂದ ಹಾಕಿ ಹೇಳುತ್ತಾನೆ.

ಶಿಕ್ಷಕರು : ಭೀಮಾ. 'ಯಾರೂ ಅವನನ್ನು ಶಿಕ್ಷಿಸಕೂಡದು' ಎನ್ನುವಲ್ಲೇ ನಿನ್ನ ಮಾತು ನಿಲ್ಲಬೇಕಲ್ಲ.

ಭೀಮ : ತಪ್ಪಾಯ್ತು ಟೀಚರ್, ಹಾಗೆ ಹೇಳಿ ಹೋಯ್ತು.

ಶಿಕ್ಷಕರು : ಅದೇ ನಟನ ಗುಟ್ಟು. ನೀನು ಬುದ್ಧನ ಪಾತ್ರದಲ್ಲಿ ತಲ್ಲೀನನಾಗಿಯೇ ಬಿಟ್ಟೆ. ಹಾಗೆ ಆಗಬಾರದಯ್ಯ. ಬುದ್ಧನಂತೆ ನಟಿಸಬೇಕು. ಆಗ ಹೇಳಿದೆನಲ್ಲ. ನಾಟಕ ಎಂದರೆ ಏನು ಎಂದು. ಇದೂ ನಾಟಕದಲ್ಲಿ ಮುಖ್ಯ ಅಂಶ. ಅದು ಇರಲಿ. ತಿದ್ದಿಕೊಂಡರಾಯಿತು... ಶಂಕರ. ಎದುರಿನವರು ಮಾತು ತಪ್ಪಿಬಿಟ್ಟರೆ. ನೀನು ನಿನ್ನ ಪಾತ್ರವನ್ನು ಬಿಟ್ಟುಬಿಡುವುದೇನು ?

ಶಂಕರ : ಹಾಗಲ್ಲ ಟೀಚರ್. 'ಅವನನ್ನು ಶಿಕ್ಷಿಸಕೂಡದು' ಎಂಬ ಮಾತಾದ ಕೂಡಲೇ ನನ್ನ ಮಾತಿದೆ. ನಾನು ಹಾಗೇ ಬರೆದುಕೊಂಡಿದ್ದೇನೆ. ಅಲ್ಲದೆ ಬೇರೆ ಮಾತು ಬಂದುಬಿಟ್ಟರೆ ನನ್ನ ಮಾತಿಗೆ ಟಚ್ ತಪ್ಪಿಹೋಗಿ ಮಾತು ಮರೆತುಹೋಗುತ್ತದೆ. ನಾನು ಯಾವಾಗ ಮಾತಾಡಬೇಕೆಂದೇ ತಿಳಿಯೂದಿಲ್ಲ.

ಶಿಕ್ಷಕರು : ಸರಿ. ಸರಿ. ನೀನು ಸರಿಯಾಗೇ ಹೇಳಿದೆ. ತಿಳಿಯಿತಲ್ಲ ಭೀಮಾ. ನಾಳೆ ಸರಿಯಾಗೇ ಮಾಡುವ.

ದೃಶ್ಯ - ೭ : ಮೊದಲ ದೃಶ್ಯದಂತೆ

ಭೀಮ : ಸಿಟಿ ಕ್ಲಾಕ್ ಹನ್ನೆರಡು ಹೊಡೆಯಿತು. ಯಾರೂ ಎದ್ದಿಲ್ಲ. ಮಗ್ಗಲು ಮರಚುತ್ತಿದ್ದಾರೆ, ಅಷ್ಟೇ.

ದೀಪ ಹಚ್ಚುವನು.

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡೆಸೆನ್ನನು....

ಮಲಗಿದವರ ಕಡೆ ನೋಡುತ್ತಾನೆ.

ಹೇಳಿ ನನ್ನಡಿಯಿಡಿದು ಬಲುದೂರ ನೋಟವನು
ಕೇಳಿದೊಡನೆಯ ಸಾಕು ನನಗೊಂದು ಹೆಜ್ಜೆ

ಹುಡುಗ ೧ : ನಾನು ಕಣ್ಣು ಮುಚ್ಚಿಯೇ ಇದ್ದೆ. ಕಣ್ಣು ಒಡೆದಾಗ ಬೆಳಗಾಗಿಬಿಟ್ಟಿದೆ.

ಹುಡುಗ ೨ : ಬೆಳಗಾದುದಲ್ಲ, ಭೀಮ ದೀಪ ಹಚ್ಚಿದ.

ಹುಡುಗ ೩ : ಓ, ನಾನೂ ಓದಬೇಕು.

ಹುಡುಗ ೪ : ನನಗೂ ಬೆಳಕು ಬೇಕು.

ಭೀಮ : ನೀವು ನನ್ನನ್ನೇ ಬಯ್ಯುತ್ತೀರೇನೊ ಅಂದು ಹೆದರಿದ್ದೆ.

ಹುಡುಗಿ : ಯಾಕೆ ಬಯ್ಯುವುದು ? ನಮಗೂ ಪರೀಕ್ಷೆ ಅಲ್ಲವಾ ?

ಹುಡುಗ : ನಾವು ಅದಕ್ಕೇ ಬಂದಿದ್ದಲ್ಲವಾ ?

ಹುಡುಗಿ : ಅವನಿಗೆ ಹಿಂದಿನದು ನೆನಪಾಗಿರಬೇಕು.

ಭೀಮ : ಆದರೆ ಅಲ್ಲಿ ನೋಡಿ. ಕೆಂಪ, ಹೇಗೆ ಗೊರಕೆ ಹೊಡೆಯುತ್ತಿದ್ದಾನೆ.

ಎಲ್ಲರೂ ನಗುತ್ತಾರೆ.

ಹುಡುಗ : ಏಳೋ ದೊರೆರಾಯ ಕೆಂಪಣ್ಣ.

ಕೆಂಪ : ಹಿಡಿ. ಹಿಡಿ....

ಹುಡುಗಿ : ಏನದು ಹಿಡಿಯೂದು ?

ಕೆಂಪ : ಹಲಸಿನ ಹಣ್ಣು, ಹಲಸಿನ ಹಣ್ಣು.

ಎಲ್ಲರೂ : ಹಲಸಿನ ಹಣ್ಣು, ಅಬ್ಬಬ್ಬ ಹಲಸಿನ ಹಣ್ಣು.

ಕೆಂಪ : **(ಪೂರ್ತಿ ಎಚ್ಚತ್ತು)** ಹೌದಪ್ಪಾ. ಎಂಥ ಹಲಸಿನ ಹಣ್ಣಿನ ಕಡಿ ಅಂತೀರಿ ! ಮಾರ್ಕೆಟ್‌ನಲ್ಲಿ ಕಡಿದು ಇಟ್ಟಿದ್ದರು. ನಾನು ನೋಡುತ್ತಿದ್ದಂತೆ ಒಂದು ನಾಯಿ ' ಗಪಕ್ ' ಎಂದು ಕಚ್ಚಿಕೊಂಡು ಓಡಿಬಿಡ್ತು. ನಾನು ಅದರ ಬೆನ್ನಿಗೇ ಓಡಿ ಓಡಿ ಹೋದೆ. ಆ ಸುಟ್ಟ ಕುನ್ನಿ ನನ್ನ ಕೈಗೆ ಸಿಕ್ಕಲಿಲ್ಲ. ಎದುರಿಗೆ ಭೀಮ ಬರತಾ ಇದ್ದ. ಹಾಗಾಗಿ ಹಿಡಿ. ಹಿಡಿ ಎಂದು ಕೂಗಿದೆ.

ಎಲ್ಲರೂ ನಗುತ್ತಾರೆ.

ನನಗೂ ಬೆಳಕು ಕೊಡಪ್ಪ.

ಭೀಮ ದೀಪ ಹಚ್ಚುತ್ತಾ ಹೋಗುತ್ತಾನೆ. ಎಲ್ಲರೂ ಕೂಡಿ ' ಕರುಣಾಳು ಬಾ ಬೆಳಕೆ ' ಹಾಡುತ್ತಾರೆ.

ಇಲ್ಲಿಯ ಅಭಂಗವನ್ನು ' ಅನಿಕೇತನ '. ಕರ್ನಾಟಕ ಸಾಹಿತ್ಯ ಅಕಾಡೆಮಿ: ಅನು. : ಶ್ರೀಧರರಾವ್ ಪಿಸ್ಸೆ. ಸಂಪುಟ ೧೧. ಸಂಚಿಕೆ ೪ ರಿಂದ ತೆಗೆದುಕೊಂಡದ್ದು.

ಡಾ. ಆರ್. ವಿ. ಭಂಡಾರಿ
ಅರೆಅಂಗಡಿ. ಹೊನ್ನಾವರ - ೫೮೧ ೪೩೦ (ಉ. ಕ.)

ತುರುವೀಹಾಳ ಚಂದ್ರು

ಚೆನ್ನಾಗಿ ಬಲ್ಲೆ ಎಲ್ಲ
ದೇವರು
ತನ್ನ ಅಸ್ತಿತ್ವ ಸಾಬೀತು ಪಡಿಸಲು
ನಿನ್ನ ತಂದು ನಿಲಿಸಿದ್ದಾನೆ
ನನ್ನೆದುರು. ಪ್ರೀತಿಗಾಗಿ ಬದುಕು
ಸಾಲ ಮಾಡಿ ಪಣಕ್ಕಿಡುವ ನನ್ನ ಗುಣ
ಅವನು ಬಲ್ಲ.

ನೀನಿರುವ ಊರಿಡೀ ಇಡಬಯಸಿದರೆ ನಿನ್ನಡಿ
ಅದು ರಾಜ್ಯವಲ್ಲ ನನ್ನ ಆಡಳಿತವೂ ಇಲ್ಲ
ದಂಡೆತ್ತಿ ಬರಲು ಸೈನ್ಯವೇ ಇಲ್ಲ-
ದ ದಂಡನಾಯಕ ನಾನು ಒಂಟಿಯೋಧ.

ಪ್ರೇಮದೆದುರು ನಿಸ್ಸಹಾಯಕ
ತೆಗೆದುಕೋ ನರ ನರ
ಬಿಚ್ಚಿ
ಕೊಟ್ಟಿದ್ದು ಬಳಸಿಕೋ ಕಾಲುಂಗರಕಾಗಬಹುದು
ರಕ್ತ ಪಣ. ಬೈತಲೆಗಿರಲಿ
ಮುಂಗುರುಳಿಗೆ ಮೂರು ಜನ್ಮ
ಮತ್ತೇನು ಬೇಕು ?

ನೀ ಅಡ್ಡ ಬಂದಿರದಿದ್ದರೆ
ಖಂಡಿತ
ಸಾವ ಆಯುಧ ಬಿಟ್ಟು ಬೇರೆ ಏನೂ ಇರದ
ಆ ದೇವರ ಮೇಲೆ ಸೇಡು
ತೀರಿಸಿಕೊಳ್ಳುತ್ತಿದ್ದೆ.

●

▼

ತುರುವೀಹಾಳ ಚಂದ್ರು
ಕೇರ್ ಪ್ರೊ. ಎಲ್. ಟಿ. ನಾಯಕ. ಮನೆ ನಂ. ೧೫೦, ಹಳಿಯಾಳ ರಸ್ತೆ
ಶ್ರೀನಗರ, ಧಾರವಾಡ - ೫೮೦ ೦೦೩

ಪರಂಪರೆ, ಸಾತತ್ಯ, ಸಾಹಿತ್ಯ ಚರಿತ್ರೆ ಇತ್ಯಾದಿ[೧] ▲ ವಿಶ್ಲೇಷಣೆ

ಸಿ. ಎನ್. ರಾಮಚಂದ್ರನ್

ವಸಾಹತುಶಾಹಿಯು ತನ್ನ ಅಧೀನ ರಾಷ್ಟ್ರಗಳಲ್ಲಿ ಅನೇಕ ಬಗೆಯ. ಹುಟ್ಟಿನ ಸಂದರ್ಭಗಳಲ್ಲಿ ಅಂತರ್ಗತ ವಿರೋಧಗಳಿರುವ. ಪ್ರತಿಕ್ರಿಯೆಗಳಿಗೆ ಜನ್ಮ ಕೊಡುತ್ತದೆ: ಮತ್ತು ಇಂತಹ ಪ್ರತಿಕ್ರಿಯೆಗಳು ಅಧೀನ ರಾಷ್ಟ್ರಗಳು ರಾಜಕೀಯವಾಗಿ ಸ್ವತಂತ್ರವಾದ ಮೇಲೂ ಮುಂದುವರಿಯುತ್ತವೆ. (ಏಕೆಂದರೆ. ರಾಜಕೀಯ ಯಾಜಮಾನ್ಯ ಕೊನೆಗಂಡರೂ ಸಾಂಸ್ಕೃತಿಕ ಯಾಜಮಾನ್ಯ ಮುಂದುವರಿಯುತ್ತದೆ-- ಕೆಲವೊಮ್ಮೆ ಮೊದಲಿಗಿಂತ ಹೆಚ್ಚು ಶಕ್ತಿಶಾಲಿಯಾಗಿ.) ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭಿಸಿ. ಭಾರತೀಯ ಚಿಂತನೆ ವಸಾಹತುಶಾಹಿ ಯಾವ ಯಾವ ಅಂಶಗಳನ್ನು ಅಭಿಮಾನದಿಂದ ಪ್ರದರ್ಶಿಸುತ್ತಾ ತನ್ನ ಸಾಂಸ್ಕೃತಿಕ ಯಾಜಮಾನ್ಯವನ್ನು ಭದ್ರಗೊಳಿಸುತ್ತಿತ್ತೋ **ಅದೇ ಅಂಶಗಳನ್ನು** ಭಾರತದ ಇತಿಹಾಸದಲ್ಲಿ. ಸಾಹಿತ್ಯದಲ್ಲಿ. ಸಂಸ್ಕೃತಿಯಲ್ಲಿ ಗುರುತಿಸಲು ಪ್ರಾರಂಭಿಸಿತು: ಮತ್ತು ಈ ಕಾರ್ಯಕ್ರಮ ೨೦ ನೆಯ ಶತಮಾನದುದ್ದಕ್ಕೂ ವ್ಯಾಪಕವಾಗಿ ನಡೆಯಿತು. ಪ್ರತಿರೋಧದ ಉದ್ದೇಶದಿಂದ ಜನ್ಮಿಸಿದ ಇಂತಹ ಸಾಂಸ್ಕೃತಿಕ - ಸಾಹಿತ್ಯಕ 'ಅನುಕರಣೆ' ಪರಂಪರೆ. ಸಾತತ್ಯ. ಸಾಹಿತ್ಯ ಚರಿತ್ರೆ ಇತ್ಯಾದಿ ಪರಿಕಲ್ಪನೆಗಳನ್ನು ಹುಟ್ಟುಹಾಕಿತು. ಭಾರತದ ಪ್ರತಿಯೊಂದು ಭಾಷಿಕ ಸಮುದಾಯವೂ ತನ್ನಲ್ಲಿ ಇಂಗ್ಲಿಷ್ / ಯೂರೋಪಿಯನ್ ಸಾಹಿತ್ಯಗಳಿಗಿಂತ ಹೆಚ್ಚು ಪ್ರಾಚೀನವಾದ ಮತ್ತು ಅಖಂಡವಾದ ಸಾಹಿತ್ಯಕ ಪರಂಪರೆ ಇದೆಯೆಂಬುದನ್ನು ಸಾಹಿತ್ಯ ಚರಿತ್ರೆಗಳ ಮೂಲಕ ಸ್ಥಾಪಿಸಲು ತೊಡಗಿತು. ಇಂತಹ 'ಅನುಕರಣಾತ್ಮಕ ಪ್ರತಿರೋಧ'ದ ಪ್ರಾತಿನಿಧಿಕ ನಿಲುವನ್ನು ನಾವು ರಂಗಣ್ಣನವರ ಈ ಉದ್ಗಾರದಲ್ಲಿ ಕಾಣಬಹುದು : "ಟ್ರ್ಯಾಜಿಕ್ ತತ್ವ ನಮ್ಮ ಹಿಂದಿನ ಕವಿಗಳಿಗೆ ಗೊತ್ತಾಗದ ಬ್ರಹ್ಮರಹಸ್ಯವೇನೂ ಅಲ್ಲವೆಂದು ಘಂಟಾಘೋಷವಾಗಿ ಒರೆಯಬೇಕು: ಇಂಡಿಯಾದ ಒಂದು ಪ್ರತಿಧಾಳಿಯನ್ನು ಹೂಡಬೇಕು (a counter attack from India). ಇದೇನೂ ಒಣ ಜಂಭವಲ್ಲವೆನ್ನುವುದಕ್ಕೆ **ಶಾಕುಂತಲವೇ** ಪ್ರಮಾಣ" **(ಕಾಳಿದಾಸನ ನಾಟಕಗಳ ವಿಮರ್ಶೆ, ಪು. ೩೮೪)**. ಇಲ್ಲಿ ಬರುವ 'ಪ್ರತಿಧಾಳಿ' ಎನ್ನುವ ಪದಪ್ರಯೋಗ ಬಹಳ ಅರ್ಥಪೂರ್ಣ : ಎಲ್ಲಾ ಸಾಹಿತ್ಯಗಳಲ್ಲಿಯೂ 'ಟ್ರ್ಯಾಜಿಡಿಗಳು' ಇರಬೇಕಾಗಿಲ್ಲ ಎಂಬ ನಿಲುವನ್ನು ರಂಗಣ್ಣನವರು ತಾಳಲಿಲ್ಲ : ನಮ್ಮಲ್ಲೂ 'ಟ್ರ್ಯಾಜಿಡಿ' ಇದೆ ಎಂದು ಸಮರ್ಥಿಸಲು ಹೊರಟರು --ಶೇಕ್ಸ್‌ಪಿಯರ್‌ಗೆ ಬದಲಾಗಿ ಕಾಳಿದಾಸ. ೫೦೦ ವರ್ಷಗಳ ಇಂಗ್ಲಿಷ್ ಸಾಹಿತ್ಯ ಚರಿತ್ರೆಗೆ ಬದಲಾಗಿ ೧೦೦೦ ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆ-- ಇತ್ಯಾದಿ. ಇದನ್ನೇ ನಾನು 'ಅನುಕರಣಾತ್ಮಕ ಪ್ರತಿರೋಧ' ಎಂದು ಕರೆದಿರುವುದು. ಆದರೆ. ಇಂತಹ ಪ್ರತಿಧಾಳಿಯ ಕಾರ್ಯಾಚರಣೆಯಲ್ಲಿ ಮೂಲ 'ಧಾಳಿಕಾರರ' ತಪ್ಪುಗಳೇ. ಅವರು ಆಧರಿಸಿದ ಗೃಹೀತಗಳೇ ಅನಿವಾರ್ಯವಾಗಿ ಮರುಕಳಿಸಿದುವು.

ಒಂದು ಸಾಹಿತ್ಯದಲ್ಲಿ / ಕಲೆಯಲ್ಲಿ 'ಸಾತತ್ಯ'ವನ್ನು ರೂಪಿಸುವುದು 'ಪರಂಪರೆ' ಮತ್ತು ಒಂದು ಪರಂಪರೆಯನ್ನು ಕಟ್ಟಿಕೊಡುವುದು ಸಾಹಿತ್ಯ / ಕಲಾ ಚರಿತ್ರೆ. ಸಾಹಿತ್ಯವೂ ಸೇರಿದಂತೆ ಎಲ್ಲಾ ಕಲೆಗಳಲ್ಲಿಯೂ ಇರುವ ಮತ್ತು ಕಾಲಕಾಲಕ್ಕೆ ಬದಲಾಗುವ 'ಸಂಪ್ರದಾಯಗಳು' ಮೂರ್ತಸ್ವರೂಪದವು. ಮತ್ತು ಅವುಗಳನ್ನು ವಸ್ತುನಿಷ್ಠವಾಗಿ ಗುರುತಿಸುವುದು ಸಾಧ್ಯ. ಆದರೆ ಸಂಪ್ರದಾಯಗಳಿಗಿಂತ ಭಿನ್ನವಾದ 'ಪರಂಪರೆ' ಎನ್ನುವುದು ಒಂದು ಅಮೂರ್ತ ಪರಿಕಲ್ಪನೆ-- ಒಂದು ಕಾಲಘಟ್ಟದಲ್ಲಿ ಸಮುದಾಯವೊಂದು ತನ್ನ ತತ್ಕಾಲೀನ ಅವಶ್ಯಕತೆ - ಒತ್ತಡಗಳಿಗನುಸಾರವಾಗಿ ಕಟ್ಟಿಕೊಳ್ಳುವ ಒಂದು ಅಮೂರ್ತ ರಚನೆ.

ಕನ್ನಡದಲ್ಲಿ ' ಪರಂಪರೆ ' ಎಂಬ ಶಬ್ದ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಆದರೆ, ವಸಾಹತುಶಾಹಿ ಕಾಲಘಟ್ಟದ ವರೆಗೂ ಈ ಶಬ್ದ (ಪ್ರೊ. ಜಿ. ವೆಂಕಟಸುಬ್ಬಯ್ಯನವರು ಹೇಳುವಂತೆ) ' ಬಾಹುಳ್ಯ ' ' ಅನೇಕ ' ಎಂಬ ಅರ್ಥದಲ್ಲಿ ಮಾತ್ರ ಬಳಸಲಾಗುತ್ತಿತ್ತು. (" ಕಷ್ಟಪರಂಪರೆಗಳ್ " -ಜನ್ನ) ' ಸಾತತ್ಯವನ್ನಾಧರಿಸಿ ಮತ್ತು ಒಂದು ಭಾಷಿಕ ಸಮುದಾಯಕ್ಕೆ ವಿಶಿಷ್ಟವಾದ ನಿಲುವು ಮತ್ತು ವಿಶ್ವದೃಷ್ಟಿಗಳನ್ನೊಳಗೊಂಡದ್ದು ' ಎಂಬ ಅರ್ಥದಲ್ಲಿ ' ಪರಂಪರೆ ' ಶಬ್ದ ಬಳಕೆಗೆ ಬಂದದ್ದು ಕೇವಲ ೨೦ ನೆಯ ಶತಮಾನದಲ್ಲಿ. ಪರಂಪರೆಯ ಇಂತಹ ಮರು ವ್ಯಾಖ್ಯಾನಕ್ಕೆ ಮುಖ್ಯ ಕಾರಣ ಎಲಿಯಟ್‌ನ ಪ್ರಭಾವವೆಂದು ಕಾಣುತ್ತದೆ. ಎಲ್ಲರಿಗೂ ಗೊತ್ತಿರುವಂತೆ. ಮೊದಲ ಬಾರಿಗೆ ' ಪರಂಪರೆ ' ಯ ಸಂವಾದಿ ಶಬ್ದವಾದ ' Tradition ' ಪರಿಕಲ್ಪನೆಯನ್ನು ವ್ಯಾಪಕಾರ್ಥದಲ್ಲಿ ಎಲಿಯಟ್ ತನ್ನ " ಪರಂಪರೆ ಮತ್ತು ವ್ಯಕ್ತಿಪ್ರತಿಭೆ " ಎಂಬ ೧೯೧೭ ರಲ್ಲಿ ಪ್ರಕಟವಾದ ಲೇಖನದಲ್ಲಿ ಹೀಗೆ ವ್ಯಾಖ್ಯಾನಿಸುತ್ತಾನೆ : ಪರಂಪರೆಯನ್ನು ನಮ್ಮದಾಗಿಸಿಕೊಳ್ಳಲು ಚಾರಿತ್ರಿಕ ಪ್ರಜ್ಞೆ ನಮ್ಮಲ್ಲಿರಬೇಕು: ಈ ಚಾರಿತ್ರಿಕ ಪ್ರಜ್ಞೆ " ಗತಕಾಲದ ಗತಸ್ವರೂಪವನ್ನು ಮಾತ್ರವಲ್ಲದೆ ಅದರ ವರ್ತಮಾನ ಸ್ವರೂಪವನ್ನೂ ಗುರುತಿಸಬಲ್ಲದ್ದಾಗಿರುತ್ತದೆ. ಇಂತಹ ಚಾರಿತ್ರಿಕ ಪ್ರಜ್ಞೆ ಇದ್ದ ಲೇಖಕ ತನ್ನ ತಲೆಮಾರಿನ ಜೀವಚೈತನ್ಯವನ್ನು ರಕ್ತಗತವಾಗಿಸಿಕೊಂಡು ಬರೆಯಬೇಕಾಗುತ್ತದಲ್ಲದೆ ಹೋಮರ್‌ನಿಂದ ಮೊದಲಾಗಿ ಇಡೀ ಯೂರೋಪ್ ಖಂಡದ ಸಾಹಿತ್ಯವೆಲ್ಲವೂ ಸಮಕಾಲೀನವಾಗಿ ಒಂದು ಜೀವಂತ ವಿನ್ಯಾಸವಾಗಿ ಏರ್ಪಟ್ಟು ನಿಂತಿರುತ್ತವೆ ಎಂಬ ಅರಿವು ಆತನದಾಗಿರಬೇಕಾಗುತ್ತದೆ " (ಅನು. ವಿ. ಎಂ. ಇನಾಂದಾರ್). ಅತ್ಯಂತ ಪ್ರಭಾವಶಾಲಿಯಾದ ಎಲಿಯಟ್‌ನ ಈ ಲೇಖನದ ಮುಖ್ಯ ವಿಚಾರಗಳು ಸಹಜವಾಗಿಯೇ ಎಲ್ಲಾ ಭಾರತೀಯ ವಿಮರ್ಶಾಕ್ಷೇತ್ರಗಳನ್ನು ಪ್ರವೇಶಿಸಿದುವು. ಮೊಟ್ಟಮೊದಲು ಈ ಲೇಖನವನ್ನು ದೀರ್ಘವಾಗಿ ಕನ್ನಡದಲ್ಲಿ ಚರ್ಚಿಸಿದವರು ಡಾ. ಮಿಣಜಿಗಿಯವರು-- " ಮನ್ವಂತರ " ದಲ್ಲಿ -- ಎಂದು ನನ್ನ ನೆನಪು.

ಎಲಿಯಟ್‌ನ ಈ ಪ್ರಬಂಧದಲ್ಲಿ ಅನೇಕ ಚರ್ಚಾಸ್ಪದ ಅಂಶಗಳಿವೆ:[2] ಅತಿ ಚರ್ಚಾಸ್ಪದವಾದ ಅಂಶ ಅವನ ' ಪರಂಪರೆ ' ಯ ಪರಿಕಲ್ಪನೆ. ಹೋಮರ್‌ನಿಂದ ಪ್ರಾರಂಭವಾಗಿ ೨೦೦೦ ವರ್ಷಗಳ ಕಾಲ ಕ್ರಿಯಾಶೀಲವಾಗಿರುವಂತಹ ಒಂದು ಪರಂಪರೆಯ ಪರಿಕಲ್ಪನೆಯನ್ನು ಇಂದು ಒಪ್ಪುವುದು ಕಷ್ಟ. ಆಧುನಿಕೋತ್ತರ ಚಿಂತಕರ ಭಾಷೆಯಲ್ಲಿ ಹೇಳಬೇಕಾದರೆ ' ಇದೊಂದು ಮಹಾಕಥನ. ' ಇಂತಹ ಮಹಾಕಥನಗಳ ಉದ್ದೇಶ ಪ್ರಭಾವಶಾಲಿ ವ್ಯವಸ್ಥೆಗಳನ್ನು ವಿರೋಧಿಸುವ ಅಥವಾ ಅವುಗಳಿಗೆ ಪರ್ಯಾಯವಾಗಿರುವ ಇತರ ಪರಂಪರೆಗಳನ್ನು ಅಂಚಿಗೆ ತಳ್ಳುವುದೇ ಆಗಿರುತ್ತದೆ. ಯೂರೋಪಿನಲ್ಲಿಯೇ. ಪ್ರತಿಯೊಂದು ಕಾಲಖಂಡದಲ್ಲಿಯೂ ಒಂದಲ್ಲ. ಅನೇಕಾನೇಕ ಸ್ಥಳೀಯ ಪರಂಪರೆಗಳಿದ್ದುವು-- ಇರುತ್ತವೆ.

ಅರ್ಥಾತ್. ಎಲಿಯಟ್ ಪರಂಪರೆಯನ್ನು ಏಕಮುಖಿಯಾಗಿ ಗ್ರಹಿಸುತ್ತಾನೆ: ಇಂತಹ ಗ್ರಹಿಕೆಯ ಹಿನ್ನೆಲೆಯಲ್ಲಿ ಅನೇಕ ತಾರ್ಕಿಕ ಗೃಹೀತಗಳಿವೆ. ಮೊದಲನೆಯದಾಗಿ. ಅವನ ' ಎಲೀಟಿಜಂ ' -- ಶ್ರೇಷ್ಠ ಸಾಹಿತ್ಯ - ಸಂಸ್ಕೃತಿ - ಕಲೆ ಇತ್ಯಾದಿಗಳು ಸಮಾಜದ ಅಲ್ಪಸಂಖ್ಯಾತ ಉಚ್ಚ ವರ್ಗದವರಿಗೆ ಮಾತ್ರ ಲಭ್ಯವೇ ಹೊರತು ಜನಸಾಮಾನ್ಯರಿಗಲ್ಲ ಎಂಬ ಏರುಹುಬ್ಬಿನ ನಿಲುವು. (ಈ ನಿಲುವು ೧೯ ನೆಯ ಶತಮಾನದ ಆರ್ನಲ್ಡ್‌ನಿಂದ ಪ್ರಾರಂಭವಾಗಿ ಲೀವಿಸ್‌ನಲ್ಲಿ ತನ್ನ ತಾರ್ಕಿಕ ತುದಿಯನ್ನು ಮುಟ್ಟುತ್ತದೆ.) ಎರಡನೆಯದಾಗಿ. ಎಲಿಯಟ್‌ನ ರಾಜಕೀಯ - ಧಾರ್ಮಿಕ ಸಾಂಪ್ರದಾಯಿಕತೆ. ಆಪ್ತೈರ್ಣಿಯ ಕ್ಯಾಥೊಲಿಕ್ ಧರ್ಮ ಎಲಿಯಟ್‌ನ ಸಾಹಿತ್ಯದ / ವಿಮರ್ಶೆಯ ಅಡಿಗಲ್ಲು.[3] ಅದ್ದರಿಂದಲೇ ತನ್ನ ಯೂರೋಪಿಯನ್ ಪರಂಪರೆಯಲ್ಲಿ ಎಲಿಯಟ್ ಡಾಂಟೆಯನ್ನು ಮುಖ್ಯವಾಗಿ ಪರಿಗಣಿಸುತ್ತಾನೆ. ಇನ್ನೂ ಮುಖ್ಯವಾಗಿ, ಧಾರ್ಮಿಕ ಆಯಾಮವನ್ನೊಳಗೊಂಡ ತನ್ನ ಪರಂಪರೆಯ ವ್ಯಾಖ್ಯಾನದಿಂದ ಅವನು ಒಂದು ಕಡೆ ಅಂದು ಅಮೆರಿಕಾದಲ್ಲಿ

ಬಲವಾಗಿ ಬೆಳೆಯುತ್ತಿದ್ದ ' ವ್ಯಕ್ತಿವಾದ ' ವನ್ನು ವಿರೋಧಿಸಲೂ. ಮತ್ತೊಂದು ಕಡೆ ಡಿ. ಎಚ್. ಲಾರೆನ್ಸ್ ಮುಂತಾದ ಧಾರ್ಮಿಕ ಬಂಡುಕೋರರನ್ನು ' ಇವರಿಗೆ ಪರಂಪರೆಯ ಅರಿವಿಲ್ಲ ' ಎಂದು ಅವಜ್ಞೆಗೆ ಗುರಿಪಡಿಸಲೂ ಸಾಧ್ಯವಾಯಿತು. (ಮರುಮುದ್ರಣಕ್ಕೆ ಅವಕಾಶ ಕೊಡದ ತನ್ನ **After Strange Gods (1934)** ಎಂಬ ವಿಮರ್ಶಾ ಲೇಖನಗಳ ಸಂಕಲನದಲ್ಲಿ ಎಲಿಯಟ್ ಲಾರೆನ್ಸ್‌ನನ್ನು ' ಹೆರೆಟಿಕ್ ' ' ಧರ್ಮದ್ರೋಹಿ ' ಎಂದು ಕರೆದು. ಅಂತಹವರನ್ನು ಪ್ರಜ್ಞಾವಂತ ಸಮಾಜ ಬಹಿಷ್ಕರಿಸಬೇಕೆಂದು ಹೇಳುತ್ತಾನೆ.)

ಹೀಗೆಯೇ. ಪಾಶ್ಚಿಮಾತ್ಯ ಜಗತ್ತಿನಲ್ಲಿ ' ಸಾಹಿತ್ಯ ಚರಿತ್ರೆ ' ಎಂಬ ವರ್ಗದ ಹುಟ್ಟೂ ಕುತೂಹಲಕರವಾಗಿದೆ. ಇಂಗ್ಲೆಂಡ್ ಮತ್ತು ಯೂರೋಪಿಯನ್ ರಾಷ್ಟ್ರಗಳ ಇತಿಹಾಸದಲ್ಲಿ ೧೯ ನೆಯ ಶತಮಾನ ಉಗ್ರ ರಾಷ್ಟ್ರೀಯತೆಯ ಉಗಮ ಮತ್ತು ವಿಕಾಸದ ಕಾಲ. ಈ ಕಾಲಖಂಡದಲ್ಲಿ ಪ್ರತಿಯೊಂದು ಪಾಶ್ಚಿಮಾತ್ಯ ರಾಷ್ಟ್ರವೂ ತನ್ನ ಅನನ್ಯತೆಯನ್ನು ಸ್ಥಾಪಿಸಲು ವಿಶಿಷ್ಟವಾದ ಒಂದು ಭಾಷೆ. ಒಂದು ಸಾಹಿತ್ಯ. ಮತ್ತು ಒಂದು ಸಂಸ್ಕೃತಿ. ಇತ್ಯಾದಿ ಪರಿಕಲ್ಪನೆಗಳನ್ನು ಹಾಗೂ ಸಂಕೇತಗಳನ್ನು ಸೃಷ್ಟಿಸಿಕೊಂಡಿತು. ಇಂತಹ ರಾಷ್ಟ್ರೀಯತೆಯ ಬೆಳವಣಿಗೆಗೆ ಅಗತ್ಯವಾದ ಸಾಹಿತ್ಯಕ - ಸಾಂಸ್ಕೃತಿಕ ಅಡಿಪಾಯವನ್ನು ' ಸಾಹಿತ್ಯ ಚರಿತ್ರೆ ' ಗಳು ಹಾಕಿಕೊಟ್ಟುವು.

ಈ ಚಾರಿತ್ರಿಕ ಹಿನ್ನೆಲೆಯಿಂದ ನಮಗೆ ಸ್ಪಷ್ಟವಾಗುವುದೇನೆಂದರೆ. ' ಸಾಹಿತ್ಯ ಚರಿತ್ರೆ ' ಎಂಬುದು ಒಂದು ವಸ್ತುನಿಷ್ಠ ಲೇಖಕ / ಕೃತಿ ಸೂಚಿಯಲ್ಲ. ಅದೊಂದು ವೈಚಾರಿಕ ಸಂಹಿತೆಯನ್ನು, ಒಂದು ಬಗೆಯ ಗೃಹೀತಗಳ ಮೊತ್ತವನ್ನು ಆಧರಿಸಿರುವ ' ರಚನೆ '.

ಉದಾಹರಣೆಗೆ : ಚಾರಿತ್ರಿಕ ವಿಮರ್ಶೆಯ ಜನಕನಾದ ಹಿಪ್ಪೊಲಿಟ ಟೇನ್‌ನ " ಇಂಗ್ಲಿಷ್ ಸಾಹಿತ್ಯದ ಇತಿಹಾಸ " (೧೮೬೩. ಇದು ಇಂಗ್ಲಿಷ್ ಸಾಹಿತ್ಯದ ಮೊಟ್ಟ ಮೊದಲ ಚರಿತ್ರೆ) ಆಟೋ ವಾನ್ ರ್‍ಯಾಂಕ್ ಎಂಬ ಜರ್ಮನ್ ಇತಿಹಾಸಜ್ಞ ಮಂಡಿಸಿದ ' ಜನಾಂಗ, ಕಾಲಘಟ್ಟ. ಯುಗ ' ಎಂಬ ಮೂರು ಪರಿಣಾಮಗಳನ್ನಾಧರಿಸಿದ ಒಂದು ಚಾರಿತ್ರಿಕ ಪ್ರಸ್ಥಾನದ ಉಪಪ್ರಮೇಯ. ' ಈ ಪರಿಣಾಮಗಳ ಗೃಹೀತಗಳೇನೆಂದರೆ, ಪ್ರತಿಯೊಂದು ರಾಷ್ಟ್ರದಲ್ಲಿಯೂ ಒಂದು ಪ್ರಮುಖ ಜನಾಂಗವಿರುತ್ತದೆ: ಪ್ರತಿಯೊಂದು ಜನಾಂಗದ ಪ್ರಜ್ಞೆಯೂ ವಿಶಿಷ್ಟವಾಗಿರುತ್ತದೆ: ಮತ್ತು ಇಂತಹ ವಿಶಿಷ್ಟ ಜಾನಾಂಗಿಕ ಪ್ರಜ್ಞೆ ಭಿನ್ನ ಕಾಲಘಟ್ಟಗಳಲ್ಲಿ. ಆಯಾಯಾ ರಾಷ್ಟ್ರಗಳ ಸಾಹಿತ್ಯದಲ್ಲಿ (' ಸಾಹಿತ್ಯಗಳಲ್ಲಿ ' ಅಲ್ಲ) ಭಿನ್ನ ರೂಪುಗಳಲ್ಲಿ ಪ್ರಕಟವಾಗುತ್ತದೆ: ಇತ್ಯಾದಿ. ಅರ್ಥಾತ್. ಜನಾಂಗ-ಭೇದದ ಬೀಜ ಈ ಗೃಹೀತಗಳಲ್ಲಿದೆ.

' ಸಾಹಿತ್ಯ ಚರಿತ್ರೆ ' ಎಂದರೆ ಒಂದು ವೈಚಾರಿಕ ಚೌಕಟ್ಟನ್ನಾಧರಿಸಿದ ಸಾಪೇಕ್ಷ ರಚನೆ ಎಂಬುದಕ್ಕೆ ನಿದರ್ಶನವಾಗಿ ಮತ್ತೊಂದು ಪ್ರಸಿದ್ಧ ಸಾಹಿತ್ಯ ಚರಿತ್ರೆಯನ್ನು ನೋಡಬಹುದು-- ಡಬ್ಲ್ಯೂ. ಜೆ. ಕೂರ್ತ್‌ಹೋಪ್‌ನ " ಇಂಗ್ಲಿಷ್ ಕಾವ್ಯದ ಇತಿಹಾಸ " (೧೮೯೫ - ೧೯೧೦). ಮಹತ್ವಾಕಾಂಕ್ಷೆಯ ಈ ದೀರ್ಘ ಗ್ರಂಥದಲ್ಲಿ ಕೂರ್ತ್‌ಹೋಪ್ (ತಾನು ಕಲ್ಪಿಸಿದ) ಬ್ರಿಟಿಷ್ ಜನಾಂಗದ ಪ್ರತಿಭೆ ಮತ್ತು ಬ್ರಿಟಿಷ್ ರಾಜಕೀಯ ಸಂಸ್ಥೆಗಳು ಇವೆರಡನ್ನೂ ಒಟ್ಟಿಗೇ ವ್ಯಾಖ್ಯಾನಿಸುತ್ತಾ. ' ಇತಿಹಾಸದುದ್ದಕ್ಕೂ ಇಂಗ್ಲೆಂಡ್‌ನಲ್ಲಿ ವ್ಯಕ್ತಿವಾದ ಮತ್ತು ಸಮಷ್ಟಿವಾದಗಳ ನಡುವೆ ಒಂದು ಬಗೆಯ ಗತಿ - ತಾರ್ಕಿಕ ಸಂಘರ್ಷ ನಡೆದಿದೆ: ಮತ್ತು ಇಂತಹ ಸಂಘರ್ಷಗಳನ್ನು ಇಂಗ್ಲಿಷ್ ಕಾವ್ಯಚರಿತ್ರೆ ದಾಖಲಿಸುತ್ತದೆ ' ಎಂಬ ಸಿದ್ಧಾಂತವನ್ನು ಮಂಡಿಸುತ್ತಾನೆ. ಆದರೆ. ೧೨ ಸಂಪುಟಗಳಲ್ಲಿ ಬಂದ ' ಕೇಂಬ್ರಿಜ್ ಇಂಗ್ಲಿಷ್ ಸಾಹಿತ್ಯದ ಇತಿಹಾಸ ' ಕೂರ್ತ್‌ಹೋಪ್‌ನ ಈ ಸಿದ್ಧಾಂತವನ್ನು ತಿರಸ್ಕರಿಸಿ. ತನ್ನದೇ ಆದ ಇನ್ನೊಂದು ಸಿದ್ಧಾಂತವನ್ನು ಮಂಡಿಸುತ್ತದೆ.

ಈ ನಿದರ್ಶನಗಳು ಸ್ಪಷ್ಟಪಡಿಸುವ ಅಂಶಗಳು ಇವು : ' ಸಾಹಿತ್ಯ ಚರಿತ್ರೆ ' ಎಂಬ ವರ್ಗ (category), ಪರಂಪರೆ ಎಂಬ ವರ್ಗದಂತೆಯೇ. ಒಂದು ಸಮುದಾಯ ತನ್ನ ತತ್ಕಾಲೀನ

ಅಪೇಕ್ಷೆಗಳಿಗನುಸಾರವಾಗಿ ಕಟ್ಟಿಕೊಳ್ಳುವ ಅಮೂರ್ತ ' ರಚನೆ ': ಇಂತಹ ರಚನೆಗಳು ಅನಿವಾರ್ಯವಾಗಿ ಸಾಪೇಕ್ಷವಾಗಿರುತ್ತವೆ; ಮತ್ತು ಇವುಗಳಿಗೊಂದು ವಿಚಿತ್ರ ವೈಚಾರಿಕ ಚೌಕಟ್ಟುಗಳಿರುವುದರಿಂದ ಆ ಚೌಕಟ್ಟಿನಿಂದ ಹೊರಗುಳಿಯುವ / ಚೌಕಟ್ಟಿಗೆ ಸೇರದ ಎಲ್ಲಾ ಲೇಖಕರೂ / ಕೃತಿಗಳೂ ಆ ಸಾಹಿತ್ಯಚರಿತ್ರೆಯಲ್ಲಿ ಅಲಕ್ಷ್ಯಕ್ಕೆ ಒಳಗಾಗುತ್ತಾರೆ / ಒಳಗಾಗುತ್ತವೆ.

•

ಕನ್ನಡ ' ಸಾಹಿತ್ಯ ಚರಿತ್ರೆ ' ಎಂಬ ವಾಙ್ಮಯ ಪ್ರಕಾರವನ್ನು ನಾವು ಮೊಟ್ಟಮೊದಲು ರೆ. ಎಫ್. ಕಿಟ್ಟೆಲ್ ಅವರ **ನಾಗವರ್ಮನ ಕನ್ನಡ ಛಂದಸ್ಸು** (೧೮೭೫) ಎಂಬ ಕೃತಿಯಲ್ಲಿ ಕಾಣುತ್ತೇವೆ.[೫] ಇದರ ದೀರ್ಘ ಮುನ್ನುಡಿಯಲ್ಲಿ " An Essay on Canarese Literature " ಎಂಬ ೫೮ ಪುಟಗಳ ಲೇಖನವಿದೆ. ಇದರಲ್ಲಿ ಕಿಟ್ಟೆಲ್ ಕ್ರಿ. ಶ. ೮೦೦ - ೧೮೭೫ ಈ ಕಾಲಖಂಡದ ಕನ್ನಡ ಸಾಹಿತ್ಯವನ್ನು ಪೂರ್ವಾರ್ಧ (೮೦೦ - ೧೩೦೦) ಮತ್ತು ಉತ್ತರಾರ್ಧ (೧೩೦೦ - ೧೮೭೫) ಎಂದು ಎರಡು ಘಟ್ಟಗಳಲ್ಲಿ ವರ್ಗೀಕರಿಸಿ, ರಾಜರ / ಕವಿಗಳ ಕಾಲನಿರ್ಣಯಕ್ಕೆ ಮಹತ್ವ ಕೊಟ್ಟು, ಅನಂತರ ಈ ಘಟ್ಟಗಳ ಲೇಖಕರ ಪಟ್ಟಿಗಳನ್ನು ಕೊಡುತ್ತಾರೆ. ಎಂದರೆ, ಸ್ವರೂಪದಲ್ಲಿ ಇದು ಸಾಹಿತ್ಯ ಚರಿತ್ರೆಯಲ್ಲ – – ಟಿಪ್ಪಣಿಗಳಿರುವ ಗ್ರಂಥಸೂಚಿ (Annotated Bibliography).

ಕಿಟ್ಟೆಲ್ ಪ್ರಬಂಧದ ಎರಡು ಅಂಶಗಳನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಗಮನಿಸಲು ಇಚ್ಛಿಸುತ್ತೇನೆ : (೧) ಕಿಟ್ಟೆಲ್ ಕೊಡುವ ಮೊದಲ ಕಾಲಘಟ್ಟದ ಪಟ್ಟಿಯಲ್ಲಿ ೪೦ ಲೇಖಕರ ಹೆಸರುಗಳಿವೆ; ಇದರಲ್ಲಿ ಹತ್ತು ಜನರು ಕನ್ನಡ ಲೇಖಕರಲ್ಲ – – ಸಂಸ್ಕೃತ / ತೆಲುಗು ಭಾಷೆಗಳಲ್ಲಿ ಬರೆದವರು. ಅಮೃತಾನಂದಿ, ಕವಿಕಾಮ, ಗುಣಭದ್ರದೇವ ಇತ್ಯಾದಿ ಕವಿಗಳನ್ನು ಕೇಶಿರಾಜ, ನಾಗವರ್ಮ ಮುಂತಾದವರು ಹೆಸರಿಸುತ್ತಾರೆಂಬ ಕಾರಣಕ್ಕಾಗಿ ಕಿಟ್ಟೆಲ್ ಅವರನ್ನೂ ತಮ್ಮ ಪಟ್ಟಿಯಲ್ಲಿ ದಾಖಲಿಸುತ್ತಾರೆ. ಈ ಸಂಗತಿ ನಮಗೆ ತಿಳಿಸುವುದೇನೆಂದರೆ, ಕನ್ನಡ ಕವಿ ತನ್ನ ' ಪೂರ್ವಕವಿಸ್ಮರಣೆ ' ಯಲ್ಲಿ ಇತರ ಭಾಷಿಕ ಕವಿಗಳನ್ನೂ ಸ್ಮರಿಸುತ್ತಾನೆ. ಎಂದರೆ, ಕನ್ನಡ (ಅಥವಾ ತೆಲುಗು, ತಮಿಳು, ...) ಕವಿಯ ' ಪರಂಪರೆ ' ಭಾಷಿಕ ಸೀಮೆಗಳನ್ನು ಮೀರುತ್ತದೆ. ಬಿಎಂಶ್ರೀಯವರು ಹೇಳುವ ಹಾಗೆ " ನೃಪತುಂಗನು ಗದ್ಯಕ್ಕೆ ಬಾಣನ ಹರ್ಷಚರಿತ, ಕಾದಂಬರಿಗಳನ್ನೂ, ಪದ್ಯಕ್ಕೆ (ಗುಣಸೂರಿ) ನಾರಾಯಣ, ಭಾರವಿ, ಕಾಳಿದಾಸ, ಮಾಘಾದಿಗಳನ್ನೂ ಹೇಳುತ್ತಾನೆ. ಪಂಪನು ಸಂಸ್ಕೃತ ಕವಿಗಳ ಹೆಸರನ್ನು ಹೇಳದಿದ್ದರೂ ಶ್ರೀಹರ್ಷ, ಕಾಳಿದಾಸ, ಭಾರವಿ, ಬಾಣ, ಭಟ್ಟನಾರಾಯಣ ಮೊದಲಾದ ಕವಿಗಳ ಭಾವಗಳನ್ನೂ, ಸಂವಿಧಾನಗಳನ್ನೂ ಉಪಯೋಗಿಸಿ ಕೊಂಡಿರುತ್ತಾನೆ. ...ಕನ್ನಡದ ಪ್ರಥಮ ಕಾಲದ ಕವಿಗಳೆಲ್ಲರೂ ಸಂಸ್ಕೃತ ಸಾಹಿತ್ಯದ ಉತ್ತಮ ಕಾಲದ ಕವಿಗಳ ಬೆಂಬಲದಿಂದ ಕವಿತ್ವ ಮಾಡಿದರೆಂದು ಸ್ಪಷ್ಟವಾಗಿದೆ. "[೬] ಹಾಗೆ ನೋಡಿದರೆ, ಕನ್ನಡ ಕವಿಗಳು ಸಂಸ್ಕೃತ ಕವಿಗಳನ್ನು ಉಲ್ಲೇಖಿಸಿದಷ್ಟು ಕನ್ನಡ ಕವಿಗಳನ್ನು ಉಲ್ಲೇಖಿಸಿರುವುದಿಲ್ಲ. ಉದಾಹರಣೆಗೆ : ದುರ್ಗಸಿಂಹ ತನ್ನ " ಪಂಚತಂತ್ರ " ದಲ್ಲಿ ಗುಣಾಢ್ಯ, ಕಾಳಿದಾಸ, ಹರ್ಷ, ಬಾಣ ಇತ್ಯಾದಿ ಇಪ್ಪತ್ತು ಸಂಸ್ಕೃತ ಕವಿಗಳನ್ನು ಉಲ್ಲೇಖಿಸಿದರೆ, ಶ್ರೀವಿಜಯ, ಕನ್ನಮಯ್ಯ ಇತ್ಯಾದಿ ಕೇವಲ ಏಳು ಕವಿಗಳನ್ನು ಮಾತ್ರ ಸ್ಮರಿಸುತ್ತಾನೆ.

ಎರಡನೆಯದಾಗಿ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ನಮಗಿರುವ ನಿಲುವನ್ನು ಒಂದು ಕಾಲಘಟ್ಟದಲ್ಲಿ ಕ್ರಿಯಾಶೀಲವಾಗಿರುವ ಪ್ರಭಾವೀ ಸಂಕಥನ (ಈ ಸಂದರ್ಭದಲ್ಲಿ ವಸಾಹತುಶಾಹೀ ಸಂಕಥನ) ನಿರ್ದೇಶಿಸುತ್ತದೆ ಎಂಬುದಕ್ಕೆ ಕಿಟ್ಟೆಲ್ ಅವರ ಈ ಪ್ರಬಂಧ ಸಾಕ್ಷಿ. ಕಿಟ್ಟೆಲ್ ಅವರಿಗೆ ಕನ್ನಡ ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತು ಅಪಾರ ಗೌರವವಿತ್ತು, ನಿಜ; ಅವರು ತಮ್ಮ ಗ್ರಂಥ - ಸಂಪಾದನೆ - ಪ್ರಕಟಣೆಗಳ ಮೂಲಕ ಮತ್ತು ಅವರ ಮೇರು ಕೃತಿಯಾದ ಪದಕೋಶದ ಮೂಲಕ ಕನ್ನಡ ಭಾಷೆ - ಸಾಹಿತ್ಯ - ಸಮಾಜಗಳಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ ಎಂಬುದೂ ನಿಜ. ಆದರೆ, ಅವರೂ ಈ ಪ್ರಬಂಧದ ಒಂದು ಭಾಗದಲ್ಲಿ (' A Few General

Remarks ') ಪ್ರಾಚೀನ ಕನ್ನಡ ಸಾಹಿತ್ಯವನ್ನು ಕುರಿತು ಹೀಗೆ ಹೇಳುತ್ತಾರೆ : " ಜೈನ ಕೃತಿಗಳಿಂದ ಪ್ರಾರಂಭಿಸಿ ಸಾಳ್ವನ ವರೆಗೆ. ಕನ್ನಡ ಸಾಹಿತ್ಯದ ಪ್ರಥಮ ಘಟ್ಟದಲ್ಲಿ ಕಂಡು ಬರುವ ಒಂದು ವಿಶಿಷ್ಟ ಲಕ್ಷಣವೆಂದರೆ ಅಶ್ಲೀಲ ವಿಷಯಗಳ (" obscene matters ") ಬಗ್ಗೆ ಅವರಲ್ಲಿರುವ ಅಸಹ್ಯಕರ ಅಭಿರುಚಿ. ಈ ಅಭಿರುಚಿಯು ಕನ್ನಡ ಸಾಹಿತ್ಯದ ಎಲ್ಲಾ ಪಂಥಗಳ. ಎಲ್ಲಾ ಶಾಖೆಗಳಲ್ಲಿಯೂ ಮುಂದಿನ ಶತಮಾನಗಳಲ್ಲಿ ಕಮ್ಮಿಯೇನಾಗಲಿಲ್ಲ: ಮತ್ತು ಇಂದಿಗೂ ಅಂತಹುದೇ ಕೀಳು ಅಭಿರುಚಿ ಮುಂದುವರಿಯುತ್ತಿದೆ. ಇಂತಹ ಪರಿಸ್ಥಿತಿಯು ಮಲಿನ ಅಂಶಗಳನ್ನೊಳಗೊಂಡ ಧಾರ್ಮಿಕ-ಪುರಾಣ (ಅಥವಾ ಹಾಗೆ ಕರೆಯಲ್ಪಡುವ) ಕಥೆಗಳ. ಮತ್ತು ಅಶಿಕ್ಷಿತ ಜನರ ಮನಸ್ಸಿನಲ್ಲಿ ದುಷ್ಪರಿಣಾಮಗಳನ್ನುಂಟುಮಾಡುವ ಅವುಗಳ ವ್ಯಾಖ್ಯಾನಗಳ ಪುನಃ ಮುದ್ರಣಗಳಿಂದ ಮುಂದುವರಿಯುತ್ತಿದೆ. " [೬]

ಅನಂತರ. ಆಕರ ಕ್ಷೇತ್ರದಲ್ಲಿ ಬಂದ ಮೇರು ಕೃತಿ ಆರ್. ನರಸಿಂಹಾಚಾರ್ಯರ **ಕರ್ಣಾಟಕ ಕವಿ ಚರಿತೆ.** [೭] ಇದೂ ' ಸಾಹಿತ್ಯ ಚರಿತ್ರೆ ' ಯಲ್ಲ: ವಿಸ್ತೃತ ಟಿಪ್ಪಣಿ ಸಹಿತ ಲೇಖಕ-ಗ್ರಂಥಸೂಚಿ. ಈ ಸಂಪುಟಗಳಲ್ಲಿ ನರಸಿಂಹಾಚಾರ್ಯರು ಯುಗಗಳ / ಯುಗಪ್ರವರ್ತಕರ ಗೋಜಿಗೆ ಹೋಗದೆ. ಅಂದು ಗೊತ್ತಿದ್ದ ಎಲ್ಲಾ ಕನ್ನಡ ಲೇಖಕ / ಲೇಖಕಿಯರ ಹಾಗೂ ಕೃತಿಗಳ ಬಗ್ಗೆ ಮತ್ತು ಅವರ / ಅವುಗಳ ಕಾಲ - ದೇಶಗಳ ಬಗ್ಗೆ ಲಭ್ಯ ಮಾಹಿತಿ ಕೊಡುತ್ತಾರೆ. ಇವರು ಇಂಗ್ಲಿಷ್‌ನಲ್ಲಿ ಬರೆದ **History of Kannada Literature** ಒಂದು ನೆಲೆಯಲ್ಲಿ ತುಂಬಾ ಅರ್ಥಪೂರ್ಣವಾಗಿದೆ : ಐದು ಅಧ್ಯಾಯಗಳ ಈ ಕೃತಿಯಲ್ಲಿ ಎರಡು ಅಧ್ಯಾಯಗಳು ತಮಿಳು. ತೆಲುಗು. ಮಲಯಾಳಂ ಮತ್ತು ಸಂಸ್ಕೃತ ಸಾಹಿತ್ಯಗಳೊಡನೆ ಕನ್ನಡ ಸಾಹಿತ್ಯದ ತೌಲನಿಕ ವಿಮರ್ಶೆಗೆ ಮೀಸಲಾಗಿವೆ. [೮]

ನಿಜವಾದ ಅರ್ಥದಲ್ಲಿ ' ಸಾಹಿತ್ಯ ಚರಿತ್ರೆ ' ಎಂಬ ರಚನೆ ಪ್ರಾರಂಭವಾದದ್ದು ಬಿಎಂಶ್ರೀ ಅವರ (ಅಪೂರ್ಣ) **ಕನ್ನಡ ಸಾಹಿತ್ಯ ಚರಿತ್ರೆ**ಯಿಂದ: ಮತ್ತು ಇದರೊಡನೆಯೇ ವೈಚಾರಿಕ ಚೌಕಟ್ಟುಗಳ ಸಮಸ್ಯೆಯೂ ಪ್ರಾರಂಭವಾಯಿತು. (ಈ ಸಂದರ್ಭದಲ್ಲಿ ಬಿಎಂಶ್ರೀಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದುದು ಗಮನೀಯ ಅಂಶ : ಅವರಿಗೆ ಅಲ್ಲಿಯ ವರೆಗೆ ಬಂದಿದ್ದ ಇಂಗ್ಲಿಷ್ ಸಾಹಿತ್ಯ ಚರಿತ್ರೆಗಳ ಪರಿಚಯವಿತ್ತು: ಮತ್ತು ಅಂತಹುದೇ ಚರಿತ್ರೆಯನ್ನು ಕನ್ನಡ ಸಾಹಿತ್ಯದ ಬಗ್ಗೆ ಕಟ್ಟಲು ಅವರು ಪ್ರಯತ್ನಿಸಿದರು.) ಕೃತಿಯ ಮುನ್ನುಡಿಯಲ್ಲಿ ಸಾಧ್ಯವಿರುವ ಭಿನ್ನ ಚೌಕಟ್ಟುಗಳನ್ನು (" ಕಾಲಕ್ಕನುಸಾರವಾಗಿ. ಮತಕ್ಕನುಸಾರವಾಗಿ ") ಚರ್ಚಿಸುತ್ತಾ. ಕೊನೆಗೆ ಮತಪ್ರಧಾನವಾದ ಮೂರು ಘಟ್ಟಗಳನ್ನು ಮತ್ತು ಕೊನೆಯ ಆಧುನಿಕ ಘಟ್ಟವನ್ನು ಹೀಗೆ ಗುರುತಿಸುತ್ತಾರೆ : (೧) ಆರಂಭಕಾಲ : ೧೦ ನೆಯ ಶತಮಾನದ ವರೆಗೆ: (೨) ಮತ ಪ್ರಾಬಲ್ಯ ಕಾಲ : ೧೦ - ೧೯ ಶತಮಾನಗಳು (ಜೈನ ಕವಿಗಳು. ೧೦ ನೆಯ ಶತಮಾನದಿಂದ: ವೀರಶೈವ ಕವಿಗಳು, ೧೨ ನೆಯ ಶತಮಾನದಿಂದ; ಬ್ರಾಹ್ಮಣ ಕವಿಗಳು. ೧೫ ನೆಯ ಶತಮಾನದಿಂದ): (೩) ನವೀನ ಕಾಲ : ೧೯ ನೆಯ ಶತಮಾನದಿಂದ. ಇ. ಪಿ. ರೈಸ್ ಅವರ **Kanarese Literature** (೧೯೨೧) ಗ್ರಂಥದಲ್ಲೂ ಇಂತಹುದೇ ಮತಾಧಾರಿತ ವರ್ಗೀಕರಣವನ್ನು ಕಾಣುತ್ತೇವೆ.

ಕಾಲಾಧಾರಿತ ಚೌಕಟ್ಟು ನಿರ್ಭಾವುಕವಾಗಿ ಯಾಂತ್ರಿಕವೆಂಬಂತೆ ಕಾಣಬಹುದು: ಆದರೆ. ಬಿಎಂಶ್ರೀ. ರೈಸ್ ಮುಂತಾದವರ ಮತಾಧಾರಿತ ಚೌಕಟ್ಟಿನ ಪರಿಣಾಮವೇನೆಂದರೆ. ೧೯ ನೆಯ ಶತಮಾನದ ವರೆಗಿನ ಪ್ರಾಚೀನ ಸಾಹಿತ್ಯವೆಲ್ಲವೂ ' ಮತಪ್ರಚಾರ ಕೇಂದ್ರಿತ ಸಾಹಿತ್ಯ: ಆದ್ದರಿಂದ ಇಂದು ಅಷ್ಟೇನೂ ಪ್ರಸ್ತುತವಲ್ಲ ' ಎಂದು ಸಾಮಾನ್ಯ ಓದುಗರು ಭಾವಿಸುವಂತಾಯಿತು. ಇಂದಿಗೂ ಈ ಗ್ರಹಿಕೆ ಸಂಪೂರ್ಣವಾಗಿ ಬದಲಾಗಿಲ್ಲ.

ಅಲ್ಲದೆ. ಈ ಚೌಕಟ್ಟಿನ ಪರೋಕ್ಷ ಪರಿಣಾಮಗಳು ಅನೇಕ. ಅವುಗಳಲ್ಲಿ ಅತಿ ಮುಖ್ಯವಾದುದೆಂದರೆ ' ಸಾಹಿತ್ಯ ' ವೆಂಬ ಪರಿಕಲ್ಪನೆಗೆ ಒತ್ತು ಕೊಟ್ಟಿರುವುದರಿಂದ – – " ಕಾವ್ಯ.

ಸಾಹಿತ್ಯ. ಎಂಬ ಶಬ್ದಗಳ ಶ್ಲಾಘ್ಯವಾದ ಅರ್ಥದ ಮೇಲೆ ದೃಷ್ಟಿಯಿಟ್ಟು " – – ಶಾಸ್ತ್ರಗ್ರಂಥಗಳು. ಕಾವ್ಯ ಮೀಮಾಂಸೆ. ಸಂಶೋಧನೆ. ಎಲ್ಲವೂ ಅಂಚಿಗೆ ತಳ್ಳಲ್ಪಡುತ್ತವೆ : " ಆದರೆ. ಶುಷ್ಕ ಪಾಂಡಿತ್ಯವೂ. ಭಾಷಾಡಂಬರವೂ. ಸಾಧಾರಣ ಭಾವಗಳೂ. ಬರಿಯ ತಿಳಿವಳಿಕೆಯ ಸಂಗತಿಗಳೂ ಎಷ್ಟೇ ದೊಡ್ಡದಾದ ಗ್ರಂಥವನ್ನೂ ಸಾಹಿತ್ಯವೆನ್ನಿಸಲಾರವು " (ಪು. ೪೫೫ - ೪೫೬).

ಹಾಗೆಯೇ. ' ಸಾತತ್ಯ ' ದ ಪರಿಕಲ್ಪನೆ ಮೊದಲ ಬಾರಿಗೆ ಬಿಎಂಶ್ರೀ ಅವರ ಚರಿತ್ರೆಯಲ್ಲಿ ಕಂಡುಬರುತ್ತದೆ : " ಈ ನಾಲ್ಕು ಘಟ್ಟಗಳಲ್ಲಿ ಹರಿದು ಬಂದಿರುವ ನಮ್ಮ ಕನ್ನಡ ಸಾಹಿತ್ಯವನ್ನು. ನಮ್ಮ ಕನ್ನಡ ನಾಡಿನ ಏರುತಗ್ಗಿನ ಘಟ್ಟಗಳಲ್ಲಿ ನುಗ್ಗಿಬರುವ ಕಾವೇರೀ ನದಿಗೆ ಹೋಲಿಸಬಹುದು. ಅದರಂತೆಯೇ, ನಮ್ಮ ಸಾಹಿತ್ಯದ ಮೂಲವೂ ಕಾಡಿನಲ್ಲಿ ಅಡಗಿ ಹೋಗಿದೆ. ಆ ಬಳಿಕ ಉಪನದಿಗಳು ಒಂದೊಂದಾಗಿ ಸೇರುವಂತೆ... ಕಡೆಗೆ ಈಗ ಇಂಗ್ಲಿಷ್ ಸಾಹಿತ್ಯ ವೃಷ್ಟಿಯಿಂದ ಹುಚ್ಚು ಹೊಳೆಯಾಗಿ ಮೊರೆಯುತ್ತ... ವಿಹಾರ ಮಾಡಲು ತವಕಿಸುತ್ತಿದೆ " (ಪು. ೪೮೯). ಸಾಹಿತ್ಯದಲ್ಲಿ ಸಾತತ್ಯಕ್ಕೆ ಶ್ರೀಯವರು ಕೊಡುವ ನದಿಯ ರೂಪಕ ' ರಾಷ್ಟ್ರೀಯ ಸಾಹಿತ್ಯ ' ವನ್ನು ವಿವರಿಸಲು ಬ್ರಿಟಿಷ್ -ಫ್ರೆಂಚ್ ಸಾಹಿತ್ಯ ಚರಿತ್ರಕಾರರು ಕೊಡುವ ನದಿಯ ರೂಪಕವೇ ಆಗಿದೆ ಎಂಬುದು ಅರ್ಥಪೂರ್ಣ.

ಮತಾಧಾರಿತ ಚೌಕಟ್ಟಿಗಿಂತ ಭಿನ್ನವಾದ ಮತ್ತು ಕೇಂಬ್ರಿಜ್ ಇಂಗ್ಲಿಷ್ ಸಾಹಿತ್ಯ ಚರಿತ್ರೆಗೆ ಹತ್ತಿರವಿರುವ ಚೌಕಟ್ಟನ್ನು ಮುಗಳಿಯವರು ಕಟ್ಟುತ್ತಾರೆ.[೨೦] ಅವರ ಈ ಚೌಕಟ್ಟಿನ ಕೇಂದ್ರದಲ್ಲಿ ' ಮಾರ್ಗ - ದೇಸಿ ' ಕರ್ಷಣವಿದೆ. " ...ಸಾಹಿತ್ಯ ಚರಿತ್ರೆಯಲ್ಲಿ ಮತತತ್ವಕ್ಕಿಂತ ಕವಿವ್ಯಕ್ತಿ ಗಣ್ಯನು. ಕವಿಕೃತಿ ಹೆಚ್ಚು ಬೆಲೆಯುಳ್ಳದ್ದು. ...ಇದನ್ನರಿತು ನಮ್ಮ ಈ ಸಾಹಿತ್ಯ ಚರಿತ್ರೆಯನ್ನು ವಿಶಾಲವಾಗಿ ಪಂಪಯುಗ. ಬಸವಯುಗ. ಕುಮಾರವ್ಯಾಸಯುಗ ಎಂದು ವಿಭಾಗಿಸಿ.... " (ಪು. ೪೦) ಎಂದು ಮುಗಳಿಯವರು ತಮ್ಮ ಚರಿತ್ರೆಯ ನಕಾಶೆಯನ್ನು ಮಂಡಿಸುತ್ತಾರೆ. ಹಾಗೆಯೇ. ಬಿಎಂಶ್ರೀ ಅವರಂತೆ ಮುಗಳಿಯವರೂ " ಕನ್ನಡ ಸಾಹಿತ್ಯದ ಮಹಾನದಿ " ಯ ರೂಪಕದಿಂದ ಸಾತತ್ಯವನ್ನು ಕಟ್ಟುತ್ತಾರೆ. ಮುಗಳಿಯವರು ಅನುಸರಿಸುವ ವರ್ಗೀಕರಣದ ಸಮಸ್ಯೆಯೇನೆಂದರೆ ಸಾಹಿತ್ಯ ಚರಿತ್ರೆಯಲ್ಲಿ ' ವ್ಯಕ್ತಿವಾದ ' ಪ್ರಭಾವಶೀಲವಾಗುತ್ತದೆ: ಮತ್ತು ಆಯಾಯಾ ಯುಗದ ಶ್ರೇಷ್ಠ ಕವಿ ಯಾರು ಎಂಬುದು ಸಾಪೇಕ್ಷ ಎಂಬ ಅಂಶ ಮರೆತು ಹೋಗಿ. ಇಡೀ ಯುಗದ ಎಲ್ಲಾ ಲೇಖಕರೂ ಒಬ್ಬನಿಂದ / ಒಬ್ಬಳಿಂದ ಪ್ರಭಾವಿಸಲ್ಪಟ್ಟಿದ್ದರು ಎಂಬಂತಹ ಸತ್ಯದೂರ ಗ್ರಹಿಕೆ ಉದ್ಭವವಾಗುತ್ತದೆ. (ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ' ಏಜ್ ಆಫ್ ಮಿಲ್ಟನ್ ' ಎಂದ ಕೂಡಲೆ ಮಿಲ್ಟನ್‌ಗಿಂತ ಭಿನ್ನರಾಗಿ ಬರೆಯುತ್ತಿದ್ದ ಮೆಟಫಿಸಿಕಲ್ ಕವಿಗಳು ಅಲಕ್ಷಿಸಲ್ಪಡುತ್ತಾರೆ: ' ಏಜ್ ಆಫ್ ಎಲಿಯಟ್ ' ಎಂದು ಗುರುತಿಸಿದ ಕೂಡಲೇ ಎಲಿಯಟ್‌ನಷ್ಟೇ ಸ್ವೋಪಜ್ಞ ಕವಿಯಾದ ಯೇಟ್ಸ್ ಅಂಚಿಗೆ ತಳ್ಳಲ್ಪಡುತ್ತಾನೆ. ಅಲ್ಲದೆ. ಸಮಕಾಲೀನ ಮಹಾನ್ ಪ್ರತಿಭೆಗಳಾದ ಎಲಿಯಟ್. ಯೇಟ್ಸ್, ಲಾರೆನ್ಸ್. ಜಾಯ್ಸ್. ಶಾ – – ಇವರುಗಳಲ್ಲಿ ಇಪ್ಪತ್ತನೆಯ ಶತಮಾನ ಯಾರ ಯುಗ ?) ಈ ಕಾರಣಗಳಿಂದಲೇ. ವ್ಯಕ್ತಿಕೇಂದ್ರಿತವಲ್ಲದ ಒಂದು ಹೊಸ ಬಗೆಯ ಸಾಹಿತ್ಯ ಚರಿತ್ರೆಯನ್ನು ಗುರುತಿಸಲು ಸಿ. ವೀರಣ್ಣನವರು ಪ್ರಯತ್ನಿಸುತ್ತಾರೆ. ಆದರೆ ಅವರ ಯೋಜನೆ ಅಪೂರ್ಣವಾಗಿದೆ: ಮತ್ತು ಪ್ರಕಟವಾಗಿರುವ ಅವರ ಸಾಹಿತ್ಯ ಚರಿತ್ರೆಯ ಭಾಗದಲ್ಲಿಯೂ ಪಂಪನೇ ವಿಜೃಂಭಿಸುತ್ತಾನೆ.

ಆಧುನಿಕ ಕನ್ನಡ ಯುಗವನ್ನು ಕುರಿತು ಮೊದಲು ' ಸಾತತ್ಯ ' ದ ಬಗ್ಗೆ ಪ್ರಶ್ನೆಯನ್ನೆತ್ತಿದವರು ಎಂ. ಜಿ. ಕೃಷ್ಣಮೂರ್ತಿ. " ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯ ಉಗಮ ಮತ್ತು ಬೆಳವಣಿಗೆ " ಎಂಬ ದೀರ್ಘ ಲೇಖನದ ಕೊನೆಯಲ್ಲಿ ಅವರು ಹೀಗೆ ಕೆಲವು ಪ್ರಶ್ನೆಗಳನ್ನು ಎತ್ತುತ್ತಾರೆ :

" ಯಾವುದೇ ಕಾಲದ ಇಂಗ್ಲಿಷ್ ವಿಮರ್ಶಕ ಸಮಕಾಲೀನ ಕನ್ನಡ ವಿಮರ್ಶಕನಂತೆ ಭಗ್ನ ಸ್ಥಿತಿಯ ವಾಸ್ತವವನ್ನು ಎದುರಿಸಿದ್ದಿರಬಹುದೇ ಎಂದು ನನಗೆ ಸಂಶಯವಾಗುತ್ತದೆ. ಇಂಗ್ಲಿಷ್ ವಿಮರ್ಶಕ ಮಧ್ಯಕಾಲದಿಂದ ಈಗಿನ ವರೆಗಿನ ಅಖಂಡ ಸಾಹಿತ್ಯ ಪರಂಪರೆಯನ್ನು ತೋರಿಸಬಲ್ಲ. ಆದರೆ ಕನ್ನಡ ವಿಮರ್ಶಕ ವಿಸ್ತಾರವಾದ ಸಾಹಿತ್ಯ ಇತಿಹಾಸವನ್ನು ತೋರಿಸಬಹುದಾದರೂ ಸಂಪ್ರದಾಯದ ಪ್ರಧಾನ ಅಂಶವಾದ ಕಾಳಜಿಗಳ ಅವಿಚ್ಛಿನ್ನತೆಯನ್ನು ಅವನು ತೋರಿಸಲಾರ. ...ಇಂಗ್ಲಿಷ್ ವಿಮರ್ಶಕ ವಿಮರ್ಶಿಸುವಾಗ ಸಂಪ್ರದಾಯವೊಂದರ ಹಿನ್ನೆಲೆಯಲ್ಲಿ ಒಬ್ಬ ಲೇಖಕನನ್ನು ಬೆಲೆಗಟ್ಟಬಹುದು. ಆದರೆ ಕನ್ನಡ ವಿಮರ್ಶಕನೊಬ್ಬ ಕನ್ನಡ ಸಾಹಿತ್ಯ ಪರಂಪರೆಯ ಹೊರಗೆ ಹೋಗಬೇಕಾಗುತ್ತದೆ. ಅಂದರೆ ಒಂದು ಕಡೆ ಸಂಸ್ಕೃತ ಸಾಹಿತ್ಯ ಪರಂಪರೆಯತ್ತ, ಮತ್ತೊಂದು ಕಡೆ ಯುರೋಪಿಯನ್ ಪರಂಪರೆಯತ್ತ ಹೋಗಬೇಕಾಗುತ್ತದೆ. " [೧೧]

ಈ ಹೇಳಿಕೆಗಳಲ್ಲಿ ಮತ್ತು ಇಡೀ ಲೇಖನದಲ್ಲಿ ಅನೇಕ ಚರ್ಚಾಸ್ಪದ ಅಂಶಗಳಿವೆ– – ಇಲ್ಲಿ ಎಂಜಿಕೆ ಪರಂಪರೆ ಮತ್ತು ಸಂಪ್ರದಾಯ ಪರಿಕಲ್ಪನೆಗಳನ್ನು ಸಮಾನಾರ್ಥಕಗಳಂತೆ ಉಪಯೋಗಿಸುತ್ತಾರೆ. ಇತ್ಯಾದಿ. ಆದರೆ. ಅವರ ತೀರ್ಮಾನಗಳಲ್ಲಿ ಅತ್ಯಂತ ಚರ್ಚಾಸ್ಪದವಾದುದು ನರಹಳ್ಳಿಯವರು ಗುರುತಿಸುವಂತೆ ' ಕನ್ನಡ ಸಾಹಿತ್ಯ ಪರಂಪರೆಯ ವಿಚ್ಛಿನ್ನತೆ ' ಅಲ್ಲ: [೧೨] ಒಂದು ಪ್ರಶ್ನಾತೀತ ಸತ್ಯವೆಂಬಂತೆ ಎಂಜಿಕೆ ಗ್ರಹಿಸಿರುವ ಇಂಗ್ಲಿಷ್ ಸಾಹಿತ್ಯ ಪರಂಪರೆ : " ಇಂಗ್ಲಿಷ್ ವಿಮರ್ಶಕನೊಬ್ಬ ಟಿ. ಎಸ್. ಎಲಿಯಟ್. ಮೆಟಫಿಸಿಕಲ್ ಕವಿಗಳು ಮತ್ತು ಜಕೊಬಿಯನ್ ನಾಟಕಕಾರರ ಮಧ್ಯೆ ಫಲಪ್ರದವಾಗಿ ಸ್ಥಾಪಿಸಬಹುದಾದ ಸಂಬಂಧ " (ಪು. ೩೦೮). ಈ ಸಂಬಂಧ ಕೇವಲ ಎಲಿಯಟ್ - ಲೀವಿಸ್ ಕಟ್ಟಿಕೊಟ್ಟ ಸಂಬಂಧ: ಮತ್ತು ಇದನ್ನು ಯಾವ ಸಂಕೋಚವೂ ಇಲ್ಲದೆ ಎಂಜಿಕೆಯವರು ಒಪ್ಪುವುದು ಅವರ ಮೇಲೆ ಎಲಿಯಟ್ - ಲೀವಿಸ್ ಪ್ರಭಾವ ಎಷ್ಟು ಗಾಢವಾಗಿತ್ತೆಂಬುದರ ನಿದರ್ಶನ.

ಈ ಸಂದರ್ಭದಲ್ಲೊಂದು ಪ್ರಶ್ನೆಯೇಳುತ್ತದೆ : ಪರಂಪರೆ ಮತ್ತು ಸಾತತ್ಯ ಎಂಬ ಪರಿಕಲ್ಪನೆಗಳು ವಿಮರ್ಶಕನೊಬ್ಬ (ಕವಿಯಲ್ಲ) ತನ್ನ / ತನ್ನ ಸಮುದಾಯದ ಸಮಕಾಲೀನ ಒತ್ತಡಗಳಿಗೆ ಮತ್ತು ಅಗತ್ಯಗಳಿಗೆ ಅನುಸಾರವಾಗಿ ಕಟ್ಟುವ ಒಂದು ಅಮೂರ್ತ ಚೌಕಟ್ಟು ಎಂದಾದರೆ. ಯಾವ ಕಾಲದಲ್ಲಿಯೇ ಆಗಲಿ ಲೇಖಕನೊಬ್ಬ ಶೂನ್ಯಸ್ಥಿತಿಯಲ್ಲಿ. ಅಂತರಾಳದಲ್ಲಿ ಕೃತಿರಚನೆ ಮಾಡುತ್ತಾನೆಯೆ ? ಅದು ಸಾಧ್ಯವೆ ? – – ಉತ್ತರ, ಇಲ್ಲ : ಯಾವುದಾದರೂ ಒಂದು ವೈಚಾರಿಕ / ಸಾಹಿತ್ಯಕ / ಭಾಷಿಕ ಹಿನ್ನೆಲೆಯಿಲ್ಲದಿದ್ದರೆ ಯಾವ ಬಗೆಯ ವಾಙ್ಮಯ ಸೃಷ್ಟಿಯೂ ಸಾಧ್ಯವಿಲ್ಲ. ಆದರೆ. ಇಂತಹ ' ಹಿನ್ನೆಲೆಗಳು ' ವ್ಯಕ್ತಿವಿಶಿಷ್ಟವಾಗಿರುತ್ತವೆ. ಸೀಮಿತವಾಗಿರುತ್ತವೆ: ಮತ್ತು ಲೇಖಕರೇ ಅನೇಕ ಸಂದರ್ಭಗಳಲ್ಲಿ ತಮಗೆ ಪ್ರಸ್ತುತವೆಂದು ಕಂಡ ಹಿನ್ನೆಲೆಯನ್ನು ತಾವೇ ಸ್ಪಷ್ಟಪಡಿಸುತ್ತಾರೆ (' ಪೂರ್ವಾಚಾರ್ಯಸ್ತುತಿ '). ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಈ ಹಿನ್ನೆಲೆಗಳು ಒಂದೇ ಕಾಲಘಟ್ಟದಲ್ಲಿ ಕ್ರಿಯಾಶೀಲವಾಗಿರುವ ಲೇಖಕರಿಗೂ ಭಿನ್ನವಾಗಿರುತ್ತವೆ.

ನಿದರ್ಶನಾರ್ಥವಾಗಿ : ಕವಿರಾಜಮಾರ್ಗಕಾರನು ವಿಮಲೋದಯ. ನಾಗಾರ್ಜುನ. ಜಯಬಂಧು. ದುರ್ವಿನೀತ. ಗುಣಸೂರಿ. ನಾರಾಯಣ. ಬಾಣ. ಭಾರವಿ. ಕಾಳಿದಾಸ. ಮಾಘ ಮುಂತಾದ ಕನ್ನಡ-ಸಂಸ್ಕೃತ ಕವಿಗಳನ್ನು ಸ್ಮರಿಸುತ್ತಾನೆ. ಪಂಪ ವ್ಯಾಸಮುನೀಂದ್ರರನ್ನು ಮಾತ್ರ ನೆನೆಯುತ್ತಾನೆ. ರನ್ನ ಪಂಪ-ಪೊನ್ನರನ್ನು ಸ್ಮರಿಸಿದರೂ ಪೊನ್ನನು ಅಸಗನನ್ನು ಮಾತ್ರ ನೆನೆಯುತ್ತಾನೆ, ಪಂಪನ ಹೆಸರೆತ್ತುವುದಿಲ್ಲ. ಜನ್ನ ಗುಣವರ್ಮ. ಪಂಪ. ನಾಗವರ್ಮ. ರನ್ನ, ನಾಗಚಂದ್ರ, ಅಗ್ಗಳ, ನೇಮಿ. ಪುಷ್ಪಬಾಣ ಇತ್ಯಾದಿ ಜೈನ ಕವಿಗಳನ್ನು ಮಾತ್ರ ಸ್ಮರಿಸುತ್ತಾನೆ. ಲಕ್ಮೀಶ " ಪೂರ್ವ ಸತ್ಕವಿಗಳಿಗೆ ನಮಿಸಿ " ಎಂದಷ್ಟೇ ಹೇಳಿದರೆ. ಕುಮಾರವ್ಯಾಸ ವ್ಯಾಸರಿಗೆ ಮಾತ್ರ ನಮಿಸುತ್ತಾನೆ. ಎಂದರೆ, ಪೂರ್ವಾಚಾರ್ಯಸ್ಮರಣೆಯಿಂದಲೂ ಒಂದು ಅಖಂಡ ಕನ್ನಡ ಪರಂಪರೆಯನ್ನು ಕಟ್ಟುವುದು ಅಸಾಧ್ಯ.

ಇನ್ನು, ಸಾಹಿತ್ಯದ ಪ್ರಶ್ನೆಗೇ ಹಿಂತಿರುಗಿದರೆ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಸ್ತು ಮತ್ತು ಅಭಿವ್ಯಕ್ತಿ ಈ ಎರಡೂ ನೆಲೆಗಳಲ್ಲಿ, ಸಾತತ್ಯಕ್ಕಿಂತ ವಿಚ್ಛಿನ್ನತೆಯ ಘಟ್ಟಗಳು ಎದ್ದು ಕಾಣುತ್ತವೆ : ವಚನ ಸಾಹಿತ್ಯ, ಹರಿಹರ - ರಾಘವಾಂಕರಿಂದ ಪ್ರಾರಂಭವಾಗುವ ಒಂದು ಕಾವ್ಯಧಾರೆ, ದಾಸಸಾಹಿತ್ಯ, ಇತ್ಯಾದಿ. ಅಲ್ಲದೆ, ' ವಚನ ಸಾಹಿತ್ಯ - ಚಳವಳಿ ' ಎಂದಾಗಲೂ ನಾವು ಅವರೊಳಗೇ ಇರುವ ಭಿನ್ನ ಧಾರೆಗಳನ್ನು ಗುರುತಿಸಬೇಕು : ಇಷ್ಟಲಿಂಗ ಇತ್ಯಾದಿ ಬಾಹ್ಯಸಂಕೇತಗಳಿಗೆ ಮಹತ್ವ ಕೊಡದ ಶರಣರು, ' ಕೆಳ ' ವರ್ಗಗಳಿಂದ ಬಂದ ಮತ್ತು ಶರಣ ಚಳವಳಿಯ ಸಾಂಸ್ಥೀಕರಣವನ್ನು ವಿರೋಧಿಸುವ ಮಾದೇಶ್ವರ, ಮಂಟೇಸ್ವಾಮಿ ಇತ್ಯಾದಿ. ಸಾಧಾರಣವಾಗಿ, ವಚನಕಾರರು ' ಆದ್ಯರ ವಚನಗಳನ್ನು ' ಮಾತ್ರ ಪರಿಗಣಿಸುತ್ತಾರೆ; ಉಳಿದ ಪರಂಪರೆಗಳನ್ನು ಕಡೆಗಣಿಸುತ್ತಾರೆ (ಆದ್ಯರ ವಚನ " ಪಾಲತೊರೆಗ ಬೆಲ್ಲದ ಕೆಸರು ": ಉಳಿದವರ ವಚನ " ಬೇರೆ ಬಾವಿಯ ಉಪ್ಪು ನೀರು. ") ಈ ಹೇಳಿಕೆ ದಾಸ ಚಳವಳಿಗೂ ಅನ್ವಯಿಸುತ್ತದೆ. ಕೀರ್ತನಕಾರರು ಧಾರ್ಮಿಕ ನೆಲೆಯಲ್ಲಿ ವ್ಯಾಸ - ವಾಲ್ಮೀಕಿಗಳನ್ನು ಗೌರವಿಸಿದರೆ, ಸಾಹಿತ್ಯಕ ನೆಲೆಯಲ್ಲಿ ಇತರ ಕೀರ್ತನಕಾರರನ್ನು ಮಾತ್ರ ಉಲ್ಲೇಖಿಸುತ್ತಾರೆ. ಎಂದರೆ, ಇಡೀ ಕನ್ನಡ ಸಾಹಿತ್ಯದ ಒಂದು ಪರಂಪರೆ ಇದೆ ಎಂಬ ಗ್ರಹಿಕೆ ವಚನಕಾರರಲ್ಲಿಯಾಗಲೀ ಕೀರ್ತನಕಾರರಲ್ಲಿಯಾಗಲೀ ಇರುವುದು ಕಾಣುವುದಿಲ್ಲ.

ಹಾಗೆಯೇ, ವಸ್ತು, ಅಭಿವ್ಯಕ್ತಿ, ಮಾಧ್ಯಮ, ಕಾವ್ಯಸಂಪ್ರದಾಯಗಳು, ಭಾಷೆ ಇತ್ಯಾದಿಗಳನ್ನಾಧರಿಸಿ ನಾವು ಒಂದಲ್ಲ ಅನೇಕ ಪರಂಪರೆಗಳನ್ನು ಕಟ್ಟಬಹುದು. ಪಂಪನ ಪರಂಪರೆ ' ಅಭಿನವ ಪಂಪ ' ನನ್ನು ಸೃಷ್ಟಿಸಿದರೆ, ವಾಲ್ಮೀಕಿ - ವ್ಯಾಸ ಪರಂಪರೆ ' ಕುಮಾರವಾಲ್ಮೀಕಿ - ಕುಮಾರವ್ಯಾಸ ' ರನ್ನು ಸೃಷ್ಟಿಸುತ್ತದೆ. ಇನ್ನೊಂದು ನೆಲೆಯಲ್ಲಿ, ಪಂಪನು ಪ್ರಾರಂಭಿಸಿದ ' ಲೌಕಿಕ ಜಿನಾಗಮ ' ಪರಂಪರೆ ಜನ್ನನಲ್ಲಿಯೇ ತಿದ್ದಲ್ಪಡುತ್ತದೆ : ಜನ್ನನ **ಯಶೋಧರ ಚರಿತೆ** ಲೌಕಿಕ ಕಾವ್ಯವೂ ಅಹುದು, ಧಾರ್ಮಿಕ ಕಾವ್ಯವೂ ಅಹುದು. ರತ್ನಾಕರವರ್ಣಿಯಲ್ಲಿ ಇವೆರಡೂ ಒಂದಾಗುತ್ತವೆ.

ಜೈನ ಕಾವ್ಯ / ಬ್ರಾಹ್ಮಣ ಕಾವ್ಯ ಪರಂಪರೆಗಿಂತ ತನ್ನದು ಎಷ್ಟು ಭಿನ್ನವಾಗಿದೆ ಎಂದು ಚಾಮರಸ ತನ್ನ **ಪ್ರಭುಲಿಂಗಲೀಲೆ**ಯಲ್ಲಿ ಸ್ಪಷ್ಟಪಡಿಸುವುದು ಪರಂಪರೆಯ ಪ್ರಶ್ನೆಯ ಹಿನ್ನೆಲೆಯಲ್ಲಿ ಗಮನೀಯ : ತನ್ನ ಕಾವ್ಯ

ಕಾಳಗದ ಕಥೆಯಲ್ಲ ವಿಷಯಗ
ಳೇಳಿಗೆಯ ವಿಧಿಯಲ್ಲ ಹೊಟ್ಟೆಯ
ಹೊಳಲಿಕೆ ಹಿಂಸೆಯನು ಮಾಡುವ ಹೊಲಬು ತಾನಲ್ಲ ।
ಕಾಳಗವು ಕರಣದಲಿ ಸುರತದ
ಕೀಲು ಕುಂಡಲಿಯಲ್ಲಿ ತೃಪ್ತಿಯ
ದಾಳಿ ಗಗನದೊಳೆಂದು ಹೇಳುವುದೀ ಸುಬೋಧೆಯಲಿ ॥

ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವವರ ಸೀಮೆಯ ಹೊಲಬು ತಾನಲ್ಲ ।
ಹೊತ್ತು ಹೋಗದೆ ಪುಂಡರಾಲಿಪ
ಮತ್ತಮತಿಗಳ ಗೋಷ್ಠಿಯಲ್ಲಿದು
ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು ॥ (೧ : ೧೨ - ೧೩) [೨೩]

ಒಂದು ಪರಂಪರೆಯನ್ನು ಕುರಿತ ಹಿನ್ನೆಲೆಯಲ್ಲಿ ಚಾಮರಸನ ಈ ಹೇಳಿಕೆಗಳಿಗೂ ಮಿಲ್ಟನ್‌ನ ಹೇಳಿಕೆಗಳಿಗೂ ಆಶ್ಚರ್ಯಕರ ಸಾಮ್ಯಗಳು ಕಂಡುಬರುತ್ತವೆ. ತನ್ನ **Paradise Lost** ಕೃತಿಯ ಒಂದು ಸಂದರ್ಭದಲ್ಲಿ ಮಿಲ್ಟನ್ ಹೀಗೆ ಹೇಳುತ್ತಾನೆ : ಇಲ್ಲಿಯ ವರೆಗೆ ಮಹಾಕಾವ್ಯಗಳ ಏಕಮಾತ್ರವಸ್ತುವೆಂದು ಪರಿಗಣಿಸಲ್ಪಟ್ಟಿರುವ ಯುದ್ಧಗಳು, ಪ್ರಸಿದ್ಧ ಯೋಧರ ಸಾಧನೆಗಳು,

ಪಂದ್ಯಗಳು ಮತ್ತು ಕ್ರೀಡೆಗಳು. ಥಳಥಳಿಸುವ ಗುರಾಣಿಗಳು. ಅಲಂಕರಿಸಿದ ರಥಾಶ್ವಗಳು. ವೈಭವೋಪೇತ ಸಾಮೂಹಿಕ ಭೋಜನಗಳು– –ಇವಾವುವನ್ನೂ ವರ್ಣಿಸಲು ನನಗೆ ಇಷ್ಟವಿಲ್ಲ. ಇವೆಲ್ಲವೂ ಕ್ಷುದ್ರ ಸಂಗತಿಗಳು. ಬೆರಗುಗೊಳಿಸುವ ಬೇಗಡೆಗಳು. ಇಲ್ಲಿಯ ವರೆಗೆ. ಅಪಾರ ಸಹನೆ. ಕಷ್ಟಸಹಿಷ್ಣುತೆ. ಮತ್ತು ಮಹೋನ್ನತ ಆತ್ಮ ಬಲಿದಾನ– --ಇವುಗಳನ್ನು ಯಾರೂ ಕೀರ್ತಿಸಿಲ್ಲ. [೧೮]

" ವಿಚ್ಛಿನ್ನತೆಯ ತೀವ್ರತೆಯನ್ನು ನಾವು ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸುವಾಗ ಕಾಣುತ್ತೇವೆ. ನೂತನ ವಸ್ತು. ಪ್ರಭೇದಗಳು ಮತ್ತು ವೈಚಾರಿಕತೆ ಕನ್ನಡ ಸಾಹಿತ್ಯವನ್ನು ಪ್ರವೇಶಿಸುತ್ತವಲ್ಲದೆ. ಮುಖ್ಯವಾಗಿ. ಅಲ್ಲಿಯ ವರೆಗ (ಪ್ರಧಾನವಾಗಿ) ಮೌಖಿಕವಾಗಿದ್ದ ಸಾಹಿತ್ಯ ಲಿಖಿತವಾಗಿ. ಸೀಮಿತ ಶ್ರೋತೃವರ್ಗದ ಬದಲಿಗೆ ವ್ಯಾಪಕ ಓದುಗ ವರ್ಗ ನಿರ್ಮಾಣವಾಗುತ್ತದೆ. ಅತಿ ಮುಖ್ಯವಾಗಿ, ಆಧುನಿಕ ಕಾಲದ ವರೆಗೂ (ಒಂದು ನೆಲೆಯಲ್ಲಿ) ಧಾರ್ಮಿಕ ಚಿಂತನೆಯನ್ನು ಕೇಂದ್ರವಾಗಿಟ್ಟುಕೊಂಡಿದ್ದ ಕನ್ನಡ ಸಾಹಿತ್ಯ (ಮರಾಠಿ / ತಮಿಳು / ತೆಲುಗು ... ಸಾಹಿತ್ಯ) ಮೊದಲ ಬಾರಿಗೆ ಧರ್ಮನಿರಪೇಕ್ಷವಾಗುತ್ತದೆ. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಸಮಾಜದ ಎಲ್ಲರಿಗೂ ಶಿಕ್ಷಣದ ಅವಕಾಶ ದೊರಕುತ್ತದಲ್ಲದೆ. ಲೇಖಕರಿಗೆ / ಚಿಂತಕರಿಗೆ ಭಾರತದ ಹೊರಗಿರುವ ಅನೇಕಾನೇಕ ಲೇಖಕರ / ಚಿಂತಕರ ಕೃತಿಗಳ ಅನುಭವ ಸಾಧ್ಯವಾಗುತ್ತದೆ. ಪರಿಣಾಮತಃ ಕನ್ನಡ ಜೈನ ಕವಿಗಳು ತಮ್ಮ ಹಿಂದಿನ ಸಂಸ್ಕೃತ - ಕನ್ನಡ ಜೈನ ಕವಿಗಳನ್ನು ಸ್ಮರಿಸಿದರೆ. ಕುವೆಂಪು " ಹೋಮರಗೆ. ವರ್ಜಿಲಗೆ. ಡಾಂಟೆ ಮೇಣ್ ಮಿಲ್ಟನಗೆ... " ಎಂದು ವಿಶ್ವದ ಎಲ್ಲಾ ವಿಭೂತಿಪುರುಷರಿಗೂ ನಮಿಸುತ್ತಾರೆ.

ಆಧುನಿಕ ಕನ್ನಡ ಸಾಹಿತಿಗಳಲ್ಲಿ ಕುವೆಂಪು ಕಾವ್ಯಕ್ಕೆ ಮಾತ್ರ ನಾವು ಒಂದು ಬಗೆಯ ಪಂಪ - ನಾಗಚಂದ್ರ - ಕುಮಾರವ್ಯಾಸ ಪರಂಪರೆಯನ್ನು ಕಟ್ಟಬಹುದು. ಆದರೆ. ಅವರ ಕಾದಂಬರಿ-ಸಣ್ಣಕಥೆಗಳಿಗೆ. ಕಾರಂತರ ಕಾದಂಬರಿಗಳಿಗೆ. ಮಾಸ್ತಿಯವರ ಕಥೆ-ಕಾದಂಬರಿಗಳಿಗೆ ಯಾವ ಕನ್ನಡ ಪರಂಪರೆಯನ್ನು ಕಟ್ಟಬಹುದು ? ಈ ಪ್ರಶ್ನೆ ಪ್ರಗತಿಶೀಲ ಮತ್ತು ನವ್ಯ ಲೇಖಕರಿಗೆ ಬಂದಾಗ ಇನ್ನೂ ಜಟಿಲವಾಗುತ್ತದೆ.

•

ಇಲ್ಲಿಯ ವರೆಗೆ ನಾನು ಮಂಡಿಸಲು ಪ್ರಯತ್ನಿಸಿದ ವಾದದ ಮುಖ್ಯಾಂಶಗಳು ಇವು :

(೧) ಯಾವುದೇ ಒಂದು ಚರಿತ್ರೆಯಲ್ಲಿ– –ಅದು ಸಾಹಿತ್ಯ ಚರಿತ್ರೆಯಾಗಿರಬಹುದು ಅಥವಾ ರಾಜಕೀಯ - ಸಾಂಸ್ಕೃತಿಕ - ಸಾಮಾಜಿಕ ಚರಿತ್ರೆಯಾಗಿರಬಹುದು– –ಅಖಂಡತೆ ಮತ್ತು ಸಾತತ್ಯವಿರುತ್ತವೆಂದು ಭಾವಿಸುವುದು ನಮ್ಮ ಭ್ರಮೆ. ವಿಚ್ಛಿನ್ನತೆಯ ಕಾಲಘಟ್ಟಗಳು ವರ್ತಮಾನದಿಂದ ದೂರವಾದಂತೆ ಅವುಗಳ ಮೊನಚೂ ಕಮ್ಮಿಯಾಗಿ. ಅವು ಒಂದು ಬಗೆಯ ಸಾತತ್ಯದ ಭ್ರಮೆಯನ್ನುಂಟುಮಾಡುತ್ತವೆ.

(೨) ಸಾಹಿತ್ಯವೂ ಸೇರಿದಂತೆ ಯಾವ ಒಂದು ಕ್ಷೇತ್ರದಲ್ಲಿಯೂ. ಯಾವ ಒಂದು ಕಾಲಖಂಡದಲ್ಲಿಯೂ. **ಒಂದು ಪರಂಪರೆ** ಇರುವುದಿಲ್ಲ; ಅನೇಕ ಪರಂಪರೆಗಳಿರುತ್ತವೆ. ಇವುಗಳಲ್ಲಿ ' ಮಹಾನ್ / ಮುಖ್ಯ ಪರಂಪರೆ ' ಹಾಗೂ ' ಪರ್ಯಾಯ / ಕಿರು ಪರಂಪರೆ ' ಎಂದು ವರ್ಗೀಕರಿಸಲು ಸಾಧ್ಯವಿಲ್ಲ. ಅಧಿಕಾರದಲ್ಲಿರುವವರ ಅಥವಾ ಸಾಂಸ್ಥಿಕ ಬೆಂಬಲವನ್ನು ಪಡೆದ ಪರಂಪರೆ ' ಮಹಾನ್ ' ' ಮುಖ್ಯ ' ಎಂದು ಕರೆಸಿಕೊಳ್ಳುತ್ತದೆ.

(೩) ಇಂತಹ ಗ್ರಹಿಕೆಯೊಡನೆ ಒಂದು ಸಾಹಿತ್ಯ ಚರಿತ್ರೆಯನ್ನು ರಚಿಸಿದರೆ ಅದು ಪ್ರಾಯಃ. ನಿರ್ಭಾವುಕವಾದ ಕಾಲಾಧಾರಿತ ವರ್ಗೀಕರಣಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ: ಮತ್ತು ಕಾಲಾಧಾರಿತ ವರ್ಗೀಕರಣ ಪ್ರಭೇದಾಧಾರಿತ ವರ್ಗೀಕರಣವನ್ನೂ ಒಳಗೊಳ್ಳಬಹುದು. ಆದರೆ. ಯಾವುದೇ ವರ್ಗೀಕರಣವನ್ನಾಧರಿಸಿದರೂ. ಚರಿತ್ರಕಾರ ಆ ವರ್ಗೀಕರಣದಿಂದ ಹೊರಗುಳಿಯುವ ಲೇಖಕರ / ಕೃತಿಗಳ ಬಗ್ಗೆಯೂ ಆಸಕ್ತಿ ಹೊಂದಿರಬೇಕಾಗುತ್ತದೆ.

ಟಿಪ್ಪಣಿಗಳು :

೧. ಈ ಲೇಖನಕ್ಕೆ ಅಗತ್ಯವಾದ ಕೆಲವು ದುರ್ಲಭ ಕೃತಿಗಳನ್ನು ಒದಗಿಸಿಕೊಟ್ಟು, ಚರ್ಚೆಯ ಮೂಲಕ ಅನೇಕ ಅಂಶಗಳನ್ನು ನನ್ನ ಸ್ನೇಹಿತರಾದ ಡಾ. ಸತ್ಯನಾರಾಯಣ ಮಲ್ಲಿಪಟ್ಣ ಅವರು ಸ್ಪಷ್ಟಗೊಳಿಸಿದ್ದಾರೆ; ಅವರಿಗೆ ನಾನು ಕೃತಜ್ಞನಾಗಿದ್ದೇನೆ.

೨. ಈ ಲೇಖನ ಮೊದಲು ಭಾಷಣ ರೂಪದಲ್ಲಿತ್ತು. ಮೊದಲ ಬಾರಿಗೆ ಪಟ್ಟಭದ್ರ ಸಾಹಿತಿ - ವಿಮರ್ಶಕರ ಎದುರು. ಅವರ ಗಾಢ ನಂಬಿಕೆ - ವಿಚಾರಗಳನ್ನು ವಿರೋಧಿಸಲು ಉದ್ದೇಶಿಸಿದ್ದ ಎಲಿಯಟ್ ಆ ಕಾರಣದಿಂದಾಗಿ ತನ್ನ ಭಾಷಣದಲ್ಲಿ ಎಷ್ಟು ಬಗೆಯ ವಾಗ್ಮಿತೆಯ ತಂತ್ರಗಳನ್ನು ಉಪಯೋಗಿಸುತ್ತಾನೆ. ಹೇಗೆ ತರ್ಕಬದ್ಧತೆಯ ಭ್ರಮೆಯನ್ನು ಹುಟ್ಟಿಸುತ್ತಲೇ ಅತಾರ್ಕಿಕ ವಾದಗಳನ್ನು ಮಂಡಿಸುತ್ತಾನೆ. ಎಂಬ ಸಂಗತಿಯನ್ನು ನಾನು ವಿವರವಾಗಿ ಇನ್ನೊಂದು (ಇಂಗ್ಲಿಷ್) ಲೇಖನದಲ್ಲಿ ಚರ್ಚಿಸಿದ್ದೇನೆ. ಇಲ್ಲಿ, ಅವನ ತಂತ್ರಗಳ ಒಂದು ಪ್ರಾತಿನಿಧಿಕ ನಿದರ್ಶನವನ್ನು ಕೊಡುವುದಾದರೆ. ತನ್ನ ಭಾಷಣದ ಉದ್ದೇಶ - ಲಕ್ಷಣಗಳನ್ನು ಕೊನೆಯ ವರೆಗೆ ಅವನು ಸ್ಪಷ್ಟಪಡಿಸುವುದಿಲ್ಲ; ಕೊನೆಯಲ್ಲಿ ತನ್ನ ಮುಖ್ಯ ವಾದವನ್ನು ಮಂಡಿಸಿದಾಗಲೂ ಅದಕ್ಕೆ ಆಧಾರವಾಗಿ ವರ್ಡ್ಸ್‌ವರ್ತ್‌ನ ಕಾವ್ಯದ ವ್ಯಾಖ್ಯಾನವನ್ನು (ಪ್ರಜ್ಞಾಪೂರ್ವಕವಾಗಿ) ತಪ್ಪಾಗಿ ಉದಾಹರಿಸುತ್ತಾನೆ.

೩. ನೋಡಿ : " The Idea of a Christian Society " (೧೯೩೯). ಈ ಪ್ರಬಂಧದಲ್ಲಿ ಆಧುನಿಕ ಕಾಲದಲ್ಲಿ ಧರ್ಮ ಹಾಗೂ ಸತ್ಯಗಳನ್ನು ಕಾಪಾಡುವ ಹೊಣೆ ಕ್ರಿಶ್ಚಿಯನ್ ಸಮುದಾಯದ ಮೇಲಿದೆಯೆಂದು ವಾದಿಸುತ್ತಾನೆ.

೪. ತನ್ನ ಕೃತಿಯ ಮೊದಲ ಆವೃತ್ತಿಯಲ್ಲಿ ಟೇನ್ ಈ ಮೂರು ಪರಿಣಾಮಗಳನ್ನು " **race - surroundings -epoch** " ಎಂದು ಗುರುತಿಸಿದ್ದನು; ಅನಂತರ ಅವನು " **race-moment-milieu** " ಎಂದು ಪರಿಷ್ಕರಿಸಿದನು.

೫. ರೆ. ಎಫ್. ಕಿಟ್ಟೆಲ್. **ನಾಗವರ್ಮನ ಕನ್ನಡ ಛಂದಸ್ಸು.** ಮಂಗಳೂರು : ಬಾಸೆಲ್ ಮಿಶನ್. ೧೮೭೫

೬. ಬಿ. ಎಂ. ಶ್ರೀಕಂಠಯ್ಯ. **ಕನ್ನಡ ಕೈಪಿಡಿ** : ಸಂಪುಟ ೨ (" ಕನ್ನಡ ಸಾಹಿತ್ಯದ ಚರಿತ್ರೆ "). ಮೈಸೂರು ವಿ. ವಿ., ೧೯೪೭

೭. ಕಿಟ್ಟೆಲ್. ಮುನ್ನುಡಿ. ಪು. ೪೭. ಇಂಗ್ಲಿಷ್ ಮೂಲದ ಅನುವಾದ ನನ್ನದು.

೮. ಆರ್. ನರಸಿಂಹಾಚಾರ್ಯ. **ಕರ್ಣಾಟಕ ಕವಿ ಚರಿತೆ.** ಬೆಂಗಳೂರು : ಬೆಂಗಳೂರು ಪ್ರೆಸ್. ಈ ಗ್ರಂಥ ಮೂರು ಸಂಪುಟಗಳಲ್ಲಿ ೧೯೦೭. ೧೯೧೯. ೧೯೨೯ ಈ ವರ್ಷಗಳಲ್ಲಿ ಪ್ರಕಟವಾಯಿತು.

೯. ಆರ್. ನರಸಿಂಹಾಚಾರ್ಯ. **History of Kannada Literature : Readership Lectures.** ಮೈಸೂರು ವಿ. ವಿ., ೧೯೪೦

೧೦. ರಂ. ಶ್ರೀ. ಮುಗಳಿ. **ಕನ್ನಡ ಸಾಹಿತ್ಯ ಚರಿತ್ರೆ.** ೧೯೫೩: ಮೈಸೂರು : ಉಷಾ ಸಾಹಿತ್ಯಮಾಲೆ. ೧೯೭೧

೧೧. ಎಂ. ಜಿ. ಕೃಷ್ಣಮೂರ್ತಿ. **ಕೃತಿ - ಸಂಸ್ಕೃತಿ : ಎಂಜಿಕೆಯವರ ಸಮಗ್ರ ಲೇಖನಗಳು.** ಮೈಸೂರು : ಋಜುವಾತು ಪ್ರಕಾಶನ. ೧೯೯೪: ಪು. ೩೦೮

೧೨. ಈ ಕೃತಿಯನ್ನು ವಿಮರ್ಶಿಸುತ್ತಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಹೀಗೆ ಹೇಳುತ್ತಾರೆ : " ಎಂಜಿಕೆ ಅವರ ಈ ಬಗೆಯ ಚಿಂತನೆ ಪಾಶ್ಚಾತ್ಯಶಾಹೀ ಮನೋಭಾವದ ಪರಿಣಾಮವೆ ? ಪಾಶ್ಚಾತ್ಯಶಾಹಿ ನಮ್ಮಲ್ಲೊಂದು ಬಗೆಯ ಮಾನಸಿಕ ವಿಕೃತಿಯನ್ನುಂಟುಮಾಡಿದೆ. ... " ನೋಡಿ : **ಸಾಹಿತ್ಯ ಸಂಸ್ಕೃತಿ,** ಅಂಕಿತ ಪುಸ್ತಕ. ೧೯೯೮. ಪು. ೬

೧೩. ಪ್ರಭುಲಿಂಗಲೀಲೆ. ವಿಶ್ವಕನ್ನಡ ಸಮ್ಮೇಳನ ಆವೃತ್ತಿ. ೧೨ : ೧೩. ಪು. ೪

೧೪. Paradise Lost, Book IX : II, pp. 28 - 38

●

▼

ಡಾ. ಸಿ. ಎನ್. ರಾಮಚಂದ್ರನ್
೦೫. ಪ್ರೇಮಸಾಗರ ಅಪಾರ್ಟ್‌ಮೆಂಟ್ಸ್. ಮಣ್ಣಗುಡ್ಡ. ಮಂಗಳೂರು - ೫೭೫ ೦೦೩

ಕುವೆಂಪು ಕಾವ್ಯದಲ್ಲಿ ಸ್ತ್ರೀ

ಪದ್ಮಾ ಶಿವರುದ್ರಪ್ಪ

ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಕುವೆಂಪುರವರ ವ್ಯಕ್ತಿತ್ವದಲ್ಲಿ ವೈಚಾರಿಕತೆ ಹಾಗೂ ಆಧ್ಯಾತ್ಮಿಕತೆಗಳೆರಡರ ಸಮ್ಮಿಳನವನ್ನು ಕಾಣಬಹುದು. ಜಾತಿಪದ್ಧತಿ. ವರ್ಣಾಶ್ರಮ ಧರ್ಮಗಳನ್ನು ತೀವ್ರವಾಗಿ ಖಂಡಿಸಿದ ಕುವೆಂಪು. ಭಾರತದ ಸನಾತನ ಧರ್ಮದ ಶಾಶ್ವತ ಅಂಶಗಳ ಬಗೆಗೆ ಅಷ್ಟೇ ಶ್ರದ್ಧೆಯನ್ನು ಬೆಳೆಸಿಕೊಂಡ ಕವಿ. ಕುವೆಂಪುರವರ ಈ ತಾತ್ವಿಕ ಹಿನ್ನೆಲೆ ಆಳವಾದ ಅಧ್ಯಯನ ಹಾಗೂ ಮನನದಿಂದ ಮಥಿಸಿ ಪಡೆದದ್ದು. ಈ ದೇಶದ ಪರಂಪರೆಯಲ್ಲಿನ ಜೀವವಿರೋಧಿ ಸಂಗತಿಗಳನ್ನು ನಿರಾಕರಿಸಿ. ಮನುಷ್ಯನ ಜೀವನೋತ್ಕರ್ಷಕ್ಕೆ ಅಗತ್ಯವಾದ ಮೌಲ್ಯಗಳನ್ನು ಸ್ವೀಕರಿಸಿ· ಆ ಮೂಲಕ ಮಾನವನನ್ನು ವಿಶ್ವಮಾನವನನ್ನಾಗಿ ಮಾಡುವುದು ಕುವೆಂಪು ಅವರ ತಾತ್ವಿಕ ನಿಲುವಾಗಿದೆ.

ಈ ದೇಶದ ಎಲ್ಲ ಕ್ಷೇತ್ರಗಳಲ್ಲಿಯೂ ಕಂಡುಬರುವ ಪುರುಷ ಪ್ರಾಧಾನ್ಯತೆಯೇ ನಮ್ಮ ದೇಶದ ಸಾಹಿತ್ಯದಲ್ಲಿಯೂ ಕಂಡುಬರುತ್ತದೆ. ಈ ದೇಶದಲ್ಲಿ ಹೆಣ್ಣು ಸಾಮಾಜಿಕವಾಗಿ ಎಷ್ಟೇ ಶೋಷಣೆಗೆ ಒಳಗಾಗಿದ್ದರೂ. ತಾತ್ವಿಕವಾಗಿ ಅವಳನ್ನು ವೈಭವೀಕರಿಸುವ ಸಮಾನಾಂತರ ನೆಲೆಯೊಂದು ನಮ್ಮ ದೇಶದ ಇತಿಹಾಸ, ಸಾಹಿತ್ಯಗಳಲ್ಲಿ ಹಾಸುಹೊಕ್ಕಾಗಿದೆ. ನಮ್ಮ ಪರಂಪರೆಯಲ್ಲಿ ಹೆಣ್ಣನ್ನು ನೋಡುವ ದೃಷ್ಟಿ ಮಾತೃಪ್ರಧಾನವಾದದ್ದು. ಹೆಣ್ಣು ತಾಯಿಯಾಗಿ. ದೇವಿಯಾಗಿ. ಶಕ್ತಿಸ್ವರೂಪಿಣಿಯಾಗಿ ನಮ್ಮ ಪರಂಪರೆಯಲ್ಲಿ ಚಿತ್ರಿತಳಾಗಿದ್ದಾಳೆ. ಈ ದೇಶದ ಶಿಷ್ಟ ಹಾಗೂ ಜಾನಪದೀಯ ಸಾಹಿತ್ಯಗಳೆರಡರಲ್ಲಿಯೂ ಹೆಣ್ಣನ್ನು ತಾಯಿ ಎಂದೇ ಗುರುತಿಸಲಾಗಿದೆ. ಭೂಮಿತಾಯಿ - ಜನ್ಮ ಕೊಟ್ಟ ತಾಯಿ - ಹೆಣ್ಣು ಈ ಮೂರನ್ನೂ ಸಮಾನ ನೆಲೆಯಲ್ಲಿ ನೋಡಿ ಹೆಣ್ಣನ್ನು ಪೂಜನೀಯಳೆಂದು ಒಪ್ಪಲಾಗಿದೆ. ಈ ದೇಶದ ಮಹಾಕಾವ್ಯಗಳೂ ಹೆಣ್ಣನ್ನು ಪತಿವ್ರತೆ. ತ್ಯಾಗಮಯಿ, ತಪಸ್ವಿನಿ ಎಂದೇ ಚಿತ್ರಿಸಿವೆ. ಕುವೆಂಪು ಕೂಡ ಹೆಣ್ಣನ್ನು ಕುರಿತ ಭಾರತೀಯ ಪರಂಪರೆಯ ಈ ಮೌಲ್ಯಗಳನ್ನೇ ತಮ್ಮ ಕಾವ್ಯದಲ್ಲಿ ಎತ್ತಿ ಹಿಡಿದಿದ್ದಾರೆ. ಕುವೆಂಪು. ಪರಂಪರೆಯನ್ನು ಚಿಕಿತ್ಸೆಗೆ ಒಳಪಡಿಸಿ ಅದು ಇಂದಿಗೆ ಎಷ್ಟು ಪ್ರಸ್ತುತ ಎಂದು ನೋಡುತ್ತಾರೆ. ಆದರೆ ಹೆಣ್ಣಿನ ವಿಚಾರಕ್ಕೆ ಬಂದಾಗ ಮಾತ್ರ ಅವರ ದೃಷ್ಟಿಕೋನ ಬಹಳ ಮಟ್ಟಿಗೆ ಸಾಂಪ್ರದಾಯಿಕವಾದದ್ದು. ಹೆಣ್ಣಿನ ಬಗೆಗೆ ಅವರು ಪರಂಪರಾಗತ ವೈಭವೀಕೃತ ನೆಲೆಯನ್ನು ಒಪ್ಪುತ್ತಾರೆಯೇ ಹೊರತು ಆಧುನಿಕ ಸಾಮಾಜಿಕ ಸಂದರ್ಭದ ಬದಲಾದ ಮೌಲ್ಯಗಳ ಹಿನ್ನೆಲೆಯಲ್ಲಿ ಹೆಣ್ಣಿನ ಸ್ಥಾನಮಾನಗಳು ಹಿಂದಿಗಿಂತ ಭಿನ್ನವಾಗಿರಬೇಕೆನ್ನುವ ವಿಷಯದಲ್ಲಿ ಅವರು ಅಷ್ಟಾಗಿ ಉತ್ಸಾಹ ತೋರುವುದಿಲ್ಲ. ಪುರುಷನಿಗೆ ಸಮಾನವಾದ ಕ್ಷೇತ್ರಗಳಲ್ಲಿ ಅವಳು ಪಾಲುಗೊಳ್ಳಬಹುದೆನ್ನುವ ಹೊಸ ದೃಷ್ಟಿಯನ್ನು ಅವರು ಒಪ್ಪುವುದಿಲ್ಲ.

ಈ ಹಿನ್ನೆಲೆಯಲ್ಲಿ ಅವರ ' ಮನೆಮನೆಯ ತಪಸ್ವಿನಿ ' ಎಂಬ ಪದ್ಯವನ್ನು ನೋಡಬಹುದು. " ಅನ್ನಪೂರ್ಣೆ. ಅಹಂಶೂನ್ಯೆ, ಅಡುಗೆಮನೆಯೆ ಪರ್ಣಶಾಲೆ. ಒಲೆಯ ಅಗ್ನಿ ಮುಖಜ್ವಾಲೆ. ಬಿಡುವಿಲ್ಲದ ಕಟು ತಪಸ್ಯೆ, ಹಿಡಿಯದಿರಲಿ ನಿನಗಾದರೂ ಗಂಡಸರಾ ಕುತ್ತ. ಪ್ರಖ್ಯಾತಿಯ ಪಡೆಯುವೊಂದು ಪ್ರಾಪಂಚಿಕ ಪಿತ್ಥ. ಹೊಸಿಲಾಚೆಗೆ ನೀನೋತರೆ, ಹೊಸಿಲೀಚೆಗೆ ಬೆಳಕಿಲ್ಲ. ಹೆಸರಾಸೆಗೆ ನೀ ಸೋತರೆ ಉಸಿರಾಸೆಯೆ ಎಮಗಿಲ್ಲ. ಗೃಹಿಣಿ, ಗರತಿ. ದೇವಿ. ತಾಯಿ ಹಿಡಿಯದಿರಲಿ ನಿನಗವರಾ ಹೊಗಳಿಕೆಯಾ ಕೀರ್ತಿಯ ಶನಿ ಗೃಹ. ಗೃಹ. ಗೃಹ ತಪಸ್ವಿನಿ " ಎನ್ನುವ ಮಾತುಗಳಲ್ಲಿ ಹೆಣ್ಣನ್ನು ಕುರಿತ ಅವರ ನಿಲುವು ಏನೆಂಬುದು ನೇರವಾಗಿ ವ್ಯಕ್ತವಾಗಿದೆ. ಅವಳು ಗೃಹಿಣಿಯಾಗಿ. ಗರತಿಯಾಗಿ. ತಾಯಿಯಾಗಿ ಬದುಕಬೇಕು ಮತ್ತು ಸ್ತ್ರೀಯರ

ಸಾರ್ವಜನಿಕ ಜೀವನಕ್ಕೆ ಕುವೆಂಪುರವರ ವಿರೋಧವಿದೆ ಎಂಬ ಅಭಿಪ್ರಾಯವನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು.

ಕುವೆಂಪು ಪ್ರಮುಖವಾಗಿ ನಿಸರ್ಗದ ಕವಿ. ತಾನು ಕಾಡಿನ ಕವಿ ಎಂದು ಅವರು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಕನ್ನಡದ ಎಲ್ಲ ಕವಿಗಳೂ ನಿಸರ್ಗವನ್ನು ಕುರಿತು ಬರೆದಿದ್ದಾರಾದರೂ. ಕುವೆಂಪುರವರಂತೆ ಮಲೆನಾಡಿನ ರಮ್ಯತೆಯಿಂದ ಹಿಡಿದು ಭವ್ಯತೆಯ ವರೆಗಿನ ನಿಸರ್ಗಾನುಭವವನ್ನು ದಟ್ಟವಾಗಿ ಗ್ರಹಿಸಿ ಅಭಿವ್ಯಕ್ತಿಸಿದ ಬೇರೊಬ್ಬ ಕವಿ ಕನ್ನಡದಲ್ಲಿ ಇಲ್ಲ. "ಮಲೆಯ ನಾಡೆನಗೆ ತಾಯಿಮನೆ. ಕಾಡು ದೇವರ ಬೀಡು" ಎನ್ನುವಲ್ಲಿ ಕವಿಗೆ ಮಲೆನಾಡು ತಾಯಿಮನೆಯಾಗಿದೆ. 'ತೀರ್ಥಹಳ್ಳಿಯ ಕಳೆದು. ತಾಯಿ ತುಂಗೆಯ ದಾಟಿ' ಎಂದು 'ಕರಿಸಿದ್ದ' ಕವನದಲ್ಲಿ ಹೇಳುವಾಗ ಕವಿ ತುಂಗಾ ನದಿಯಲ್ಲಿ ತಾಯಿಯನ್ನು ಕಾಣುತ್ತಾರೆ. ಬೈಗು. ಬೆಳಗುಗಳು ಅವರಿಗೆ ಹೆಣ್ಣಾಗಿ ಕಂಡಿವೆ. ಕಾಮನಬಿಲ್ಲನ್ನು ಬಾನದೇವಿ ತೊಟ್ಟ ಮಣಿಹಾರ ಎನ್ನುತ್ತಾರೆ ಕುವೆಂಪು. ಕವಿ. ಸೃಷ್ಟಿಯಲ್ಲಿ ಜಗನ್ಮಾತೆಯನ್ನು ಕಂಡು ಅವಳ ಕೃಪೆಗಾಗಿ. ಸಾನ್ನಿಧ್ಯಕ್ಕಾಗಿ ಮೊರೆಯಿಡುವ ಅನೇಕ ಕವನಗಳು ಕುವೆಂಪುರವರಲ್ಲಿ ಕಂಡುಬರುತ್ತವೆ. ಕವಿ ಮತ್ತು ಜಗನ್ಮಾತೆಯ ನಡುವೆ ಅನಾದಿಯಾದ. ಅನಂತವಾದ ಆಟ ನಡೆಯುತ್ತದೆ. 'ಅಗಣಿತ ಪ್ರಳಯಗಳು ಜಾರಿದುವು ತಾಯೆ. ಮುಗಿಯದಿದು ನಮ್ಮಾಟವಿದು ಯಾರ ಮಾಯೆ' ಎಂದು ಕವಿ ಸೃಷ್ಟಿಮಾತೆಯನ್ನು ಬೆರಗಿನಿಂದ ಪ್ರಶ್ನಿಸುತ್ತಾರೆ. ಜಗನ್ಮಾತೆ ಕವಿಯ ಕಣ್ಣಿಗೆ ಒಮ್ಮೆ ಕರುಣಾಮಯಿಯಾಗಿ ಕಂಡರೆ ಮತ್ತೊಮ್ಮೆ ಭೈರವಿಯಾಗಿ. ಕಾಳಿಯಾಗಿ. ಭಯಂಕರಳಾಗಿ ಕಾಣುತ್ತಾಳೆ. ಭೂಮಿ ಆಕಾಶಗಳನ್ನೇ ಕೈಯ ತಾಳವನ್ನಾಗಿ ಮಾಡಿಕೊಂಡು ಜನನ ಮರಣಗಳ ಹೆಜ್ಜೆಯಿಟ್ಟು. ಮಿಂಚು ಗುಡುಗುಗಳನ್ನೇ ಕೈಯಲ್ಲಿ ಹಿಡಿದು. ಕಾಲವನ್ನೇ ಖಡ್ಗವನ್ನಾಗಿ ಮಾಡಿಕೊಂಡು ರುದ್ರಭದ್ರಕಾಳಿ ಬರುತ್ತಿದ್ದಾಳೆ ಎಂದು ಇಡೀ ಸೃಷ್ಟಿಯನ್ನೇ ಕಾಳಿಯ ಪ್ರತೀಕದ ಮೂಲಕ ವರ್ಣಿಸುತ್ತಾರೆ ಕವಿ.

"ಜಯ ಹೇ ಕರ್ನಾಟಕ ಮಾತೆ ಭಾರತ ಜನನಿಯ ತನುಜಾತೆ" ಎಂದು ಹಾಡಿ ಕನ್ನಡ ನಾಡು. ನುಡಿಗಳಲ್ಲಿ ತಾಯಿಯನ್ನು ಕಂಡು ಕನ್ನಡ ನಾಡಿನ ವೈಭವವನ್ನು ಚಿತ್ರಿಸುವ ಮೂಲಕ ಕನ್ನಡಿಗರ ಆತ್ಮವಿಶ್ವಾಸವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ ಕುವೆಂಪು. ೧೯೩೧ ರಷ್ಟು ಹಿಂದೆಯೇ 'ನೂರು ದೇವರನೆಲ್ಲ ನೂಕಾಚೆ ದೂರ. ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರ' ಎಂದು ಗುಡುಗಿ ಭಾರತೀಯರ ಅಜ್ಞಾನ. ಮೌಢ್ಯಗಳನ್ನು ಚುಚ್ಚಿ ನಮ್ಮನ್ನು ಜಾಗೃತಗೊಳಿಸಿದ್ದಾರೆ ಕುವೆಂಪು.

'ಕಲಾಸುಂದರಿ' ಕುವೆಂಪು ಅವರ ಒಂದು ಅದ್ಭುತ ಕವನ. ಎಲ್ಲ ಕಲೆಗಳ ಅಧಿದೇವಿಯನ್ನು ಅವರು ಕಲಾಸುಂದರಿ ಎಂದು ಪ್ರತೀಕಗೊಳಿಸಿ. ಈ ಸೃಷ್ಟಿಯ ಸಮಸ್ತ ಸೌಂದರ್ಯವೂ ಈ ಸುಂದರಿಯ ಬೇರೆ ಬೇರೆ ಆವಿಷ್ಕಾರಗಳು ಎನ್ನುತ್ತಾರೆ. "ನನ್ನನಿಂದು ಮಲೆಯಲಿ, ನಿನ್ನ ಕಲೆಯ ಬಲೆಯಲಿ ಮೋಹದಿಂದ ಮುತ್ತಿದೆ" ಓ ಇಂದ್ರಜಾಲಕಾರಿಣಿ. ಇಂದ್ರ ಧನುರ್ಧಾರಿಣಿ. ಆದಮರಸಮೂರ್ತಿ. ಅಸೀಮಸ್ಫೂರ್ತಿ. ಚಿರಂತನೆ ಎಂದು ಮುಂತಾಗಿ ಕಲಾಸುಂದರಿಯನ್ನು ವರ್ಣಿಸುತ್ತಾ ಸೊಡರು ಹಿಡಿದು ನೀನು ಮುಂದೆ ನಡೆಯಲು ನಾನು ಹಿಂದೆ ಬರುತ್ತೇನೆ. ನೀನು ಕವಿಯ ಕಣ್ಣಿಗೆ ಬೆಳಕು ತಂದೆ ಎಂದು ಅವಳಿಗೆ ಕೃತಜ್ಞತೆ ಅರ್ಪಿಸುತ್ತಾರೆ. 'ಕಲ್ಪನಾ ಸುಂದರಿ' ಎಂಬ ಕಾವ್ಯದಲ್ಲಿ ನಿನ್ನಿಂದಲೇ ಪ್ರಕೃತಿ ಚಿರನವೀನೆ. ನಿನ್ನಿಂದಲೇ ಬದುಕಿಗೆ ಸಾರ್ಥಕತೆ. ನೀನಿಲ್ಲದಿದ್ದರೆ ಬದುಕೆಲ್ಲ ಕಗ್ಗತ್ತಲೆ ಎನ್ನುವ ಕವಿ ತಮ್ಮ ಕಾವ್ಯವನ್ನು ನಲ್ಲೆಯೊಬ್ಬಳ ರೂಪಕದ ಮೂಲಕ ವರ್ಣಿಸಿ ಈ ಕಾವ್ಯದ ಹೆಣ್ಣು ಎಂದೆಂದಿಗೂ ನನ್ನವಳೆ ಎನ್ನುತ್ತಾರೆ. ಹೀಗೆ ಕವಿ ನಿಸರ್ಗದಲ್ಲಿ ಸೃಷ್ಟಿಯಲ್ಲಿ ದೇಶ ಮತ್ತು ಭಾಷೆಗಳಲ್ಲಿ ಕಾವ್ಯಕಲೆ ಮುಂತಾದ ಪ್ರತಿಭಾ ವಿಶೇಷಗಳಲ್ಲಿ ಸ್ತ್ರೀತ್ವದ ವಿವಿಧ ಮುಖಗಳನ್ನು ಕಾಣುತ್ತಾರೆ.

ಕುವೆಂಪು ಅವರ ಪ್ರಣಯ ಕವನಗಳಿಗೆ ಬಂದರೆ. ಅವರ ನಿಸರ್ಗದ ಹಾಗೂ ಸಾಮಾಜಿಕ ಕವನಗಳಿಗೆ ಹೋಲಿಸಿದರೆ ಅವರ ಪ್ರಣಯ ಕವನಗಳಲ್ಲಿ ಉತ್ಕಟತೆ ಕಡಿಮೆ ಎಂದೇ ಹೇಳಬಹುದು. ಮೊದಮೊದಲು ಸಂನ್ಯಾಸ ಜೀವನಕ್ಕೆ ಹಂಬಲಿಸಿ ಅನಂತರ ದಾಂಪತ್ಯ ಜೀವನವನ್ನು ಸ್ವೀಕರಿಸಿದ್ದರಿಂದಲೋ. ಅವರ ಮೇಲಾದ ರಾಮಕೃಷ್ಣ ಪರಮಹಂಸರ ಪ್ರಭಾವದಿಂದಲೋ ಏನೋ ಅವರ ಸಾಂಸಾರಿಕ ಕವನಗಳಲ್ಲಿ ಗಂಡು - ಹೆಣ್ಣಿನ ಸಂಬಂಧವನ್ನು ಆದರ್ಶೀಕರಿಸುವ. ಮಾನವ ಸಹಜ ಪ್ರೇಮ - ಕಾಮಗಳನ್ನು ದೈವೀಲೀಲೆಯ ವಿನ್ಯಾಸವೆಂದು ಪರಿಗಣಿಸುವ ಪ್ರವೃತ್ತಿ ಕಂಡುಬರುತ್ತದೆ. ನಾ ನಿನಗೆ ನೀನೆನಗೆ ಜೇನಾಗುವಾ ರಸದೇವಗಂಗೆಯಲಿ ಮೀನಾಗುವಾ ಎಂದು ಪತ್ನಿಗೆ ಹೇಳುತ್ತಲೇ ನಮ್ಮ ಪ್ರೀತಿಯ ಹೂವು ಹಣ್ಣು ರತಿರೂಪಿ ಭಗವತಿಗೆ ಮುಡಿಪಾಗಲಿ ಎನ್ನುತ್ತಾರೆ.

ಶಿವಶಿವಾಣಿಯರ ಆಟ ನನ್ನ ನಿನ್ನ ಬೇಟ ಎನ್ನುತ್ತಾರೆ. ಅನೇಕ ಕವನಗಳಲ್ಲಿ ತಮ್ಮನ್ನು ಶಿವಶಿವೆಯರಿಗೆ ಹೋಲಿಸಿಕೊಂಡು ಮಾನವ ಸಹಜ ಪ್ರೇಮವನ್ನು ದೈವೀ ನೆಲೆಗ ಏರಿಸುವುದನ್ನು ಕಾಣಬಹುದು. ಪ್ರಣಯವನ್ನು ಅತ್ಯಂತ ಸಹಜ ಮತ್ತು ಉತ್ಕಟವಾಗಿ ನಿರ್ವಹಿಸುವ ಕೆ. ಎಸ್. ನ ಮತ್ತು ಬೇಂದ್ರೆಯವರ ಪ್ರೇಮಗೀತೆಗಳಿಗೆ ಹೋಲಿಸಿದರೆ ಕುವೆಂಪುರವರ ಸಾಂಸಾರಿಕ ಗೀತೆಗಳಲ್ಲಿ ಆ ಬಗೆಯ ಮಾನವೀಯ ಸಂಘರ್ಷಗಳಾಗಲೀ ಸಹಜತೆಯಾಗಲೀ ಕಂಡುಬರುವುದು ತೀರ ಕಡಿಮೆ ಎಂದೇ ಹೇಳಬಹುದು. ಪತ್ನಿಯನ್ನು ಕುರಿತು ಲೋಕರಂಗದಲ್ಲಿ ಸತಿ. ನಿತ್ಯದಲ್ಲಿ ಭಗವತಿ ಎನ್ನುವಲ್ಲಿ ನೀ ದೇವತಾ ವ್ಯಕ್ತಿ ಗುರು ಕರುಣೆಯ ಕೃಪೆ. ತಾಯ ಚರಣ ಕಿರಣವೊಂದು ನನ್ನನ್ನು ರಕ್ಷಿಸಲೆಂದು ನಿನ್ನ ರೂಪದಲ್ಲಿ ಬಂದು ನನ್ನನ್ನು ಸಲಹುತ್ತಿದೆ. ಆದರೂ ಗಂಡು ಹೆಮ್ಮೆ ಒಮ್ಮೊಮ್ಮೆ ನನ್ನನ್ನು ಪ್ಯೆಮರೆಸುತ್ತದೆ. ಮನ್ನಿಸೈ ಭಗವತಿ ಎನ್ನುವಾಗ ಪತ್ನಿಗೆ ಭಗವತಿಯ ಸ್ಥಾನ ನೀಡುತ್ತಾರೆ. ಯಾವ ದೇವತೆಯೊಲಿದರೇನು ಮನೆಯ ದೇವತೆ ಮುಳಿದರೆ. ಯಾವ ದೇವತೆ ಹೊಗಳಲೇನು ಮನೆಯ ದೇವತೆ ಹಳಿದರೆ ಎಂಬಲ್ಲಿ ದಾಂಪತ್ಯ ಜೀವನದ ಸಾಫಲ್ಯದ ರಹಸ್ಯವನ್ನು ಕುವೆಂಪು ಸಹಜವಾಗಿ ಸರಳವಾಗಿ ಚಿತ್ರಿಸಿದ್ದಾರೆ. ಕೆಲವೆಡೆ ಪತ್ನಿಯನ್ನು ದೇವಿ. ಜಗನ್ಮಾತೆ. ಆದಿಶಕ್ತಿ. ಮಹಾಮಾಯೆ ಎಂದು ಸ್ತುತಿಸುತ್ತಾರೆ. ಅವರ ಸ್ವರ್ಗ ದ್ವಾರದ ಯಕ್ಷಪ್ರಶ್ನೆ ಎನ್ನುವ ಕವನವಂತೂ ತುಂಬ ಸ್ವಾರಸ್ಯಕರವಾದದ್ದು – ಅಂತರಾತ್ಮದ ನಿಜನಾಮ. ನಿನ್ನ ಹೃದಯದಾತ್ಮನೊಲವಿನ ಹೆಸರು ಹೇಳಿದರೆ ಮಾತ್ರ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದಾಗ ಯಾವ ವಿವರಣೆಗೂ ತೆರೆಯದ ಸ್ವರ್ಗದ ಬಾಗಿಲು ಹೇಮೀ ಗಂಡ ಎಂದಾಗ ತೆರೆಯಿತು ಎಂದು ಕುವೆಂಪು ಹೇಳುವುದನ್ನು ನೋಡಿದಾಗ ಗಂಡು ಎಷ್ಟೇ ಉನ್ನತ ಸ್ಥಾನಕ್ಕೇರಿದರೂ ಹೆಂಡತಿಗೆ ಒಲವಿನ ಗಂಡನಾದಾಗ ಮಾತ್ರ ಜೀವನ ಸಫಲ ಎನ್ನುವುದು. ಮತ್ತು ಕುವೆಂಪು ಹೆಂಡತಿಗೆ ಎಂಥ ಉನ್ನತ ಸ್ಥಾನ ನೀಡಿದ್ದಾರೆ ಎನ್ನುವುದು ಸೂಚಿತವಾಗುತ್ತದೆ.

ಪ್ರತಿಭೆ. ಅಧ್ಯಯನ. ಮನನ ಇವೆಲ್ಲ ಮುಪ್ಪುರಿಗೊಂಡು ಮೂಡಿದ ಕೃತಿ ಕುವೆಂಪು ಅವರ ಮಹಾಕಾವ್ಯ 'ರಾಮಾಯಣ ದರ್ಶನಂ'. ಹಿಂದೆ ವಾಲ್ಮೀಕಿ ಹೇಳಿದ ಕಥೆಯಾದರೂ ಕನ್ನಡಕ್ಕೆ ಬೇರೆ ಕಥೆಯೆಂಬಂತೆ. ಮರುಹುಟ್ಟು ಪಡೆದಂತೆ ಈ ಕಾವ್ಯ ರಚಿಸಿದ್ದೇನೆ ಎನ್ನುತ್ತಾರೆ ಕುವೆಂಪು. ಪಾಶವೀಶಕ್ತಿ. ಆತ್ಮಶಕ್ತಿ. ಸತ್ಯ -ಅಸತ್ಯ. ಧರ್ಮ - ಅಧರ್ಮಗಳ ಹೋರಾಟವೇ ರಾಮಾಯಣ ದರ್ಶನದ ವಸ್ತು. ರಾವಣನಿಂದ ಅಪಹೃತಳಾದ ಸೀತೆಯನ್ನು ಮತ್ತೆ ಪಡೆಯುವ ಹಾದಿಯಲ್ಲಿ. ಮಾನವನಾದ ರಾಮ ದೇವನಾಗುವ. ರಾವಣ ತನ್ನ ರಾವಣತ್ವವನ್ನು ಇಲ್ಲವಾಗಿಸಿಕೊಳ್ಳುವ ಕಥೆ ರಾಮಾಯಣ ದರ್ಶನದ್ದು. ಪುರಾಣ ಕೃತಿಯೊಂದನ್ನು ತನ್ನ ಕಾವ್ಯಕ್ಕೆ ವಸ್ತುವನ್ನಾಗಿ ಮಾಡಿಕೊಳ್ಳುವ ಆಧುನಿಕ ಕವಿ. ಬದಲಾದ ಮೌಲ್ಯಗಳಿಗನುಗುಣವಾಗಿ ತನ್ನ ಕಾವ್ಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾನೆ. ಕೆಲವು ವೇಳೆ ಹೊಸ

ಪಾತ್ರಗಳನ್ನೂ ಸೃಷ್ಟಿಸಿಕೊಳ್ಳುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ಕವಿಯ ಅನಾದರಕ್ಕೆ ಒಳಗಾಗಿ ನೀರವವಾಗಿ ಮೂಲೆಯಲ್ಲಿ ನಿಂತ ಊರ್ಮಿಳೆಯ ಬಗೆಗೆ ಒಂದು ಕೃತ್ತಿಕೆಯ (Sonnet) ನ್ನೇ ರಚಿಸಿ ಕುವೆಂಪು ಅವಳ ಬಗೆಗೆ ತಮಗಿರುವ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ರಾಮಾಯಣದ ಮಹಾರತ್ನವೇದಿಕೆಯ ಮೇಲೆ ಲೋಕದ ಸಂತೆಕಣ್ಣಿಗೆ ಕಾಣದಂತೆ ನಾಚಿ ಅಮೃತಶಿಲ್ಪಕೃತಿಯೊಂದು ಮೂಲೆಯಲ್ಲಿ ನಿಂತಿದೆ. ರಾಮ - ಸೀತೆ - ಲಕ್ಷ್ಮಣರಂಥ ಬೃಹನ್ಮೂರ್ತಿಗಳ ಛಾಯೆ ನಿನ್ನನ್ನು ಲೋಕದ ಕಣ್ಣಿನಿಂದ ಮರೆಸಿದೆ. ಲಕ್ಷ್ಮಣ ಚಿರತಪಸ್ವಿನೀಲೆ. ನೀರವಧ್ಯಾನವಧು ಹೇ ಊರ್ಮಿಳಾದೇವಿ ಹೆಣ್ಣಿಂಬ ತಪಸ್ಸಿಗೆ ನೀನು ನಿರುಪಮ ಪ್ರತಿಮೆ. ಸೀತೆಯ ತಪಸ್ಸಿಗಿಂತ ನಿನ್ನ ತಪಸ್ಸು ಮಿಗಿಲು ಎಂದು ಕುವೆಂಪು ಊರ್ಮಿಳೆಯನ್ನು ಪ್ರಶಂಸಿಸುತ್ತಾರೆ. ಲಕ್ಷ್ಮಣ ರಾಮನೊಡನೆ ವನವಾಸಕ್ಕೆ ಹೋಗುವ ಮೊದಲು ಊರ್ಮಿಳೆಯ ಒಪ್ಪಿಗೆ ಪಡೆದಿದ್ದ ಎನ್ನುವ ಹೊಸ ಅಂಶವೊಂದನ್ನು ಕುವೆಂಪು ರಾಮಾಯಣ ದರ್ಶನದಲ್ಲಿ ಸೇರಿಸಿದ್ದಾರೆ. ಸರಯೂ ನದೀ ತೀರದಲ್ಲಿ ಪರ್ಣಕುಟಿ ರಚಿಸಿ ೧೪ ವರ್ಷ ಕಾಲ ಚಿರತಪಸ್ವಿನಿಯಾಗಿ ನಿಂತು. ರಾಮ - ಸೀತೆ - ಲಕ್ಷ್ಮಣರಿಗೆ ಚಿತ್ತಪ್ರೇಮಂಗಳದ ರಕ್ಷೆ ಕಟ್ಟಿದಳು ಊರ್ಮಿಳೆ ಎನ್ನುತ್ತಾರೆ ಕುವೆಂಪು. ೧೪ ವರ್ಷ ಕಾಲ ವಿರಹಿಣಿಯಾಗಿ ನಿಂತು ಯಾವ ನೋವನ್ನು ಊರ್ಮಿಳೆ ಅನುಭವಿಸಿರಬಹುದು ಎನ್ನುವ ಅಂಶಕ್ಕಿಂತ ಹೆಚ್ಚಾಗಿ ಕುವೆಂಪು ಊರ್ಮಿಳೆಯಲ್ಲಿ ತಪಸ್ವಿನಿಯನ್ನೇ ಕಂಡಿದ್ದಾರೆ.

ರಾಮಾಯಣದ ಮಂಥರೆ ಕುವೆಂಪುರ ಅದ್ಭುತ ಕಲಾಸೃಷ್ಟಿ. ಮೂಲ ರಾಮಾಯಣದಲ್ಲಿ ಮಂಥರೆ ದುಷ್ಟೆ. ಹೃದಯಹೀನೆ. ಆದರೆ ಕುವೆಂಪು ಅವರ ಪಾಲಿಗೆ ಅವಳು ಮಮತೆಯ ಸುಳಿ. ಆ ಸುಳಿ ರಾಮಾಯಣದ ಪ್ರವಾಹದ ದಿಕ್ಕನ್ನೇ ಬದಲಿಸಿತು. ಮಂಥರೆಯ ನಡೆವಳಿಕೆಗೆ ಕಾರಣವೇನು ಎಂಬುದರ ಬಗೆಗೆ ಮೂಲ ಕವಿ ಮೌನಿ. ಆದರೆ ಕುವೆಂಪು ಮಂಥರೆಯ ನಡೆವಳಿಕೆಗೆ ಮನೋವೈಜ್ಞಾನಿಕ ಕಾರಣಗಳನ್ನು ಕೊಡುತ್ತಾರೆ. ಅವಳೊಬ್ಬ ಅನಾಥೆ. ಕುರೂಪಿ. ತನ್ನ ಕುರೂಪದಿಂದಾಗಿ ಸಮಾಜದ ಅನಾದರ. ತಿರಸ್ಕಾರಗಳಿಗೆ ಗುರಿಯಾದ ಮಂಥರೆಯ ಮನಸ್ಸು ಜನರ ನಡತೆಗೆ ಕನ್ನಡಿ ಹಿಡಿಯುವಂತೆ ವಿಕೃತಗೊಂಡಿತು. ವ್ಯಕ್ತಿ ಸಮಾಜಘಾತಕನಾಗಲು ಸಮಾಜದ ಹೃದಯಹೀನತೆ ಹಾಗೂ ತಿರಸ್ಕಾರಗಳೇ ಕಾರಣ ಎನ್ನುತ್ತಾರೆ ಕುವೆಂಪು. ಜನರ ತಿರಸ್ಕಾರಕ್ಕೆ ಗುರಿಯಾಗಿ ಘಾಸಿಗೊಂಡ ಮಂಥರೆಯ ಹೃದಯದ ಪ್ರೇಮವೆಲ್ಲ ಕೈಕೆ. ಭರತರಲ್ಲಿ ಮಡುಗೊಂಡಿತು. ಭರತನಿಗೆ ರಾಜ್ಯ ದೊರಕಿಸಿಕೊಡಲು ಮಂಥರೆ ಎಲ್ಲ ಕುಟಿಲೋಪಾಯಗಳನ್ನು ಕೈಗೊಳ್ಳುತ್ತಾಳೆ. ನಂತರ ಭರತ ಹಿಂದಿರುಗಿ ಬಂದಮೇಲೆ ಅವನಿಂದ ತಿರಸ್ಕಾರಕ್ಕೆ ಗುರಿಯಾಗಿ ರಾಮನನ್ನು ಕರೆತರಲು ತಾನೇ ಕಾಡಿಗೆ ಹೋಗಿ ಕಾಳ್ಗಿಚ್ಚಿಗೆ ಸಿಲುಕಿ ಭಸ್ಮವಾಗುತ್ತಾಳೆ. ರಾಮಾಯಣದ ಕೊನೆಯ ಭಾಗದಲ್ಲಿ ನಿಗದಿತ ಅವಧಿಯಲ್ಲಿ ರಾಮ ಬಾರದಿದ್ದಾಗ ಭರತ ಅಗ್ನಿಪ್ರವೇಶ ಮಾಡಲು ಹೋದಾಗ ಯಜ್ಞಕುಂಡದಿಂದ ಸುಂದರ ಸೂಕ್ಷ್ಮತೇಜದ ಸುರಾಂಗನಾ ಮೂರ್ತಿಯಾಗಿ ಮಂಥರೆ ಕಾಣಿಸಿಕೊಳ್ಳುತ್ತಾಳೆ. ಮೂಲದಲ್ಲಿ ದುಷ್ಟೆಯಾಗಿ. ಗೂನಿಯಾಗಿ. ಹೃದಯಹೀನೆಯಾಗಿ ಕಾಣಿಸಿಕೊಳ್ಳುವ ಮಂಥರೆ ರಾಮಾಯಣ ದರ್ಶನದಲ್ಲಿ ರಾಮಾಯಣದ ಕಥೆಗೆ ಕಾರಣಳಾಗಿ. ರಾಮಾವತಾರದ ವಿಕಾಸಕ್ಕೆ. ಆ ಮೂಲಕ ಅನೇಕ ಜೀವಿಗಳ ಉದ್ಧಾರಕ್ಕೆ ಸಾಧನವಾಗಿ ಪುಣ್ಯಲಕ್ಷ್ಮಿಯಾಗಿ ಕಂಡಿದ್ದಾಳೆ ಕುವೆಂಪುರವರಿಗೆ.

ಸೀತೆಯ ಪಾತ್ರಚಿತ್ರಣದಲ್ಲಿ ಕುವೆಂಪುರವರು ಮೂಲದಿಂದ ಹೆಚ್ಚೇನೂ ಬದಲಾವಣೆ ಮಾಡಿಕೊಂಡಿಲ್ಲ. ಪದಿಬದೆಯರಧಿದೇವಿ ಎಂದು ಕವಿ ಅವಳಿಗೆ ರಾವಣನಿಂದಲೇ ಬಿರುದು ಕೊಡಿಸುತ್ತಾರೆ. ಅವಳ ದಿಟ್ಟತನ ವಿಚಾರಪಂಕ್ತಿಕೆಗಳನ್ನು ಚಿತ್ರಿಸುವ ಒಂದು ಸನ್ನಿವೇಶವನ್ನು ಗಮನಿಸಬಹುದು. ಅದು ಕುವೆಂಪು ಅವರ ಸ್ವಂತದ ಸೇರ್ಪಡೆ. ವನವಾಸದ ಸಂದರ್ಭದಲ್ಲಿ ರಾಮ ರಾಕ್ಷಸ ಸಂಹಾರದಲ್ಲಿ ತೊಡಗಿದ್ದಾಗ ಸೀತೆ ರಾಮನನ್ನು ಕುರಿತು. ಒಬ್ಬ ರಾಕ್ಷಸ

ಅನ್ಯಾಯಿಯಾದರೆ ಎಲ್ಲ ರಾಕ್ಷಸರನ್ನೂ ಸಂಹರಿಸುವುದು ಎಷ್ಟರ ಮಟ್ಟಿಗೆ ಸರಿ ? ಕ್ರೌರ್ಯವೆನ್ನುವುದು ಕ್ಷಾತ್ರಕ್ಕೇನು ಕಿರೀಟವೇ ? ದಿನದಿನಕ್ಕೆ ರಾಕ್ಷಸರ ನಾಡನ್ನು ಆಕ್ರಮಿಸುತ್ತಾ ಒತ್ತರಿಸುವವರು ಆರ್ಯರಾದರೂ ಆಕ್ರಮಣಕಾರರಲ್ಲವೇ ? ಎಂದು ಪ್ರಶ್ನಿಸುತ್ತಾಳೆ. ಇದು ಅರಣ್ಯನಾಶ ಮಾಡಿ ಆದಿವಾಸಿಗಳಿಗೆ ನೆಲೆಯಿಲ್ಲದಂತೆ ಮಾಡುತ್ತಿರುವ ಇಂದಿನ ನಾಗರಿಕತೆಯ ಮೇಲಿನ ಟೀಕೆಯೂ ಹೌದು. ಇಲ್ಲಿ ಹೆಣ್ಣಿನ ವಿಚಾರವಂತಿಕೆಯನ್ನು. ದಿಟ್ಟತನವನ್ನು ಮೆಚ್ಚುವ ಕುವೆಂಪುರವರ ದೃಷ್ಟಿಕೋನವನ್ನು ನೋಡಬಹುದು. ಕುವೆಂಪು ಅವರ ಮಂಡೋದರಿ " ನನ್ನವೋಲತಿ ದುಃಖಿ ಲಂಕೆಯೊಳಗಂತಿರ್ಕೆ. ಸೃಷ್ಟಿಯೊಳಗಿಲ್ಲ " ಎನ್ನುತ್ತಾಳೆ. ಜಗತ್ತಿನ ಎಲ್ಲ ಸ್ತ್ರೀಯರೂ ಒಂದಲ್ಲ ಒಂದು ಸಾರಿ ಈ ಮಾತನ್ನು ತಮಗೆ ತಾವೇ ಹೇಳಿಕೊಂಡಿರಬಹುದು. ಹೆಣ್ಣಿನ ಈ ನೋವನ್ನು ಕುವೆಂಪು ಅರ್ಥ ಮಾಡಿಕೊಂಡಿದ್ದಾರೆ. ರಾಮಾಯಣ ದರ್ಶನದಲ್ಲಿ ಸೀತೆ. ಮಂಡೋದರಿಯರಿಬ್ಬರೂ ರಾವಣನ ಆತ್ಮೋದ್ಧಾರಕ್ಕಾಗಿ ತಪಸ್ಸನ್ನು ಕೈಗೊಂಡರು ಎಂಬಂತೆ ಚಿತ್ರಿಸುತ್ತಾರೆ. ಕುವೆಂಪು ಅವರ ರಾಮಾಯಣ ದರ್ಶನದ ಸ್ತ್ರೀ - ಪಾತ್ರಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ತಪಸ್ವಿನಿಯರೇ. ಅವರ ' ಚಿತ್ರಾಂಗದಾ ' ಕಾವ್ಯದ ಚಿತ್ರಾಂಗದೆಯೂ ತಪಸ್ವಿನಿಯೇ.

ರಾಮಾಯಣ ದರ್ಶನದಲ್ಲಿ ನಮ್ಮ ಗಮನ ಸೆಳೆಯುವ ಮತ್ತೊಂದು ಪಾತ್ರವೆಂದರೆ ವಿಭೀಷಣನ ಮಗಳಾದ ಹದಿಹರೆಯದ ಸುಂದರ. ಸುಸಂಸ್ಕೃತ ಕನ್ಯೆ ಅನಲೆಯದು. ಈ ಪಾತ್ರ ಮೂಲ ರಾಮಾಯಣದಲ್ಲಿಲ್ಲದ ಕುವೆಂಪುರವರ ಸ್ವಂತ ಸೃಷ್ಟಿ. ಅನಲೆಯ ಸುಸಂಸ್ಕೃತ ನಡೆವಳಿಕೆಯನ್ನು ಅದೃಶ್ಯನಾಗಿ ನೋಡಿದ ಆಂಜನೇಯ ಇಂಥವರಿಂದಲೇ ಲಂಕಾ ಕನಕಲಕ್ಷ್ಮಿ ಕ್ಷೇಮವಾಗಿದ್ದಾಳೆ ಎಂದುಕೊಳ್ಳುತ್ತಾನೆ. ರಾವಣನಂಥ ಲೋಕಭಯಂಕರನೂ ಕೂಡ ಅನಲೆಯನ್ನು ಕುರಿತು ' ಇವಳೆನ್ನ ಕಾಪಾಡುವ ದೇವಿ ' ಎನ್ನುತ್ತಾನೆ. ದೇಶಭ್ರಷ್ಟ ವಿಭೀಷಣನೊಡನೆ ರಾವಣನನ್ನು ಪ್ರತಿಭಟಿಸಿ ತಾನೂ ಹೊರಟುನಿಂತ ಅನಲೆಯನ್ನು ರಾವಣ. ಹೋಗಬೇಡ ಮಗಳೆ. ಎಂದು ಬೇಡಿಕೊಳ್ಳುತ್ತಾನೆ. ಹಠಮಾರಿ ರಾವಣನ ಹೃದಯದಲ್ಲಿನ ಪ್ರೀತಿ. ಮಾರ್ದವತೆ. ವಾತ್ಸಲ್ಯ ಇವುಗಳ ಪ್ರತಿರೂಪವೇನೋ ಎಂಬಂತೆ ಅನಲೆಯ ಪಾತ್ರ ಚಿತ್ರಿತವಾಗಿದೆ. ಯುದ್ಧದ ಸಂದರ್ಭದಲ್ಲಿ. ಗಂಡಸರು ಹೀಗೆ ಮೈಮರೆತು ಕ್ರೋಧಮೂರ್ಚ್ಛಿತರಾಗಿ ಸರ್ವನಾಶಕ್ಕೆ ಮಲೆತು ಹಣಾಹಣಿಯಾಗಿ ನಿಂತರೆ ಹೆಣ್ಣು ತಟಸ್ಥಳಾಗಿರಬೇಕೇ ? ಎಂದು ಪ್ರಶ್ನಿಸುತ್ತಾಳೆ ಅನಲೆ. ಅನಲೆಯ ಪಾತ್ರದ ಸಾರ್ಥಕತೆಯನ್ನು ನಾವು ಕಾಣುವುದು ಸೀತೆಯ ಅಗ್ನಿಪ್ರವೇಶದ ಸಂದರ್ಭದಲ್ಲಿ ಶುಭ್ರಸ್ನಾತೆಯಾಗಿ. ಅಲಂಕೃತೆಯಾಗಿ ತನ್ನೆಡೆಗೆ ಬಂದ ಸೀತಾಮಾತೆಯನ್ನು ಕುರಿತು ರಾಮ. " ನನ್ನ ಪ್ರತಿಜ್ಞೆ ನೆರವೇರಿತು. ಕುಲತೇಜವನ್ನು ನನ್ನ ಪೌರುಷವನ್ನು ಉಳಿಸಿಕೊಳ್ಳಲು ರಾವಣನನ್ನು ಕೊಂದೆ. ನಿನ್ನನ್ನು ಪಡೆಯಲೋಸುಗ ಅಲ್ಲ. ನೀನು ಸ್ವೈರದ್ರೋಹಿ. ರಾವಣ ಸಂಯಮಹೀನ. ನನ್ನ ಮಾತಿನ ಅರ್ಥವನ್ನು ತಿಳಿದುಕೊಳ್ಳುವುದಾದರೆ ತಿಳಿದುಕೋ. ಇಲ್ಲವಾದರೆ ನೀನೆಲ್ಲಿಗಾದರೂ ತೊಲಗು ಮೂರ್ಖೆ. ನನ್ನ ಕಣ್ಮುಂದೆ ನಿಲ್ಲದಿರು " ಎನ್ನುತ್ತಾನೆ. ರಾಮನ ಈ ಮಾತುಗಳನ್ನು ಕೇಳಿ. ಸೀತೆಯ ನೋವು. ದುಃಖ. ಪರಿಶುದ್ಧತೆಗಳ ಅರಿವಿದ್ದ ಹದಿಹರೆಯದ ಅನಲೆ ಕೋಪದಿಂದ ಕುದಿಯುತ್ತಾಳೆ. ಪತಿಯಿಂದ ತಿರಸ್ಕೃತಳಾದ ನನಗೆ ಅಗ್ನಿಯೇ ಶರಣು ಎಂದು ಸೀತೆ ಅಗ್ನಿಪ್ರವೇಶ ಮಾಡುತ್ತಾಳೆ. ಅದುವರೆಗೆ ನಿಷ್ಠುರ ಶಿಲಾಮೂರ್ತಿಯಂತೆ ಎಲ್ಲವನ್ನೂ ನೋಡುತ್ತಿದ್ದ ರಾಮ ನೋಡುತ್ತಿದ್ದವರು ಓ ಪ್ರೋ ಪ್ರೋ ಎಂಬಷ್ಟರಲ್ಲಿ ತಾನೂ ಅಗ್ನಿಪ್ರವೇಶ ಮಾಡುತ್ತಾನೆ. ಜಾನಕಿಯ ಕೈ ಹಿಡಿದು ಕಿಚ್ಚಿನುರಿಯಿಂದ ಅವಳನ್ನು ಪಾರು ಮಾಡುವಂತೆ ಅಗ್ನಿಯಿಂದ ಹೊರಬರುತ್ತಾನೆ. ಅನಲೆ ಕೂಡಲೇ ಓಡಿಬಂದು ಸಂತೋಷ ಮೂರ್ಚ್ಛೆಕೆಯ ಹಾಗೆ ರಾಮನ ಪಾದಗಳ ಮೇಲೆ ಬೀಳುತ್ತಾಳೆ. " ನಿನ್ನನ್ನು ನಿಂದಿಸಿದ ನನ್ನನ್ನು ಮನ್ನಿಸು. ಸ್ವಾಮಿ. ಸೀತಾಮಾತೆಯನ್ನು

ಅಗ್ನಿಪ್ರವೇಶ ಮಾಡಿಸಿದ ನೀನೇನು ಪಾಪದೋಷಕ್ಕೆ ದೂರತೆ ? ನಿನ್ನನ್ನು ಪರೀಕ್ಷಿಸುವವರಾರು ? ಎಂದು ಸಂದೇಹಗೊಂಡೆ. ಸೀತೆಯನ್ನು ಪರೀಕ್ಷಿಸುವ ನೆಪದಲ್ಲಿ ನೀನೂ ಪರೀಕ್ಷಿತನಾಗಿ ಲೋಕಮಾನ್ಯನಾದೆ" ಎಂದು ಹೊಗಳುತ್ತಾಳೆ. ಸೀತೆಯ ಅಗ್ನಿಪ್ರವೇಶ ಸಂದರ್ಭ ಮೂಲ ರಾಮಾಯಣದಲ್ಲಿ ವಿವಾದಗ್ರಸ್ತವಾಗಿದೆ. ಈ ಸಂದರ್ಭದಲ್ಲಿ ರಾಮನ ನಡವಳಿಕೆ ಪ್ರಶ್ನಾರ್ಹವಾಗಿರುವುದು ಮಾತ್ರವಲ್ಲ. ಪುರುಷಪ್ರಧಾನ ಸಮಾಜದಲ್ಲಿ ಗಂಡು ಹೆಣ್ಣನ್ನು ನಡೆಯಿಸಿಕೊಳ್ಳುವ ಅಮಾನವೀಯವಾದ ನಿಲುವಿಗೆ ಸಾಕ್ಷಿಯಾಗಿದೆ. ಕುವೆಂಪುರವರು ಈ ಸಂದರ್ಭದಲ್ಲಿ ಸೀತೆಯೊಡನೆ ರಾಮನೂ ಅಗ್ನಿಪ್ರವೇಶ ಮಾಡಿದ ಎಂಬ ಮಹತ್ವದ ಬದಲಾವಣೆಯೊಂದನ್ನು ಮಾಡಿಕೊಳ್ಳುವ ಮೂಲಕ ಈ ಸನ್ನಿವೇಶದ ಸತ್ವವನ್ನೇ ಮಾರ್ಪಾಡು ಮಾಡಿದ್ದಾರೆ. ಪರೀಕ್ಷೆಗೆ ಒಳಗಾಗುವ ಸಂದರ್ಭ ಬಂದಾಗ ಹೆಣ್ಣಿನ ಹಾಗೆಯೇ ಗಂಡೂ ಆ ಪರೀಕ್ಷೆಗೆ ಒಳಗಾಗತಕ್ಕದ್ದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಉಚಿತವಾದದ್ದು. ಗಂಡಾದವನಿಗೆ ಹೆಣ್ಣಿನ ಶೀಲವನ್ನು ಶಂಕಿಸುವ ಅಧಿಕಾರವಿರುವುದಾದರೆ. ಹೆಣ್ಣಿಗೂ ಗಂಡನ್ನು ಶಂಕಿಸುವ ಅಧಿಕಾರವಿರಬೇಕು. ಹಾಗಿದ್ದಾಗ ಮಾತ್ರ ಅದು ನಿಜವಾದ ದಾಂಪತ್ಯ. ಸಮಾನತೆ ಮತ್ತು ಪ್ರೇಮವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ. ಅಗ್ನಿಪ್ರವೇಶದ ಸಂದರ್ಭದಲ್ಲಿ. ಕುವೆಂಪು ೨೦ ನೇ ಶತಮಾನದ ಬದಲಾದ ಮೌಲ್ಯಗಳಿಗನುಗುಣವಾಗಿ ರಾಮಾಯಣದ ಪುನಃಸೃಷ್ಟಿ ಮಾಡಿದ್ದಾರೆ ಎನಿಸುತ್ತದೆ. ಆಧುನಿಕ ಸ್ತ್ರೀಯ ಪ್ರತಿಭಟನೆಯ ಧ್ವನಿಗೆ ಕುವೆಂಪು ಇಲ್ಲಿ ಹದಿಹರೆಯದ ಅನಲೆಯ ಪಾತ್ರದ ಮೂಲಕ ಅಭಿವ್ಯಕ್ತಿ ಕೊಟ್ಟಿದ್ದಾರೆ. ಸೌಂದರ್ಯ. ವಿವೇಚನೆ. ಸಮಯಪ್ರಜ್ಞೆ, ದಿಟ್ಟತನ. ಮಾನವೀಯತೆ. ಪ್ರತಿಭಟನೆ – ಈ ಗುಣಗಳ ಅನಲೆ. ಹದಿಹರೆಯದ ಹೆಣ್ಣಿನ ಬಗೆಗೆ ಕುವೆಂಪುರವರಿಗಿದ್ದ ಕಲ್ಪನೆಯ ಸಾಕಾರ ಮೂರ್ತಿಯೇನೋ ಎನಿಸುತ್ತದೆ.

ಒಟ್ಟಿನಲ್ಲಿ. ಕುವೆಂಪು ಅವರ ಕಾವ್ಯದಲ್ಲಿ ಕಂಡುಬರುವ ಹೆಣ್ಣಿನ ಚಿತ್ರ ಪರಂಪರಾಗತವಾದದ್ದು. ಸನಾತನ ಭಾರತೀಯ ಮೌಲ್ಯಗಳಿಂದ ಪ್ರೇರಿತವಾದದ್ದು. ಆದರ್ಶಪರವಾದದ್ದು. ಹೆಣ್ಣಿನ ಸಾರ್ವಜನಿಕ ಜೀವನಕ್ಕೆ ಕುವೆಂಪು ಅವರ ಸ್ಪಷ್ಟ ವಿರೋಧವಿದೆ. ಕುವೆಂಪುರವರ ಕಾವ್ಯದಲ್ಲಿ. ಹೆಣ್ಣು ನಿಸರ್ಗದಲ್ಲಿ ತಾಯಿಯಾಗಿ. ಕಾವ್ಯ ಕಲ್ಪನೆಗಳಲ್ಲಿ ಸೌಂದರ್ಯದ ಪ್ರತೀಕವಾಗಿ. ಪತ್ನಿಯಲ್ಲಿ ಶಿವೆಯಾಗಿ. ಅಧ್ಯಾತ್ಮದಲ್ಲಿ ಜಗನ್ಮಾತೆಯಾಗಿ. ರಾಮಾಯಣದರ್ಶನಂ ನಲ್ಲಿ ತಪಸ್ವಿನಿಯಾಗಿ ಕಾಣಿಸಿಕೊಂಡಿದ್ದಾಳೆ. ಕುವೆಂಪುರವರ ಅತ್ಯಂತ ಮಾನವೀಯವೂ. ವಾಸ್ತವವೂ ಆದ ಸ್ತ್ರೀಸ್ವಭಾವ ಚಿತ್ರಣವನ್ನು ಕಾಣಬೇಕಾದರೆ. ಕುವೆಂಪುರವರ ಕಥಾಸಾಹಿತ್ಯಕ್ಕೇ ಹೋಗಬೇಕು.

●　　▼

ಪದ್ಮಾ ಶಿವರುದ್ರಪ್ಪ
೬೯೯, ಕಾರ್ತೀಕ, ೧೮ ನೇ ಮುಖ್ಯ ರಸ್ತೆ
ಪದ್ಮನಾಭನಗರ, ಬೆಂಗಳೂರು - ೫೬೦ ೦೭೦

ಗರುಡ ಸದಾಶಿವರಾಯರ ' ಶ್ರೀರಾಮಪಾದುಕಾಪಟ್ಟಾಭಿಷೇಕ '

ಬಸವರಾಜ ಜಗಜಂಪಿ ▲ ಕಂಪನಿ ನಾಟಕ

ಗರುಡ ಸದಾಶಿವರಾಯರು ಕನ್ನಡ ವೃತ್ತಿರಂಗಭೂಮಿ ಕಂಡ ಅಪರೂಪದ ನಾಟಕಕಾರರು. ನಟ, ನಾಟ್ಯಾಚಾರ್ಯ, ಆಡಳಿತಗಾರ ಹಾಗೂ ರಂಗಸುಧಾರಕರಾಗಿದ್ದ ಅವರದು ವೈವಿಧ್ಯಮಯ ಪ್ರಯೋಗಶೀಲ ಪ್ರತಿಭೆ. ನಾಟಕ ರಚನೆ ಹಾಗೂ ಅಭಿನಯಗಳ ದೃಷ್ಟಿಯಿಂದ ಅವರ ಸಾಧನೆ ಉಲ್ಲೇಖನೀಯ. ಸಾಹಿತ್ಯಕ ಮೌಲ್ಯಗಳೊಂದಿಗೆ ರಂಗದ ಬೆಳಕಿಗೆ ಒಡ್ಡಿಕೊಂಡ ಗರುಡರ ನಾಟಕಗಳು ವಿಶಿಷ್ಟವೆನಿಸಿವೆ. ಅಭಿನಯಕ್ಕೆ ಆದ್ಯತೆ, ಅದಕ್ಕೆ ಅನುವು ಮಾಡಿಕೊಡುವಷ್ಟು ರಂಗಸಜ್ಜಿಕೆ, ಪರೋಕ್ಷವಾಗಿಯಾದರೂ ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿ -- ಹೀಗೆ ಈ ಮೂರು ಗುಣಗಳ ಸಮನ್ವಯವನ್ನು ಅವರ ನಾಟಕಗಳಲ್ಲಿ ಕಾಣುತ್ತೇವೆ. ಸಂಗೀತ ಹಾಗೂ ಹಾಸ್ಯಗಳಿಗೆ ಗೌಣವಾದ ಸ್ಥಾನ. ಹೃದ್ಯವಾದ ಗದ್ಯ ಭಾಷೆಯಲ್ಲಿ ಮೂಡಿ ಬಂದ ಅವರ ನಾಟಕಗಳಲ್ಲಿ ವ್ಯಾವಹಾರಿಕತೆ ಇದೆ.

ಗರುಡರು ರಂಗಭೂಮಿಯ ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ರಂಗಭೂಮಿಗಾಗಿಯೇ ನಾಟಕಗಳನ್ನು ರಚಿಸಿ, ತಾವೇ ನಿರ್ದೇಶಿಸಿ, ಆಡಿಸಿ, ಪಾತ್ರ ವಹಿಸಿ ವೃತ್ತಿರಂಗದಲ್ಲಿ ಕ್ರಾಂತಿ ಮಾಡಿದ್ದು ಚಾರಿತ್ರಿಕ ಸತ್ಯ. ಪಾದುಕಾಪಟ್ಟಾಭಿಷೇಕ, ಕಂಸವಧ, ಚವತಿಯ ಚಂದ್ರ, ಮಯಾಬಜಾರ, ಎಚ್ಚಮನಾಯಕ, ಪಶ್ಚಾತ್ತಾಪ, ಕಬೀರ, ಶರಣಬಸವ, ಕ್ರಾಂತಿ ಮೊದಲಾದ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಗರುಡರ ಸೃಜನಶೀಲತೆಗೆ ಉಜ್ವಲ ನಿದರ್ಶನಗಳಾಗಿವೆ.

ಪುರಾಣವಸ್ತುವನ್ನಾಶ್ರಯಿಸಿ ನಾಟಕಗಳನ್ನು ರಚಿಸಿದ ಶ್ರೇಷ್ಠರಲ್ಲಿ ಸದಾಶಿವರಾಯರು ಒಬ್ಬರು. ಪಾರಂಪರಿಕ ಪೌರಾಣಿಕ ಕಥೆಯನ್ನು ಹೊಂದಿದ್ದರೂ ಸಮಕಾಲೀನ ರಾಜಕೀಯವನ್ನು ಸಾಂಕೇತಿಕವಾಗಿ ಸಮೀಕರಿಸಿ ಹೇಳಿದ್ದು ಅವರ ವೈಶಿಷ್ಟ್ಯ. ಆದರೆ ಅದು ಸಾಂಕೇತಿಕವಾದಷ್ಟೇ ಧ್ವನಿಪೂರ್ಣ.

'ಶ್ರೀರಾಮಪಾದುಕಾಪಟ್ಟಾಭಿಷೇಕ' ಕನ್ನಡದ ವಿಶಿಷ್ಟ ಪೌರಾಣಿಕ ನಾಟಕ. ಕಾಳಿದಾಸನ 'ರಘುವಂಶ'ವನ್ನು ಅನುಸರಿಸಿ ಮೂಡಿಬಂದ ಈ ನಾಟಕ ಪಡೆದ ಜನಪ್ರಿಯತೆ ಅನನ್ಯ. ಭಾರತೀಯ ಪೌರಾಣಿಕ ಪ್ರಪಂಚದಲ್ಲಿ ಪ್ರಸಿದ್ಧವಾದ ರಾಮಾಯಣದ ಕಥೆ, ಗರುಡರ ಕಲಾಕುಂಚದಿಂದ ನವಚೈತನ್ಯ ಪಡೆದಿದೆ; ಆಕರ್ಷಕ ಕಲಾಕೃತಿಯಾಗಿ ಕಂಗೊಳಿಸಿದೆ.

ಶ್ರೀರಾಮಾಯಣದ ಪ್ರಧಾನ ಭಾಗವನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಈ ನಾಟಕ ಅಚ್ಚುಕಟ್ಟಾಗಿದೆ. ಕಲಾದೃಷ್ಟಿಯಿಂದ ಗರುಡರ ಕೃತಿಗಳಲ್ಲಿ ಶ್ರೇಷ್ಠವೆನಿಸಿದೆ.

ಶ್ರೀರಾಮಪಾದುಕಾಪಟ್ಟಾಭಿಷೇಕ ಸಮಾರಂಭ ಇನ್ನೇನು ನಡೆಯಬೇಕು. ಅಷ್ಟರಲ್ಲಿ ಮಂಥರೆಯ ಸಲಹೆಯಂತೆ ಕೋಪಗೃಹವನ್ನು ಪ್ರವೇಶಿಸಿದ ಕೈಕೇಯಿ, ಹಿಂದೆ ತನಗೆ ಕೊಟ್ಟ ವಚನವನ್ನು ಪೂರೈಸುವಂತೆ ದಶರಥನನ್ನು ಕೇಳುತ್ತಾಳೆ. ರಾಮನಿಗೆ ಹದಿನಾಲ್ಕು ವರುಷಗಳ ವನವಾಸವನ್ನು ಭರತನಿಗೆ ರಾಜ್ಯವನ್ನು ಕೊಡುವಂತೆ ಬೇಡುತ್ತಾಳೆ. ದಶರಥ ತತ್ತರಿಸಿ ಹೋಗುತ್ತಾನೆ. ಮಾತಿನ ತೊಡಕಿನಲ್ಲಿ ಸಿಕ್ಕಿಕೊಂಡ ದಶರಥ, ಕೈಕೇಯಿಯನ್ನು ಸಂತೈಸಲು ವಿಫಲ ಯತ್ನ ನಡೆಸುತ್ತಾನೆ. ದುರಾಗ್ರಹವನ್ನು ಬಿಡುವಂತೆ ಅಂಗಲಾಚುತ್ತಾನೆ. ಆದರೆ ಕೈಕೇಯಿಯ ನಿರ್ಧಾರದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಕರಾಳವಾದ ಆ ರಾತ್ರಿಯೊಂದನ್ನು ಗೋಳಾಡುತ್ತಲೇ ಕಳೆಯುತ್ತಾನೆ ದಶರಥ. ಎಚ್ಚೆತ್ತಾಗ ರಾಮನು ವನವಾಸಕ್ಕೆ ಹೊರಟುಹೋದ ಸುದ್ದಿ ಬರಸಿಡಿಲಿನಂತೆ ಎರಗುತ್ತದೆ. ಕರುಳು ಕತ್ತರಿಸುವಂತೆ 'ರಾಮಾ, ರಾಮಭದ್ರಾ,

ರಾಮಚಂದ್ರಾ ' ಎಂದು ಆಕ್ರಂದನಗೈದ ದಶರಥ ಶಾಶ್ವತವಾಗಿ ಮೂರ್ಛೆ ಹೊಂದುತ್ತಾನೆ. ಭರತನಿಗೆ ರಾಜ್ಯವಾಗಬೇಕೆಂದು ಬಯಸಿದ ಕೈಕೇಯಿ ವೈಧವ್ಯವನ್ನು ಪಡೆಯುತ್ತಾಳೆ. ಶ್ರೀರಾಮಪಟ್ಟಾಭಿಷೇಕದ ಆನಂದವನ್ನು ಅನುಭವಿಸುವ ಸಿದ್ಧತೆಯಲ್ಲಿದ್ದ ಅಂತಃಪುರವೆಲ್ಲ ಶೋಕಸಾಗರದಲ್ಲಿ ಮುಳುಗಿಹೋಗುತ್ತದೆ.

ರಾಮರಾಜವಿಯೋಗದ ಪರಿಣಾಮ ಭೀಕರವಾಗುತ್ತದೆ. ಭರತನ ವಶವಾಗಬೇಕಿದ್ದ ಸಾಕೇತನಗರಿ ಅಮಂಗಲ ಸ್ಮಶಾನ ಸಾಮ್ರಾಜ್ಯವಾಗುತ್ತದೆ. ರಾಮನಿಲ್ಲದ ಭೂಮಿಯಲ್ಲಿ ನಿಲ್ಲಲೊಲ್ಲದ ಭರತ. ವನವಾಸಿಯಾಗಲು ಸಿದ್ಧನಾಗುತ್ತಾನೆ. ಪ್ರಜೆಗಳೂ ಸಾಕೇತವನ್ನು ತೊರೆದು ಹೊರಡುತ್ತಾರೆ. ಸರ್ವನಾಶವಾದ ಮೇಲೆ ಕೈಕೇಯಿಗೂ ಬುದ್ಧಿ ಬರುತ್ತದೆ.

ವನವಾಸಿಯಾಗಲು ಬಂದ ಭರತನಿಗೆ ಶ್ರೀರಾಮನು. ತನ್ನನ್ನು ಪಿತೃವಾಕ್ಯ ಪರಿಪಾಲನೆಗೆ ಬಿಟ್ಟು. ಸಾಕೇತನಗರಿಗೆ ತೆರಳುವಂತೆಯೂ ವನವಾಸದ ಅವಧಿ ಮುಗಿಯುತ್ತಲೇ ತಾನು ಮರಳಿ ಬರುವುದಾಗಿಯೂ ಹೇಳಿ. ಸಂತೈಸಿ ಕಳಿಸುತ್ತಾನೆ.

ಡಂಗುರದವನಿಂದ ರಾಮನ ಸಂದೇಶವನ್ನು ಸಾರಿ ಹೇಳಿ. ಶ್ರೀರಾಮಪಾದುಕಾ ಪಟ್ಟಾಭಿಷೇಕವನ್ನು ನೆರವೇರಿಸಿ. ಸಾಕೇತ ಸಾಮ್ರಾಜ್ಯದ ಘನತೆ ಗೌರವಗಳನ್ನು ಕಾಪಾಡುವಂತೆ ಮಂತ್ರಿ ಸುಮಂತನು ಪ್ರಜೆಗಳನ್ನು ಕೇಳಿಕೊಳ್ಳುವುದರೊಂದಿಗೆ ನಾಟಕ ಮುಕ್ತಾಯಕ್ಕೆ ಬರುತ್ತದೆ.

೧೯೨೨ ರಲ್ಲಿ ಗರುಡ ಸದಾಶಿವರಾಯರು ತಮ್ಮ ಮಂಡಳಿಯೊಡನೆ ಕುಂದಾಪುರದಲ್ಲಿ ಬೀಡುಬಿಟ್ಟ ಸಂದರ್ಭ. ದಕ್ಷಿಣ ಕನ್ನಡ ಜನತೆಯ ಉದಾರ ಹೃದಯದ ಉಪಕಾರದಿಂದ ಕಂಪನಿಯ ಉತ್ಕರ್ಷ ಪ್ರಾರಂಭವಾಯಿತು. ಕುಂದಾಪುರ ಬಂಧುಗಳ ಸಹಾಯದ ಸ್ಮರಣೆಗಾಗಿ. ಕೃತಜ್ಞತೆಯನ್ನರ್ಪಿಸಬೇಕೆಂಬ ಉದ್ದೇಶದಿಂದ ಅದೇ ಕ್ಯಾಂಪಿನಲ್ಲಿ ಸಿದ್ಧಗೊಂಡ ಈ ನಾಟಕ. ೧೯೨೨ ರ ಸಪ್ಟೆಂಬರ್‌ದಲ್ಲಿ ರಂಗವೇರಿತು. ೯೫ ಪುಟಗಳ ಈ ನಾಟಕ ಅದೇ ವರ್ಷ ಪ್ರಕಟಗೊಂಡಿತು. ಗರುಡರದೇ ಆದ ' ರಾಮಾಯಣ ' ದಷ್ಟು ದೀರ್ಘ ನಾಟಕವಲ್ಲದಿದ್ದರೂ ಮೂಲ ರಾಮಾಯಣದ ಬಹುಪಾಲು ಕಥೆಯನ್ನು ಚಿತ್ರಿಸುತ್ತ. ಕರುಳನ್ನು ಮುಟ್ಟುವ. ತಟ್ಟುವ ಸನ್ನಿವೇಶಗಳಿಂದ ಕೂಡಿಕೊಂಡಿದೆ. ಬಹುಕಾಲ ನೆನಪಿನಲ್ಲಿ ಉಳಿಯುವಂಥ ಪ್ರಭಾವ ಮುದ್ರೆಯನ್ನೊತ್ತಿದೆ. ' ಪಾದುಕಾ ' ರಾಮಾಯಣಕ್ಕೆ ಸಂಬಂಧಿಸಿದ ಕಥಾವಸ್ತುಗಳನ್ನುಳ್ಳ ನಾಟಕವಾಗಿದ್ದರೂ ಸನ್ನಿವೇಶ ಹಾಗೂ ಸಂಭಾಷಣೆಗಳಲ್ಲಿ ಗರುಡರು ತೋರಿದ ಔಚಿತ್ಯಪ್ರಜ್ಞೆಯಿಂದ. ಪ್ರದರ್ಶನದ ಪ್ರಬುದ್ಧತೆಯಿಂದ ಹೆಚ್ಚು ಆಸ್ವಾದ್ಯವಾಗಿದೆ.

ಭಾರತೀಯ ಪರಂಪರೆಯ ಪರಿಚಿತ ಪುರಾಣಪ್ರಸಿದ್ಧ ಕಥಾಭಾಗವೊಂದನ್ನು ಕಲಾತ್ಮಕವಾಗಿ ನಾಟಕ ರೂಪದಲ್ಲಿ ನಿರೂಪಿಸುವ ಗುರಿ ಹೊಂದಿದ್ದ ಗರುಡರು ತೋರಿದ ತಂತ್ರ ಮೇಲ್ತರಗತಿಯದು. ವಸ್ತುವಿನ ಪರಿಣಾಮಕಾರಿ ನಿರೂಪಣೆಯಲ್ಲಿ ಗರುಡರ ಮಹತ್ವಾಕಾಂಕ್ಷೆಯನ್ನು ಕಾಣುತ್ತೇವೆ. ರಚನಾತಂತ್ರ ಹಾಗೂ ಏಕಮುಖ ಪರಿಣಾಮಗಳ ದೃಷ್ಟಿಯಿಂದ ' ಶ್ರೀರಾಮಪಾದುಕಾಪಟ್ಟಾಭಿಷೇಕ ' ಗಮನಾರ್ಹವಾದ ಕೃತಿಯಾಗಿದೆ. ತಂತ್ರ ಹಾಗೂ ಸಂವಿಧಾನಕಲೆಗಳ ದೃಷ್ಟಿಯಿಂದ ನೋಡಿದರೆ ' ಪಾದುಕಾ ' ನಾಟಕದಲ್ಲಿ ಸಂಸ್ಕೃತ ನಾಟಕಗಳ ಸಂವಿಧಾನ ಕೌಶಲವನ್ನು. ಪಾತ್ರಸೃಷ್ಟಿಯ ಹೊಳಹನ್ನು ಕಾಣುತ್ತೇವೆ. ಖಲ ಪಾತ್ರಗಳನ್ನು ಬಿಟ್ಟು ಉಳಿದೆಲ್ಲ ಪಾತ್ರಗಳಿಂದ ಬಂಧುಪ್ರೇಮ. ದಯೆ. ನ್ಯಾಯ. ನೀತಿಗಳ ಬಗೆಗೆ ಧಾರಾಳವಾಗಿ ಹೇಳಿಸಲಾಗಿದೆ.

ಪಾತ್ರಗಳ ದೃಷ್ಟಿಯಿಂದ ನೋಡಿದರೆ ' ಪಾದುಕಾ ' ನಾಟಕದ ನಾಯಕ ದಶರಥನೆಂದೇ ಹೇಳಬೇಕು. ಇನ್ನುಳಿದವರು ಏನಿದ್ದರೂ ಈ ನಾಟಕದಲ್ಲಿ ಮುಖ್ಯವಾಗುವುದಿಲ್ಲ. ಕೈಕೇಯಿ. ರಾಮ. ಭರತ ಹಾಗೂ ಇತರ ಪಾತ್ರಗಳು ದಶರಥನ ನೆರಳಿನಂತೆ ತೋರುತ್ತವೆಯಾದರೂ ಜೀವಂತವಾಗಿವೆ. ಭರತನು ಬಂಧುಪ್ರೇಮದ ಜೀವಂತ ಪ್ರತೀಕವಾಗಿದ್ದರೆ. ಗುಹನು ಸರ್ವಾರ್ಪಣಾ

ಭಕ್ತಿಗೆ ಉಜ್ವಲ ಉದಾಹರಣೆಯಾಗಿದ್ದಾನೆ. ಅದಮ್ಯವಾದ ಸವತಿಮತ್ಸರವನ್ನು, ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಉಗ್ರವಾಗಿ ಪ್ರಕಟಿಸುವ ಕೈಕೇಯಿ ಸರ್ವನಾಶದ ಮೂಲವಾಗಿದ್ದಾಳೆ. ದಶರಥನ ಸಾವು, ನಾಟಕದ ಗಾಂಭೀರ್ಯವನ್ನು ಇಮ್ಮಡಿ ಹೆಚ್ಚಿಸುತ್ತದೆ. ತಾನು ಪಡೆದ ವಚನದಿಂದಲೇ ಪತಿಯನ್ನು ಬಲಿತೆಗೆದುಕೊಳ್ಳುವ ಕೈಕೇಯಿಯ ದುರಂತ ಕರುಣಾಜನಕವಾಗಿದೆ. ನಾಟಕದ ಪ್ರಧಾನ ರಸ ಕರುಣ. ಅದು ಇಲ್ಲಿ ಚರಮಸೀಮೆಯನ್ನು ಮುಟ್ಟಿದೆ.

ತಮ್ಮ ಕೀಚಕವಧ, ಲಂಕಾದಹನ, ಕಂಸವಧ ಹಾಗೂ ಜವತಿಯ ಚಂದ್ರ ನಾಟಕಗಳಂತೆಯೇ ಸದಾಶಿವರಾಯರು ಸಮಕಾಲೀನ ರಾಜಕೀಯವನ್ನು ಈ ನಾಟಕದಲ್ಲಿ ಚೆನ್ನಾಗಿಯೇ ಸಮೀಕರಿಸಿದ್ದಾರೆ. ರಾಮನ ಪಟ್ಟಾಭಿಷೇಕಕ್ಕೆ ತಡೆಯೊಡ್ಡಿ, ಭರತನಿಗೆ ಪಟ್ಟವಾಗಬೇಕೆಂದು ಅಟ್ಟಹಾಸದಿಂದ ಕೇಳುತ್ತಿರುವ ಸಂದರ್ಭದಲ್ಲಿ ಕೈಕೇಯಿಗೆ ದಶರಥನು ಹೇಳುವ ಮಾತುಗಳು ಭಾರತೀಯರ ಸೌಮ್ಯ ಹಾಗೂ ಅಹಿಂಸಾತ್ಮಕ ಮಾರ್ಗವನ್ನು ಸೂಚ್ಯವಾಗಿ, ಅಷ್ಟೇ ಪರಿಣಾಮಕಾರಿಯಾಗಿ ಪ್ರೇಕ್ಷಕರ ಅರಿವಿಗೆ ತಂದುಕೊಡುತ್ತವೆ.

ಗದ್ಯಪ್ರಧಾನ ನಾಟಕವಾದರೂ ಇದರಲ್ಲಿ ಅರ್ಥಪೂರ್ಣ 'ಪದ'ಗಳಿವೆ. ಇಪ್ಪತ್ತಕ್ಕೂ ಹೆಚ್ಚು ಪದಗಳು ಇಲ್ಲಿವೆ. ಪೌರಾಣಿಕ ನಾಟಕ ಎಂಬ ಅಭಿಧಾನ ಹೊಂದಿಯೂ 'ಪಾದುಕಾ' ಜನಮನವನ್ನು ಗೆದ್ದು, ವಿಜಯದ ಗದ್ದುಗೆಯನ್ನೇರಿತು. ದಶರಥನ ಪಾತ್ರಕ್ಕೆ ಗರುಡರು ವಿಶೇಷವಾದ ಕಳೆ ಕಟ್ಟಿದರಲ್ಲದೆ ತಮ್ಮ ಭಾವಪೂರ್ಣ ಅಭಿನಯದಿಂದ ಪ್ರೇಕ್ಷಕರ ಮೆಚ್ಚುಗೆಯ ಸಂಕೇತವಾಗಿ 'ಅಭಿನಯ ಕೇಸರಿ' ಎಂಬ ಬಿರುದು ಪಡೆದರು. ಪ್ರತಿ ಕ್ಯಾಂಪಿನಲ್ಲೂ ಪ್ರಮುಖವಾಗಿ ಪ್ರಯೋಗಗೊಂಡು, ಕನ್ನಡ ಜನಮನಕ್ಕೆ ಮುದ ನೀಡಿದ 'ಶ್ರೀರಾಮಪಾದುಕಾಪಟ್ಟಾಭಿಷೇಕ' ನಾಟಕಕಾರ ಗರುಡರಿಗೆ, ಅಭಿನಯಿಸಿದ ಅವರ ನಾಟಕ ಸಂಸ್ಥೆಗೆ ಅಪಾರವಾದ ಕೀರ್ತಿ, ಸಂಪತ್ತುಗಳನ್ನು ತಂದುಕೊಟ್ಟಿತು.

ಧಾರವಾಡ ಆಕಾಶವಾಣಿ ಪ್ರಸಾರ ಮಾಲಿಕೆಯಲ್ಲಿ (೧೯೫೧) 'ಪಾದುಕಾ' ಮೂಡಿಬಂದದ್ದು ಸ್ಮರಣೀಯ. ಇಳಿವಯಸ್ಸಿನಲ್ಲೂ ಗರುಡರು ನೀಡಿದ ದಶರಥನ ಪಾತ್ರದ ಅಭಿನಯ ಅವಿಸ್ಮರಣೀಯ! ದಶರಥನ ಪಾತ್ರ ಅವರಿಗೆ ಅಭೂತಪೂರ್ವ ಜನಪ್ರಿಯತೆ ತಂದುಕೊಟ್ಟ ಪಾತ್ರ. ಅವರ ನಟನಾ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದ ಪಾತ್ರ. ರಂಗಭೂಮಿಯಲ್ಲಿ ಭದ್ರ ಸ್ಥಾನವನ್ನು ಕಲ್ಪಿಸಿದ ಪಾತ್ರ. ರಾಮವಿಯೋಗ ಸನ್ನಿವೇಶದಲ್ಲಿ ವಾಚಿಕ, ಆಂಗಿಕ, ಆಹಾರ್ಯ ಅಭಿನಯಗಳಿಗೆಲ್ಲ ಸಾಕಷ್ಟು ಅವಕಾಶ. ಅಂತೆಯೇ ಗರುಡರಿಂದ ಅದು ಸಮರ್ಥವಾಗಿ ಮೂಡಿಬಂತು. ಅವರ ಅಭಿನಯ ಪರಿಣತಿಗೆ ನಿದರ್ಶನವೆನಿಸಿತು. ದಶರಥನ ಪಾತ್ರವನ್ನು ಅಭಿನಯಿಸಿದ ಸದಾಶಿವರಾಯರಲ್ಲಿ ಕರ್ನಾಟಕ ತನ್ನ ಪ್ರಥಮ 'ಅಭಿನಯ ಕೇಸರಿ'ಯನ್ನು ಕಂಡಿತು.

ಪಾದುಕಾಪಟ್ಟಾಭಿಷೇಕ ಉತ್ತರ ಕರ್ನಾಟಕದ ಹಲವಾರು ಕಂಪನಿಗಳಿಂದ ಪ್ರಯೋಗಗೊಂಡಿತು, ಜನಪ್ರೀತಿ ಪಡೆಯಿತು. ನಾಟಕಕಾರ ಗರುಡ ಸದಾಶಿವರಾಯರ ಹೆಸರನ್ನು ಸ್ಮರಣೀಯಗೊಳಿಸಿತು.

▼

●

ಡಾ. ಬಸವರಾಜ ಜಗಜಂಪಿ
ವಾತ್ಸಲ್ಯ, ವಿನಾಯಕ ಹೌಸಿಂಗ್ ಕಾಲನಿ, ಶಾಹೂನಗರ, ಬೆಳಗಾವಿ - ೫೯೦ ೦೧೦

ಎಸ್. ಎಲ್. ಭೈರಪ್ಪನವರ ' ಭಿತ್ತಿ '

ಶ್ಯಾಮಸುಂದರ ಬಿದರಕುಂದಿ ▲ ವಿಹಂಗಮ ದೃಷ್ಟಿ - ೧

' ಭಿತ್ತಿ ' ಯನ್ನು ನಾನಿನ್ನೂ ಗಮನವಿಟ್ಟು ಓದಿರಲಿಲ್ಲ: ಅಲ್ಲಲ್ಲಿ ಭಾಗಶಃ ಓದಿಕೊಂಡಾಗ. ವ್ಯಕ್ತಿ ಜೀವನಕತೆಯನ್ನು ಭೈರಪ್ಪನವರು ಕಾದಂಬರಿ ಶೈಲಿಯಲ್ಲಿ ಬರೆದುಕೊಂಡಿದ್ದಾರೆ ಎಂಬ ಭಾವ ಹುಟ್ಟಿದ್ದರಿಂದ: ಮತ್ತು ಈಗಾಗಲೇ ' ಗೃಹಭಂಗ '. ' ಅನ್ವೇಷಣೆ ' ಕಾದಂಬರಿಗಳಲ್ಲಿ ತಮ್ಮ ಜೀವನಾನುಭವದ ವಾಸ್ತವ ಚಿತ್ರಗಳನ್ನು ತೋರಿಸಿದ ಈ ಲೇಖಕರು. ಮತ್ತೆ ಈಗ ಸ್ವಂತ ಚರಿತ್ರೆಯ ವಿವರಗಳನ್ನೇಕೆ ಕೊಡಬೇಕು. ಅದರ ಔಚಿತ್ಯ. ಅಗತ್ಯ ಅಷ್ಟೊಂದಿಲ್ಲವಲ್ಲ ಎಂದೂ ತೋರಿತು. ' ಭಿತ್ತಿ ' ಯನ್ನು ಓದುವುದೇ ಅನಾವಶ್ಯಕ ಎಂದು ನಿಲ್ಲಿಸಿದೆ. ಕಳೆದ ಸೆಪ್ಟೆಂಬರ್ ೨. ೩ ರಂದು ಧಾರವಾಡದಲ್ಲಿ ಭೈರಪ್ಪನವರ ಕಾದಂಬರಿಗಳನ್ನು ಮೆಲುಕಾಡಿಸುವ ಕಾರ್ಯಕ್ರಮ ನಡೆದಾಗ. ಅವರ ' ನಿರಾಕರಣೆ ' ಯ ಕುರಿತು ಮಾತನಾಡುವ ಪ್ರಸಂಗ ನನಗೆ ಬಂತು: ಭೈರಪ್ಪನವರು ಆ ಸಭೆಯಲ್ಲಿದ್ದರು. ಮರುದಿನ ' ಆಕಾಶವಾಣಿ ' ಗಾಗಿ ಅವರನ್ನು ಭೆಟ್ಟಿ ಮಾಡಿ. ಮಾತುಕತೆಯಾಡುವ ಅವಕಾಶ ಸಿಕ್ಕಾಗ. " ಸೃಜನಶೀಲ ಲೇಖಕನು ' ಆತ್ಮಕತೆ ' ಯಾಕೆ ಬರೀಬೇಕು: ಅವನ ಬರೆಹಗಳಲ್ಲಿ ಸ್ವಾನುಭವದ ವಿವರಗಳು. ಬದುಕನ್ನು ರೂಪಿಸಿದ ಕಲ್ಪನೆಗಳು ಹಾಸುಹೊಕ್ಕಾಗಿರುತ್ತವೆಯಾದ್ದರಿಂದ ಪ್ರತ್ಯೇಕವಾಗಿ ಕಾದಂಬರಿಕಾರನೊಬ್ಬ ಆತ್ಮವೃತ್ತಾಂತದ ಮೂಲಕ ಹೇಳಿಕೊಳ್ಳುವಂತಹದೇನೂ ಇರುವುದಿಲ್ಲ. ಅಲ್ಲವೆ ? " ಎಂದು ಮೊದಲನೆಯ ಪ್ರಶ್ನೆ ಕೇಳಿದೆ ಅವರಿಗೆ.

ಅದಕ್ಕೆ ಭೈರಪ್ಪನವರು ಉತ್ತರವಾಗಿ ಹೇಳಿದ್ದರಲ್ಲಿ ಒಂದು ಅಂಶ ನನಗೆ ಮನವರಿಕೆಯಾಯಿತು : " ನಾನು ಕಾದಂಬರಿಕಾರನಾದದ್ದು. ನನ್ನ ಬದುಕಿನ ವಿಶಿಷ್ಟ ಅನುಭವಗಳಿಗೆ ಕತೆಯ ರೂಪ ಕೊಡಲಿಕ್ಕೆಂದೇ– ಸರಿ. ಅನುಭವದ ಹಲವು ವಿವರಗಳು ಅಲ್ಲಿ ಉಪಯೋಗಕ್ಕೆ ಬಂದದ್ದೂ ನಿಜ: ಆದರೆ. ನಾನು ಕಾದಂಬರಿಕಾರ - ಕಲಾಕಾರ ಆಗಿರುವುದಕ್ಕಿಂತ ಮಿಗಿಲಾಗಿ. ಒಬ್ಬ ಮನುಷ್ಯನೂ ಹೌದು. ನನ್ನ ಮನಸ್ಸು ಮತ್ತು ಮನುಷ್ಯತ್ವ ಹೇಗೆ ಬೆಳವಣಿಗೆ ಕಂಡವು. ಎಂಬುದನ್ನು ನೆನಪಿಸಿಕೊಂಡು. ನನ್ನನ್ನು ನಾನೇ ಅವಲೋಕಿಸಿಕೊಳ್ಳುವ ಪ್ರಯತ್ನ ಕೂಡ ಸೃಷ್ಟ್ಯಾತ್ಮಕ ಕ್ರಿಯೆ ಅನ್ನಿಸಿದೆ " ಎಂದರು. ಬೇರೆ ಕಾರಣಗಳನ್ನು ಕೊಟ್ಟರು.

' ಭಿತ್ತಿ ' ಯನ್ನು ಮತ್ತೆ ಕೈಗೆತ್ತಿಕೊಂಡು ಓದಿದಾಗ ಕಾದಂಬರಿಕಾರ ಭೈರಪ್ಪನವರ ಚರಿತ್ರೆಯೆಂದರೆ. ಒಬ್ಬ ಪ್ರಜ್ಞಾವಂತ ಕಲಾವಿದನ ಹುಟ್ಟು. ವಿಕಾಸಗಳ ವಾಸ್ತವ ನಿರೂಪಣೆ ಮಾತ್ರವಲ್ಲ. ಬದುಕನ್ನು ಪ್ರಯೋಗಶೀಲ - ಚಲನಶೀಲ ಘಟನೆಯಾಗಿ ಸ್ವೀಕರಿಸಿ ಆ ಪ್ರಯೋಗದಲ್ಲಿ ತನ್ನ ಸತ್ವ. ಶೀಲ. ಬುದ್ಧಿಗಳನ್ನು ಸಾಕಷ್ಟು ಎಚ್ಚರದಿಂದ ತೊಡಗಿಸಿಕೊಂಡು ಗೆದ್ದು ಬಂದ ಛಲಗಾರಿಕೆಯ ಚಿತ್ರಣ. ಎಂದು ನನಗೀಗ ತೋರುತ್ತಿದೆ. ಜನಪ್ರಿಯ ಕಾದಂಬರಿ ಶೈಲಿಯಲ್ಲಿ ಅಂದರೆ. ಘಟನಾಪ್ರಧಾನ ನಿರೂಪಣೆ. ನಾಟಕೀಯ ಸನ್ನಿವೇಶಗಳ ನಿರ್ಮಾಣ. ದ್ವಂದ್ವರಹಿತ ಕಥನಗಾರಿಕೆಯಿಂದಾಗಿ ಈ ಆತ್ಮವೃತ್ತಾಂತ ಓದಿಸಿಕೊಳ್ಳುವ ಗುಣದಿಂದ ತುಂಬಿದೆ. ನೆನಪುಗಳನ್ನು ಕಾಲಕ್ರಮ ವಿಧಾನದಲ್ಲಿ ಎಳೆಎಳೆಯಾಗಿ ತೆಗೆಯುವದರಿಂದಾಗಿ. ಕುತೂಹಲ ಕೆರಳಿಸುತ್ತದೆ ಕಥನ. ಭೈರಪ್ಪನವರ ಕಾದಂಬರಿಗಳಲ್ಲಿ ರೂಪುಗೊಂಡ ಜೀವನದೃಷ್ಟಿಗೆ. ಮೂಲ ಕಾರಣವೆನಿಸುವಂತಹ. ಪ್ರೇರಣೆ ಒದಗಿಸುವಂತಹ ನೈಜಾನುಭವಗಳು ಅವರ ಸಾಹಿತ್ಯಕ ನಿಲುವಿಗೆ ಆಧಾರವಾಗಿ ಕಾಣುತ್ತವೆ.

ಸಾಹಿತ್ಯಕ್ಕೊಂದು ನಿಲುವು ನೆಲೆಗೊಳ್ಳಲು ಬರಹಗಾರನ ಪ್ರತಿಭೆ ಮತ್ತು ಆತ ಬದುಕಿನೊಂದಿಗೆ ಭೌತಿಕವಾಗಿ, ಬೌದ್ಧಿಕವಾಗಿ ನಡೆಸಿದ ಸೆಣಸಾಟದ ಅನುಭವ ದ್ರವ್ಯ ಮೂಲವಾಗುತ್ತವೆ. ತಾಯಿಯ ಮೊಲೆ ಹಾಲನ್ನು ೪ - ೫ ವರ್ಷದ ಮಗನಾಗಿ ಬೆಳೆಯುತ್ತಿದ್ದಾಗಿನ ವರೆಗೂ ಕುಡಿದ ಭೈರಪ್ಪನವರ ಬುದ್ಧಿ ಮತ್ತು ಭಾವ ಸತ್ವದ ಮೇಲೆ ಅಮ್ಮನ ದಿಟ ಹಾಗೂ ದಿಟ್ಟ ಸ್ವಭಾವದ ಪ್ರಭಾವವೇ ಹೆಚ್ಚು. ಇದನ್ನು ಜೆಗಟುತನ ಎನ್ನಬಹುದು. ದೈವದ ದೇಣಿಗೆಯಾದ ಪ್ರತಿಭೆ (ಒಳಗಣ್ಣು) ಮತ್ತು ದೈವಕ್ಕೆ ಬಾಹ್ಯವಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪರಿಸರ ಮತ್ತು ವ್ಯವಸ್ಥೆಯ ನಿಯಮ - ನಡತೆಗಳು ಭೈರಪ್ಪನವರ ವ್ಯಕ್ತಿತ್ವವನ್ನು ರೂಪಿಸಿದ ಸಂಗತಿಗಳು. ದೈವೀ ಶಕ್ತಿಗೆ ಸವಾಲಾಗುವಂತಹ ಪ್ರಸಂಗಗಳನ್ನು ಅವರು ಬೆಳವಣಿಗೆಯ ಪ್ರತಿ ಹೆಜ್ಜೆಯಲ್ಲೂ ಎದುರಿಸುತ್ತಾರೆ; ಪರಿಸ್ಥಿತಿಯ ದೌರ್ಬಲ್ಯಕ್ಕೆ ಒಳಗಾಗದೆ, ವ್ಯವಸ್ಥೆಯ ಸಂಚಿಗೆ ಬಲಿಯಾಗದೆ ಬುದ್ಧಿವಂತಿಕೆಯಿಂದ ನಿರ್ಣಾಯಕ ಗಳಿಗೆಯಲ್ಲಿ ವರ್ತಿಸುತ್ತಾರೆ. ಭೈರಪ್ಪನವರಲ್ಲಿ ದಿಟವಾಗಿಯೂ ಉಳಿದದ್ದೆಂದರೆ ಸ್ವತಂತ್ರ ಬುದ್ಧಿವಂತಿಕೆ. ಅವರ ಜತೆಗೇ ಅನ್ಯಾಯವನ್ನು ಗುರುತಿಸಿಕೊಂಡಾಗ ನ್ಯಾಯಕ್ಕಾಗಿ ಹಟ ತೊಡುವ ದಿಟ್ಟತನ. ಇವೆರಡೂ ಅವರ ಬಾಳನ್ನು ರೂಪಿಸುವಲ್ಲಿ ಆಡಿದ ಪಾತ್ರ 'ಭಿತ್ತಿ' ಯುದ್ದಕ್ಕೂ ಪಡಿಮೂಡಿದೆ. ತಬ್ಬಲಿ ಹುಡುಗನಾಗಿ ಕಷ್ಟ - ಕಾರ್ಪಣ್ಯಗಳ ಕಣ್ಣೀರಲ್ಲಿ ಕೈ ತೊಳೆಯುವ ಸ್ಥಿತಿಯಲ್ಲಿ ಭೈರಪ್ಪ, ದೈನ್ಯಕ್ಕೆ ಬಲಿಯಾಗದೆ, ಸ್ವಾಭಿಮಾನ ಮತ್ತು ಆತ್ಮವಿಶ್ವಾಸಗಳಿಂದ ಗೆಲ್ಲುತ್ತ ಬೆಳೆಯುತ್ತಾರೆ.

ವ್ಯಕ್ತಿತ್ವದ ಬೆಳವಣಿಗೆಯೇ ಭೈರಪ್ಪನವರ ಆತ್ಮವೃತ್ತಾಂತದ ಕೇಂದ್ರ ಗಮನ. ಹಲವು ಇಕ್ಕಟ್ಟುಗಳ ನಡುವೆಯೇ ತನ್ನೊಳಗಿನ ಸತ್ವಕ್ಕೆ ಬೆಳಕು ಕೊಡುವ ಹಟ, ಅವರ ಬಾಲ್ಯ - ಯೌವನಗಳನ್ನು ದಾಟಿಸುತ್ತದೆ. ಹಸಿವು, ಪರಾವಲಂಬನೆ, ಶೋಷಣೆಗಳಲ್ಲಿ ಒಣಗಿ ಹೋಗಬಹುದಾಗಿದ್ದ ಜೀವಸೆಲೆಯನ್ನು ಅವರು ಮತ್ತೆ ಮತ್ತೆ ಸಜಲಗೊಳಿಸುವುದಕ್ಕೆ ತಮ್ಮ ಬುದ್ಧಿವಂತಿಕೆ, ಸಹನೆ, ಪರಿಶ್ರಮದ ಓದು - ವಿದ್ಯೆ ಗಳಿಕೆಗಳನ್ನು ಬಳಸುತ್ತಾರೆ. ಸಾಮಾನ್ಯ ವ್ಯವಹಾರದಲ್ಲಿ ಸೋಲಿಗೆ, ಅಪಮಾನಕ್ಕೆ ಒಳಗಾಗದಂತೆ ತಮ್ಮ ಸೃಜನಶೀಲ ಕಲ್ಪನೆಗಳನ್ನವರು ಬಳಸಿಕೊಳ್ಳುತ್ತಾರೆ; ಆದರೆ ಎಲ್ಲಿಯೂ ನೈಜ್ಯಾನುಸಂಧಾನಕ್ಕೆ ಒಳಗಾಗುವುದಿಲ್ಲ. ಬಾಲ್ಯ - ಯೌವನದಲ್ಲಿ ಎಡವಬಹುದಾದ ಹಲವು ಬಿಕ್ಕಟ್ಟಿನ ಪ್ರಸಂಗಗಳಲ್ಲಿ, ಅವರೊಳಗಿನ ವಿವೇಕ ಮತ್ತು ವಾಸ್ತವದ ಬಗೆಗಿನ ಸ್ಪಷ್ಟ ತಾರ್ಕಿಕತೆ ಅವರನ್ನು ಉಳಿಸಿಕೊಳ್ಳುತ್ತದೆ.

ವಿದ್ಯಾರ್ಥಿ ದೆಸೆ ಮುಗಿದು ಉದ್ಯೋಗ ಜೀವನಕ್ಕೆ ತೊಡಗಿದ ಭೈರಪ್ಪನವರು, ಎರಡು ಮಹತ್ವಾಕಾಂಕ್ಷೆಗಳನ್ನಿಟ್ಟುಕೊಂಡು ಸ್ಪಷ್ಟ ಮತ್ತು ಶಿಸ್ತಿನ ಹೆಜ್ಜೆಗಳನ್ನಿಡುತ್ತಾರೆ. ಒಂದು, ತನ್ನ ಬೌದ್ಧಿಕ ಸಂಪತ್ತನ್ನು ಬೋಧನೆಯಲ್ಲಿ ವಿನಿಯೋಗಿಸಲು ಉತ್ತಮ ಹುದ್ದೆಯ ಹುಡುಕಾಟ ಮತ್ತು ಅದನ್ನು ಪಡೆದು ತೀರುವ ಹೋರಾಟ. ಇನ್ನೊಂದು, ಜೀವನದ ಕುರಿತಾದ ತನ್ನ ಸಂವೇದನೆಗಳಿಗೆ ಬರೆಹ ರೂಪ ಕೊಡಲು ಸೃಜನಶೀಲ ಮನೋಭಾವ ಬೆಳೆಸುವತ್ತ ಹುಡುಕಾಟ. ಇವೆರಡನ್ನೂ ಗಳಿಸುವಾಗ ಎದುರಾಗುವ ಪೈಪೋಟಿ, ಕ್ಷುದ್ರ ಪ್ರತಿಕ್ರಿಯೆಗಳು, ದೈನ್ಯ - ದೌರ್ಬಲ್ಯಕ್ಕೀಡು ಮಾಡುವವರ ಕಪಟ - ಕುತಂತ್ರಗಳು ಆತ್ಮವೃತ್ತದ ತುಂಬ ವಿವರವಾಗಿಯೇ ಬಂದಿವೆ. ಅಳುಕು, ಹಿಂಜರಿತಗಳಿಲ್ಲದೆ, ಭಿಡೆ - ಮುರವತ್ತುಗಳಿಗಂಟದೆ ಅವೆಲ್ಲವನ್ನು ಪ್ರಾಂಜಲವಾಗಿ, ನಿಷ್ಠುರವಾಗಿ ನಿರೂಪಿಸುವಾಗ ಭೈರಪ್ಪನವರ ಬಂಡವಾಳವೆಂದರೆ ಋಜುತ್ವವೊಂದೇ. ಅವರ ವ್ಯಕ್ತಿತ್ವದ ಈ ಅಂಶ ಹೆಚ್ಚು ಕಡೆ ಪ್ರಶಂಸನೀಯವೆನಿಸುತ್ತದೆ; ಒಂದೆರಡು ಕಡೆ ಸಂಕುಚಿತ ಕಲ್ಪನೆಯ, ಪೂರ್ವಗ್ರಹಪೀಡಿತ ಪ್ರತಿಕ್ರಿಯೆಯಾಗಿ ಕಾಣುತ್ತದೆ. ಉದಾಹರಣೆಗೆ– ನವ್ಯವಿಮರ್ಶೆಯ ಬಗ್ಗೆ ಅವರು ಕೊಡುವ ಪ್ರತಿಕ್ರಿಯೆ; ತಮ್ಮ ಕಾದಂಬರಿಗಳ ಬಗ್ಗೆ ತಾವೇ ಮಾಡಿಕೊಳ್ಳುವ ಸಮರ್ಥನೆ.

ಭೈರಪ್ಪನವರನ್ನು 'ಮತೀಯವಾದಿ'. 'ಸಂಪ್ರದಾಯವಾದಿ' ಎಂದು ಕೆಲವರು ಚೀಸುಮಾತುಗಳಿಂದ ಕಿವಿಯುತ್ತಾರೆ. ಆದರೆ. ಅವರ ಸಾಮಾಜಿಕ. ವಾಸ್ತವಿಕ ನಿಲುವುಗಳು ಅನುಭವಜನ್ಯ ತಿಳಿವಳಿಕೆಯ ಫಲವಾಗಿವೆ ಎಂಬುದನ್ನು 'ಶ್ರಾದ್ಧ'ದಂತಹ ಕ್ರಿಯಾಕರ್ಮ (ritual) ದ ಬಗ್ಗೆ ಅವರು ತಳೆದ ನಿರ್ಧಾರದಲ್ಲಿ ಗಮನಿಸಬಹುದು (ಪು. ೪೫೮. ೫೯). ಸೃಜನಶೀಲ ಗುಣದ ಅಭಿವೃದ್ಧಿಗಾಗಿ ಭೈರಪ್ಪನವರು ಕೈಕೊಳ್ಳುವ ಸಂಗೀತಕಲೆಯ ಅಭ್ಯಾಸ. ಮಾಡುವ ವಿಪುಲ ಪ್ರವಾಸಗಳು. ಕಲೆಹಾಕುವ ವಿವರಗಳು. ವ್ಯುತ್ಪತ್ತಿಜ್ಞಾನದ ಗಳಿಕೆಗಳು ಮನೋಜ್ಞವಾಗಿವೆ. ಅವ್ಯಕ್ತ ಗುರಿಯೊಂದನ್ನು ತಲುಪುವ ಬಹುದೂರ ನಡೆವ ಹಾದಿಹೋಕನಂತೆ ಭೈರಪ್ಪ ಗೋಚರಿಸುತ್ತಾರೆ.

ಭೈರಪ್ಪನವರ ಕಾದಂಬರಿಗಳನ್ನು ಅಭ್ಯಾಸ ದೃಷ್ಟಿಯಿಂದ ನೋಡುವವರಿಗೆ 'ಭಿತ್ತಿ' ಒಂದು ಆಕರ ಕೃತಿ ಎನಿಸಿದರೆ. ಇದೂ ಒಂದು ಸ್ವತಂತ್ರ - ಬಿಡಿ ಸಾಹಿತ್ಯ ಕೃತಿಯೆಂದು ಓದಿಕೊಳ್ಳುವವರಿಗೆ ಸೃಜನಶೀಲ ಮನುಷ್ಯನ ಸಾಧನೆಯ ಕತೆಯಾಗಿ 'ಭಿತ್ತಿ' ಶ್ರೀಮಂತ ಅನುಭವ ಕೊಡುತ್ತದೆ.

● ▼

ಡಾ. ಶ್ಯಾಮಸುಂದರ ಬಿದರಕುಂದಿ
ಆದರ್ಶ ಶಿಕ್ಷಣ ಸಮಿತಿಯ ಕಾಮರ್ಸ್ ಕಾಲೇಜು. ಗದಗ - ೫೮೨ ೧೦೨

●

ಎಸ್. ಎಲ್. ಭೈರಪ್ಪನವರ 'ಭಿತ್ತಿ'

ಶಾಂತಾ ಇಮ್ರಾಪುರ **▲ ವಿಹಂಗಮ ದೃಷ್ಟಿ - ೨**

ಸೃಜನಶೀಲತೆಯ ಅಂತಃಸತ್ವವುಳ್ಳ ಸಂವೇದನಾಶೀಲ ಮನಸ್ಸೊಂದು ವೈಯಕ್ತಿಕ ಬದುಕು - ಬವಣೆಗಳನ್ನು. ಜೀವನಾನುಭವದ ನೂರು ನೆಲೆಗಳನ್ನು. ತನ್ನ ಸಮಾಜ ಸಂಸ್ಕೃತಿಯ ಮೂಲ ಮೂಲೆಗಳನ್ನು. ಪ್ರಭಾವ - ಪರಿಮಿತಿಗಳನ್ನು ಕುತೂಹಲದಿಂದ ಕೆದಕುತ್ತ. ಜಿಜ್ಞಾಸೆಯಿಂದ ಬಗೆಯುತ್ತ. ದೇವರು - ಧರ್ಮ. ಸತ್ಯ - ನ್ಯಾಯ - ನೀತಿಯಂಥ ಮೌಲ್ಯಾದರ್ಶಗಳನ್ನು ಸ್ವಾನುಭವದ ತಿಳಿವಿನಲ್ಲಿ ಶೋಧಿಸುತ್ತ. ಸತ್ಯ - ಸೋಪಜ್ಞತೆಯ ನಿರಂತರ ಹುಡುಕಾಟದಲ್ಲಿ ಅನುಭವದ ಆಳಗಲಗಳನ್ನು ಹಿಗ್ಗಿಸಿಕೊಳ್ಳುತ್ತ. ಜೀವನಾನುಭವದ ಭಿತ್ತಿಯಲ್ಲಿ ಎತ್ತರೆತ್ತರಕ್ಕೆ ಬೆಳೆದು ನಿಂತ ವಿಸ್ಮಯವನ್ನು ನಿರ್ಲಿಪ್ತ - ನಿರ್ಮಮ ಪ್ರಜ್ಞೆಯಲ್ಲಿ ಅವಲೋಕಿಸುವ ಆತ್ಮಕಥನ 'ಭಿತ್ತಿ' ಕನ್ನಡದ ಶ್ರೇಷ್ಠ ಕಾದಂಬರಿಕಾರ ಡಾ. ಎಸ್. ಎಲ್. ಭೈರಪ್ಪನವರ ಅವರ ಆರು ದಶಕಗಳ ಆತ್ಮಚರಿತ್ರೆ. ೬೧೮ ಪುಟಗಳ ಹದಿನೇಳು ಅಧ್ಯಾಯಗಳುಳ್ಳ ವಿನ್ಯಾಸವಿರುವ 'ಭಿತ್ತಿ' ವ್ಯಕ್ತಿಯೊಬ್ಬರ ಸ್ವಕೇಂದ್ರಿತ ಜೀವನವೃತ್ತಾಂತಗಳ ಕಾಲಬದ್ಧ ನಿರೂಪಣೆಯ ಮಿತಿಯನ್ನು ದಾಟಿ ಸಮಕಾಲೀನ ಸಾಂಸ್ಕೃತಿಕ - ಬೌದ್ಧಿಕ - ಸಾಮಾಜಿಕ ವಾಸ್ತವದ ಅನುಸಂಧಾನ - ವಿಮರ್ಶೆಯ ನೆಲೆಗಳನ್ನೊಳಗೊಂಡ ಸಾಂಸ್ಕೃತಿಕ ಸಂಕಥನವಾಗಿ ಮೈದಾಳಿದೆ. ಕನ್ನಡ ಆತ್ಮಕಥನಗಳ ಸುಮಾರು ಏಳು ದಶಕಗಳ ಪರಂಪರೆಯಲ್ಲಿ ಅನನ್ಯವೆನಿಸಿರುವ 'ನನ್ನ ಜೀವನ ಸ್ಮೃತಿಗಳು' (ಆಲೂರ ವೆಂಕಟರಾಯರು). 'ಜ್ಞಾಪಕಚಿತ್ರಶಾಲೆ' (ಡಿ.ವಿ.ಜಿ.). 'ಭಾವ' (ಮಾಸ್ತಿ). 'ನೆನಪಿನ ದೋಣಿಯಲ್ಲಿ' (ಕುವೆಂಪು). 'ಹುಚ್ಚು ಮನಸ್ಸಿನ ಹತ್ತು ಮುಖಗಳು' (ಕಾರಂತ). 'ಬರಹಗಾರನ ಬದುಕು' (ಅ.ನ.ಕೃ). 'ಕಲೆಯೇ ಕಾಯಕ' (ಗುಬ್ಬಿ ವೀರಣ್ಣ) ಮುಂತಾದ ಆತ್ಮಕಥನಗಳ ಮಾಲಿಕೆಗೆ ಮೌಲಿಕ ಸೇರ್ಪಡೆ 'ಭಿತ್ತಿ'.

ವೈಚಾರಿಕತೆ. ಆತ್ಮನಿರೀಕ್ಷಣೆ. ಚಿಂತನಶೀಲತೆ ಮತ್ತು ಸತ್ಯಶೋಧನೆಯ ಗಂಭೀರ ಆಯಾಮಗಳನ್ನು ತಮ್ಮ ಕಾದಂಬರಿಗಳ ವಸ್ತು - ಪಾತ್ರ - ಸನ್ನಿವೇಶ - ಸಂದರ್ಭಗಳ ಹಂದರದಲ್ಲಿ ಹೆಗೆದು ಕಲಾತ್ಮಕವಾಗಿ ಧ್ವನಿಸಬಲ್ಲ ಸೃಜನಶೀಲ ಪ್ರಯೋಗಗಳ ಮೂಲಕ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಭೈರಪ್ಪನವರು ವಾಚಕರ ಬೌದ್ಧಿಕ ನೆಲೆಯನ್ನು ಹೆಚ್ಚು ಸಂವೇದನಶೀಲಗೊಳಿಸಿದ ವಿಶಿಷ್ಟ ಲೇಖಕರು. ಸಾಹಿತ್ಯವು ಜೀವನಾನುಭವದ ಗಟ್ಟಿ ನೆಲೆಯಲ್ಲಿ ರೂಪುಗೊಳ್ಳುವ ಶುದ್ಧ ಕಲೆ. ವೈಯಕ್ತಿಕ ಅನುಭವಗಳು ಬುದ್ಧಿ -ಭಾವ - ಪ್ರಜ್ಞೆಯಲ್ಲಿ ಶೋಧಿತಗೊಂಡು. ಸಮಷ್ಟಿ ನೆಲೆಯ ವಿಸ್ತಾರಕ್ಕೆ ಹಬ್ಬಿ. ರಸಭಾವಗಳಿಂದ ಪುಷ್ಟಗೊಂಡು ಕಲಾತ್ಮಕ ಪರಿವೇಷದೊಂದಿಗೆ ಮೂಡಿ ಬಂದಾಗಲೇ ಉತ್ತಮ ಸಾಹಿತ್ಯ ಸೃಷ್ಟಿ ಸಾಧ್ಯ. ವೈಯಕ್ತಿಕತೆಯ ಮಿತಿಗಳನ್ನು ಮೀರಬಲ್ಲ ಮನಸ್ಸು ಮಾತ್ರ ಗಟ್ಟಿ ಸಾಹಿತ್ಯ ನಿರ್ಮಿಸಬಲ್ಲದು ಎನ್ನುವ ನಂಬಿಕೆಗಳಿಗೆ ಬದ್ಧರಾಗಿ. ಸಾಹಿತ್ಯಿಕ ಪಂಥ - ಪಂಗಡಗಳಿಂದ ದೂರವಾಗಿ ಶುದ್ಧ ಕಲಾಸೃಷ್ಟಿಯ ನಿಷ್ಠೆಯಿಂದ ಸಾಹಿತ್ಯ ರಚಿಸಿ ಬದುಕು - ಬರಹದಲ್ಲಿ ವ್ಯಕ್ತಿವಿಶಿಷ್ಟತೆ ಮೆರೆದ ಅಪೂರ್ವ ಲೇಖಕರು ಭೈರಪ್ಪ.

"ಸಾಹಿತ್ಯ ಸೃಷ್ಟಿಯು ಎಂದೂ ಸಮೂಹ ಕೆಲಸವಲ್ಲ. ಚಳವಳಿಯಲ್ಲ. ಪ್ರತಿಯೊಬ್ಬನೂ ತನ್ನ ಅನುಭವ ತನ್ನ ಭಾವನಾ ದೃಷ್ಟಿಗಳಿಗೆ ತಕ್ಕಂತೆ ತನ್ನ ಪಾಡಿಗೆ ತಾನು ಬರೆಯಬೇಕು" (ಪು. ೫೫೬) ಎನ್ನುವ ಸ್ಪಷ್ಟ ಅರಿವಿನಿಂದ ಬರೆಯುತ್ತಿರುವ ಭೈರಪ್ಪನವರು ವಿಮರ್ಶಕರ ಟೀಕೆ - ಟಿಪ್ಪಣಿ - ಉಪೇಕ್ಷೆಗೆ ಎದೆಗುಂದದವ. ತಮ್ಮ ಸೃಜನಶೀಲ ರಚನೆಗಳ ಮೂಲಕ ತಮ್ಮ ಪ್ರತಿಭಾಶ್ರೀಮಂತಿಕೆಯನ್ನು ಪರಿಚಯಿಸಿದ್ದಾರೆ. ಇತಿಹಾಸ - ಪುರಾಣ - ಪರಂಪರೆ. ಧರ್ಮ - ನೀತಿ - ಸತ್ಯ. ಸಮಾಜ ಮತ್ತು ಮೌಲ್ಯವ್ಯವಸ್ಥೆ ಮನುಷ್ಯ ಪ್ರವೃತ್ತಿಗಳನ್ನು ತಮ್ಮ ಅಧ್ಯಯನ - ಅನುಭವ ಮತ್ತು ಆಧುನಿಕ ಪ್ರಜ್ಞೆಯ ಬೆಳಕಿನಲ್ಲಿ ಪರಾಮರ್ಶಿಸಿ. ಸತ್ಯಶೋಧನೆಯ ಒಳನೋಟಗಳನ್ನು ಕಾದಂಬರಿಗಳ ಮೂಲಕ ಪ್ರತಿಪಾದಿಸಿದ್ದಾರೆ. ಸಾಮಾನ್ಯ ಓದುಗನಿಂದ ಹಿಡಿದು ಬೌದ್ಧಿಕ ಜಗತ್ತಿನ ವಿವಿಧ ಕ್ಷೇತ್ರಗಳ ಪ್ರಬುದ್ಧ ವಾಚಕ ಸಮುದಾಯವನ್ನು ಸ್ವದೇಶ - ವಿದೇಶಗಳಲ್ಲಿ ಪಡೆದುಕೊಂಡಿರುವ ಭೈರಪ್ಪನವರ ಕಾದಂಬರಿಗಳು ಹತ್ತಾರು ಭಾಷೆಗಳಲ್ಲಿ ಅನುವಾದಗೊಂಡಿವೆ. ಹಲವಾರು ಮುದ್ರಣ ಕಂಡಿವೆ. ಓದುಗರ ಮನಸ್ಸನ್ನು ಮುಟ್ಟಿ - ತಟ್ಟಿ ಪ್ರಭಾವಿಸಬಲ್ಲ ಅವರ ಕಾದಂಬರಿಗಳ ಸತ್ವಕ್ಕೆ ಇದು ನಿದರ್ಶನ.

ನಾಲ್ಕೈದು ವರ್ಷದ ಬಾಲ್ಯಾವಸ್ಥೆಯಿಂದ ಪ್ರಾರಂಭಿಸಿ. ನಿವೃತ್ತಿ ವರೆಗಿನ ಭೈರಪ್ಪನವರ ಬದುಕಿನ ಒಳಹೊರಗನ್ನು ಬಿಚ್ಚಿಡುವ 'ಭಿತ್ತಿ' ನೂರಾರು ಸಂದರ್ಭ - ಸನ್ನಿವೇಶ - ಸಂಗತಿ ಮತ್ತು ಕ್ರಿಯೆ - ಪ್ರಕ್ರಿಯೆಗಳ ಚಿತ್ರಮಾಲೆ. ಭಾವಾನುಭಾವಗಳ ಭಿತ್ತಿಚಿತ್ರ. ಬಡತನ - ಹಸಿವು - ಅಪಮಾನ - ಪರದೇಶಿತನದ ಅಪಾರ ಯಾತನೆಯನ್ನು ನೀಡಿದ ಬದುಕು. ಭೈರಪ್ಪನವರಿಗೆ ಕೀರ್ತಿ - ಪ್ರೀತಿ - ಪ್ರಸಿದ್ಧಿಯ ಮಹಾಪೂರವನ್ನೂ ಹರಿಸಿದೆ. ಸಂಕಟ - ಸಮಸ್ಯೆಗಳನ್ನು ಬದುಕಿನ ಭಾಗವಾಗಿಯೇ ಅರಗಿಸಿಕೊಳ್ಳುವ ಆತ್ಮಪ್ರತ್ಯಯ. ಸಂಯಮ ಮತ್ತು ಅವಕಾಶ - ಅಭಿಮಾನವನ್ನು ಅರಿವಿನ ಸಂಪಾದನೆ. ಆತ್ಮಶೋಧನೆಗೆ ವಿನಿಯೋಗಿಸಿಕೊಳ್ಳುವ ವಿವೇಚನೆ - ನಿರ್ಲಿಪ್ತತೆ 'ಭಿತ್ತಿ'ಯ ಕೇಂದ್ರ ಪ್ರಜ್ಞೆಯಾಗಿದೆ. ಭೈರಪ್ಪನವರ ವೈಚಾರಿಕ ಆಕೃತಿ. ವ್ಯಕ್ತಿತ್ವದ ಸತ್ವ ಮತ್ತು ಜೀವನದೃಷ್ಟಿಯ ಮಹತ್ವದ ನೆಲೆಗಳನ್ನು ಪರಿಚಯಿಸುವ 'ಭಿತ್ತಿ' ಅವರ ಕಾದಂಬರಿಗಳ ಒಳರಚನೆ ಮತ್ತು ಅನುಭವಲೋಕವನ್ನು ಅರ್ಥೈಸಿಕೊಳ್ಳುವಲ್ಲಿ ಅಗತ್ಯವಾದ ತಾತ್ವಿಕ ಭಿತ್ತಿಯನ್ನು ಒದಗಿಸುತ್ತದೆ.

ಸಾಹಿತ್ಯ ಕೃತಿಗಳೇ ಸಾಹಿತಿಯ ವ್ಯಕ್ತಿತ್ವ ಮತ್ತು ಸತ್ವವನ್ನು ಪರಿಚಯಿಸುವ ಮಹತ್ವದ ಆಕರ ಸಾಮಗ್ರಿಗಳಾದರೂ. ಕಲಾಸೃಷ್ಟಿಯ ಸೂಕ್ಷ್ಮತೆಯಲ್ಲಿ ಬಿಚ್ಚಿಕೊಳ್ಳಲಾಗದ ಭಾವಸ್ಥಿತಿಗಳು.

ಜೀವನಾನುಭವವನ್ನು ಪಾಕಗೊಳಿಸಿದ ಪ್ರಾಪಂಚಿಕ ನೆಲೆಗಳು ನಿಚ್ಚಳವಾಗಿ ಬಿಚ್ಚಿಕೊಳ್ಳಲು ಆತ್ಮಕಥನದ ಆಯಾಮಗಳು ಪೂರಕವಾಗಿವೆ. ಕಲ್ಪನೆ - ರಂಜನೆ ಭಾವುಕತೆಗೆ ಆಸ್ಪದವೀಯದೆ ಶುದ್ಧ ವಾಸ್ತವವನ್ನು ಪೂರ್ಣ ಪ್ರಾಮಾಣಿಕತೆಯೊಂದಿಗೆ ದಾಖಲಿಸಬೇಕಾದ ಆತ್ಮಕಥನದ ರಚನೆಯು ಸೃಜನಶೀಲ ಮನಸ್ಸಿಗೆ ಕಲಾಸೃಷ್ಟಿಯ ಸಾಫಲ್ಯವನ್ನು ಒದಗಿಸದ ನೀರಸ ಕ್ರಿಯೆಯಾದರೂ. ಲೇಖಕರ ಅಂತಃಸತ್ವವನ್ನು ಅರಳಿಸಿ. ಸೃಜನಶೀಲತೆಯನ್ನು ಉದ್ದೀಪಿಸಿದ ಅಂದಂದಿನ ಸಮಾಜ - ಸಂಸ್ಕೃತಿ - ಸಂದರ್ಭವನ್ನು. ಪ್ರತಿಭೆ - ಪರಿಶ್ರಮದ ಸ್ವರೂಪವನ್ನರಿಯುವಲ್ಲಿ ಇಂಥ ಆತ್ಮಕಥನಗಳು ಹೆಚ್ಚು ಅಧಿಕೃತವೆನಿಸುತ್ತವೆ.

ತಾಯಿ ಮಡಿಲಿನ ಬೆಚ್ಚನೆಯ ಅನುಭವ ಕಥನದೊಂದಿಗೆ ಬಿಚ್ಚಿಕೊಳ್ಳುವ 'ಭಿತ್ತಿ'ಯ ಮೊದಲ ಹತ್ತು ಅಧ್ಯಾಯಗಳಲ್ಲಿ ಭೈರಪ್ಪನವರ ಬಾಲ್ಯ - ಬಡತನ - ಬವಣೆಗಳು ಮತ್ತು ಶಿಕ್ಷಣಕ್ಕಾಗಿ ನಡೆಸಿದ ತೀವ್ರ ಹೋರಾಟದ ನಿಷ್ಠುರ - ನಿರ್ದಯ ನೆಲೆಗಳ ನಿರೂಪಣೆಯಿದೆ. ವರ್ಗ - ವರ್ಣ ತಾರತಮ್ಯಗಳು. ಜಾತಿಭೇದದ ಕಟ್ಟಳೆಗಳು. ಮಡಿಮೈಲಿಗೆ. ಬಹಿಷ್ಕಾರದ ಭಯ ತುಂಬಿದ ಬಹುಮತೀಯ ಪರಿಸರದ ಸಣ್ಣ ಹಳ್ಳಿ 'ಸಂತೇಶಿವರ'ದ ಬಡ ಶ್ಯಾನುಭೋಗರ ಮನೆತನದಲ್ಲಿ ಜನಿಸಿದ ಭೈರಪ್ಪನವರನ್ನು ಪ್ರಭಾವಿಸಿದ ತಾಯಿ ಗೌರಮ್ಮನವರ ಧೈರ್ಯ. ಬುದ್ಧಿಮತ್ತೆ ಮತ್ತು ಮಾನವೀಯತೆ. ಜಾತಿ ವ್ಯವಸ್ಥೆಯ ಒತ್ತಡಗಳಲ್ಲಿಯೂ ವ್ಯಕ್ತವಾಗುತ್ತಿದ್ದ ಊರವರ ಸ್ನೇಹ - ಪ್ರೀತಿ - ಉದಾರತೆ. ಶಿಥಿಲಗೊಳ್ಳುತ್ತಿರುವ ಪೌಲ್ಯ - ಜಾತಿವ್ಯವಸ್ಥೆ ಇತ್ಯಾದಿ ವಿವರಗಳು ಗ್ರಾಮಸಂಸ್ಕೃತಿಯ ಸ್ಪಷ್ಟ ಚಿತ್ರಣ ನೀಡುತ್ತವೆ. ತಂದೆಯ ಹೊಣೆಗೇಡಿತನದಿಂದಾಗಿ ಬೆನ್ನಟ್ಟಿದ ಬಡತನ. ಬರಗಾಲ. ಪ್ಲೇಗಿನಿಂದ ಸತ್ತ ಅಕ್ಕ - ಅಣ್ಣರ ಅಗಲುವಿಕೆಯ ದಾರುಣ ದುಃಖ. ಶಿಕ್ಷಣಕ್ಕಾಗಿ ಆಶ್ರಯವಿತ್ತ ಸೋದರ ಮಾವನು ನೀಡಿದ ಅಸಹನೀಯ ಕಿರುಕುಳ. ತಾಯಿಯ ಸಾವಿನ ಆಘಾತ. ಒಟ್ಟಾರೆ ನೆಲೆ ತಪ್ಪಿದ ಒಂಟಿ ಹಕ್ಕಿಯಂತಾದ ಬಾಲ್ಯದ ಬದುಕಿನ ದುರ್ಭರ ಘಟನೆಗಳು ಭೈರಪ್ಪನವರ ಸಂವೇದನೆಯನ್ನು ಗಾಢವಾಗಿ ಆವರಿಸಿಕೊಂಡದ್ದನ್ನು ಅವರ ಕಾದಂಬರಿಗಳು ವಿದಿತಪಡಿಸುತ್ತವೆ.

ಊರೂರು ಅಲೆದು ವಾರಾನ್ನ ಉಂಡು. ದೇವಸ್ಥಾನದ ದೀಪದಡಿಯಲ್ಲಿ ಓದಿ. ಉಪವಾಸ - ವನವಾಸದ ನಿತ್ಯ ಹೋರಾಟದಲ್ಲಿಯೂ ಬದುಕುವ - ಕಲಿಕೆಯ ಉತ್ಕಟ ಛಲದಿಂದ ಅನುಭವಿಸಿದ ಆತಂಕಗಳು ಮತ್ತು ಪ್ರಕಟಿಸಿದ ಧೈರ್ಯವು. ಸಮಸ್ಯೆಗಳೊಂದಿಗೆ ಸೆಣಸಾಡುತ್ತ ಬದುಕನ್ನು ಅರಳಿಸಿಕೊಳ್ಳುವ ಅವರ ಕಾದಂಬರಿಗಳ ಪಾತ್ರಗಳ ಸತ್ವವನ್ನು ನೆನಪಿಸುತ್ತದೆ. ಇಂಥ ನಿರ್ಗತಿಕ ಸ್ಥಿತಿಯಲ್ಲಿದ್ದ ಬಡ ಬಾಲಕನ ಪ್ರತಿಭೆ - ವಿದ್ಯೆಯ ಹಂಬಲವನ್ನು ಪ್ರೋತ್ಸಿಸಿ. ಬಡತನದ ಬವಣೆಯನ್ನು ಹಗುರಗೊಳಿಸಿದ ಹಲವು ಮಹನೀಯರ ಮಾನವೀಯತೆ. ಪ್ರೀತಿ - ಅಂತಃಕರಣದ ಪ್ರಸಂಗಗಳು ಮನುಷ್ಯ ಸ್ವಭಾವದ ಉದಾತ್ತ ನೆಲೆಯಲ್ಲಿ ಅವರ ಶ್ರದ್ಧೆಯನ್ನು ಕುದುರಿಸಿವೆ.

ಹದಿನೆಂಟು ವರ್ಷದ ಎಳೆವಯಸ್ಸಿನಲ್ಲಿಯೇ ಅನಿವಾರ್ಯವಾದ ಕಷ್ಟದ ದುಡಿಮೆ. ಅನುಭವಿಸಿದ ಅಪಮಾನ. ಕಾಡಿದ ಒಂಟಿತನ. ಆತ್ಮೀಯರ ಅಗಲುವಿಕೆಯ ಯಾತನೆಗಳು ಬಾಲಕ ಭೈರಪ್ಪನವರಲ್ಲಿ ಬದುಕನ್ನು ಸಹಿಸುವ - ಗೆಲ್ಲುವ ಎದೆಗಾರಿಕೆಯನ್ನು ತುಂಬಿದಂತಿವೆ. ಭಿಕ್ಷಾನ್ನ - ವಾರಾನ್ನದಿಂದ ಹೈಸ್ಕೂಲು ಶಿಕ್ಷಣ ಮುಂದುವರಿಸಿದಾಗ ಕಂಡುಕೊಂಡ ದುಡಿಮೆಯ ಹಲವು ದಾರಿಗಳು ಕಠಿಣ ಪರಿಶ್ರಮದೊಂದಿಗೆ ಕ್ರಿಯಾಶೀಲತೆಯನ್ನು ಕಲಿಸಿವೆ. ಪರೀಕ್ಷೆಯ ಶುಲ್ಕಕ್ಕಾಗಿ. ಜೀವನ - ನಿರ್ವಹಣೆಗಾಗಿ ಹೋಟೆಲಿನಲ್ಲಿ ಸಪ್ಲೈಯರ್ ಆಗಿ. ಸಂತೆಯಲ್ಲಿ ಶರಬತ್ತು ಮಾರಿ. ಊದುಬತ್ತಿ ಮಾರಲು ಬಿರಿಗಾಲಲ್ಲಿ ಊರೂರು ಅಲೆದು. ಸಿನೆಮಾ ಟಾಕೀಜು. ನಾಟಕ ಕಂಪನಿಯಲ್ಲಿ ಗೇಟ್ ಕೀಪರ್ ಆಗಿ. ಲೆಕ್ಕ ಬರೆದು. ಬಾಲ್ಯದಲ್ಲಿಯೇ

ಮುಷ್ಟಿ ಮುಷ್ಟಿ ಕೂಡಿಸಿ ತಾಯಿಯ ಶ್ರಾದ್ಧ ಮಾಡಿದ ಹಲವಾರು ವಿವರಗಳು ಓದುಗರ ಸಂವೇದನೆಯನ್ನು ತೀವ್ರವಾಗಿ ತಟ್ಟುತ್ತವೆ. ವಿದ್ಯೆಗಾಗಿ - ಬದುಕಿಗಾಗಿ ನಡೆಸಿದ ಹೋರಾಟ. ಸರಿಕಂಡದ್ದನ್ನು ಮಾಡುವ ಸಾಹಸ. ಪ್ರಯೋಗಶೀಲತೆಯ ಪ್ರವೃತ್ತಿ ಬೆರಗು ಮೂಡಿಸುತ್ತವೆ. ಸಂಗೀತ. ನಾಟಕಗಳಲ್ಲಿ ವಿಶೇಷ ಒಲವುಳ್ಳ ಬಾಲಕ ಭೈರಪ್ಪನವರು ಗುಬ್ಬಿ ನಾಟಕ ಕಂಪನಿಯ 'ಕುರುಕ್ಷೇತ್ರ' ನಾಟಕ ನೋಡಲು ಹದಿನೆಂಟು ಮೈಲು ನಡೆದು ಆರಾಣೆ ಟಿಕೇಟಿನಲ್ಲಿ ರಾತ್ರಿಯಿಡೀ ಮೈಮರೆತದ್ದು. ಓದಿನ ವೆಚ್ಚ ಭರಿಸಲು ರಜಾ ದಿನಗಳಲ್ಲಿ ಹಳ್ಳಿ ಹಳ್ಳಿಗೆ ಹೋಗಿ ಕಥಾ ನಿರೂಪಣೆ ಮಾಡಿದ ಸಂಗತಿಗಳು ಅವರಲ್ಲಿ ಸುಪ್ತವಾಗಿದ್ದ ಕಥೆಗಾರ. ಕಲಾವಿದನನ್ನು ಬೆಳೆಸುವಲ್ಲಿ ಪ್ರೇರಣೆ ನೀಡಿವೆ. ಲೋಕಾನುಭವವನ್ನು ಆಳವಾಗಿಸಿವೆ. ಭವಿಷ್ಯದ ಆತಂಕ ಅಸ್ಪಷ್ಟತೆ. ದೈನಂದಿನ ಅಗತ್ಯ ಅಭದ್ರತೆಯ ಕಾರಣವಾಗಿ ವಿದ್ಯಾಭ್ಯಾಸ ಕುಂಠಿತಗೊಳಿಸಿ ದುಡಿಮೆಯ ದಾರಿಯನ್ನರಸಿ ಬೆಂಗಳೂರು - ಬಾಂಬೆಗೆ ಹೋದದ್ದು. ರೇಲ್ವೆ ಸ್ಟೇಶನ್ನಿನಲ್ಲಿ ಕೂಲಿ ಕೆಲಸ ಮಾಡಿ. ವಿದ್ಯಾರ್ಥಿಗಳಿಗೆ ಅಡಿಗೆ ಮಾಡಿ ದಿನ ದೂಡಿದ್ದು. ನಂತರ ಅಲೆಮಾರಿ ಸಾಧುಗಳೊಂದಿಗೆ ಕಾವಿ ಧರಿಸಿ ಅಲೆದಾಡಿದ್ದು. ಹತ್ತಿಕ್ಕಲಾಗದ ಜ್ಞಾನದ ಹಂಬಲದಿಂದ ಮೈಸೂರಿಗೆ ಮರಳಿ ಬಂದು ಅನಾಥಾಲಯದಲ್ಲಿದ್ದು ವಿದ್ಯಾಭ್ಯಾಸ ಮುಂದುವರಿಸಿ ಯುವರಾಜಾ ಕಾಲೇಜಿನಿಂದ ಬಿ.ಎ. ಆನರ್ಸ್ ಪ್ರಥಮ ಶ್ರೇಣಿಯಲ್ಲಿ ಮುಗಿಸಿ ತತ್ವಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದುಕೊಂಡು ರಾಷ್ಟ್ರಮಟ್ಟದಲ್ಲಿ ಗೌರವ ಸಂಪಾದಿಸಿದ ಅದ್ಭುತ ಸಾಧನೆಗಳು ಭೈರಪ್ಪನವರ ವ್ಯಕ್ತಿತ್ವದ ಕ್ರಿಯಾಶೀಲತೆ - ವಿದ್ವತ್ತು - ಪ್ರತಿಭೆ - ಪರಿಶ್ರಮದ ಶ್ರದ್ಧೆಯನ್ನು ಅರಿಯುವ ಸಾಧನೆಗಳಾಗಿರುತ್ತವೆ.

ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡ ನ್ಯಾಯ ನಿಷ್ಠುರತೆ. ಪ್ರಾಮಾಣಿಕತೆ. ನೈತಿಕಪ್ರಜ್ಞೆ ಅವರಿಗೆ ಅನೇಕ ಸಂಕಟಗಳನ್ನು ಸೃಷ್ಟಿಸಿವೆ. ತಿಳಿವು ಮೂಡಿದಾಗಿನಿಂದ ಉದ್ದಕ್ಕೂ ನಡೆಸಿದ ಹಲವು ಜ್ಞಾನಕ್ಷೇತ್ರಗಳ ವ್ಯಾಪಕ ಅಧ್ಯಯನವು ಅವರಲ್ಲಿ ಚಿಂತನಶೀಲತೆಯನ್ನು ರೂಢಿಸಿದೆ: ಸಂವೇದನೆಯನ್ನು ಸೂಕ್ಷ್ಮವಾಗಿಸಿದೆ. ಸಾಮಾಜಿಕ ವಾಸ್ತವ ಮತ್ತು ಮನುಷ್ಯ ಸಂಬಂಧಗಳ ತಾತ್ವಿಕ ಜಿಜ್ಞಾಸೆಗೆ ಪ್ರೇರಣೆ ನೀಡಿದೆ.

'ಸಾವು' ಭೈರಪ್ಪನವರನ್ನು ಕಾಡಿದ ಜ್ವಲಂತ ಪ್ರಶ್ನೆ. ಅದು ಅವರ ಅನೇಕ ಕಾದಂಬರಿಗಳಲ್ಲಿ ಜಿಜ್ಞಾಸೆಗೊಳಗಾದ ವಿಚಾರ. ಬಾಲ್ಯದಲ್ಲಿಯೇ ಕಾಡಿದ ಅಕ್ಕ - ಅಣ್ಣ - ತಾಯಿ - ತಮ್ಮನ ಸಾಲುಸಾಲು ಸಾವಿನ ಯಾತನೆ ಬಾಲಕ ಭೈರಪ್ಪನವರ ಮನಸ್ಸಿನ ಮೇಲೆ ಪ್ರಚಂಡ ಪರಿಣಾಮ ಬೀರಿದೆ. "ಸಾವೆಂದರೇನು ? ಯಾಕೆ ಬರುತ್ತದೆ... ಸಾವಿಗೆ ಧರ್ಮ ಕರ್ಮ - ನ್ಯಾಯ ನಿಲುವುಗಳ ನಿಯಮವಿದೆಯೆ ?" ಎನ್ನುವ ನಿಗೂಢ ಪ್ರಶ್ನೆಗಳು ಅವರ ಹಲವಾರು ಕಾದಂಬರಿಗಳಲ್ಲಿ ಗಂಭೀರ ಶೋಧನೆಗೆ ಒಳಪಟ್ಟಿವೆ. ನಿರ್ದಯ ಬಡತನದಲ್ಲಿಯೂ ಮಂಕಾಗದ ಮಾನವೀಯತೆ. ಸಿರಿವಂತಿಕೆಯಲ್ಲಿ ಸತ್ತುಹೋಗಿರುವ ಹೃದಯವಂತಿಕೆ. ಮನುಷ್ಯ ಸ್ವಭಾವದ ಕ್ಷುದ್ರತೆ - ದ್ವಂದ್ವ - ಕುಬ್ಜತೆಯನ್ನು ಕಂಡು ಅನುಭವಿಸಿ ಸ್ವಾನುಭವ ದ್ರವ್ಯವಾಗಿಸಿಕೊಂಡ ಭೈರಪ್ಪನವರನ್ನು ಬಾಲ್ಯದಿಂದಲೇ ಕಾಡಿದ ನೀತಿ - ಅನೀತಿ. ಪಾಪ -ಪುಣ್ಯ. ಧರ್ಮ - ಅಧರ್ಮದ ಜಿಜ್ಞಾಸೆ ಅವರ ಸಾಹಿತ್ಯದ ಕೇಂದ್ರ ಸಂವೇದನೆಯಾಗಿ ಆಕಾರಗೊಂಡದ್ದು ಆಕಸ್ಮಿಕವೇನಲ್ಲ.

ತಮ್ಮ ವಿದ್ವತ್ತು - ಚಾರಿತ್ರ್ಯ ಮತ್ತು ಮಾನವೀಯತೆಯಿಂದ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಪ್ರಭಾವಿಸಬಲ್ಲ ಅನೇಕ ಶಿಕ್ಷಕರು ತಮಗೆ ಗುರುಗಳಾಗಿ ಬೆಳಕು ತೋರಿದ್ದನ್ನು ಭೈರಪ್ಪನವರು ಕೃತಜ್ಞತೆಯಿಂದ ನೆನೆದಿದ್ದಾರೆ. ಕಾಲೇಜಿನಲ್ಲಿ ಗುರುಗಳಾಗಿದ್ದ ಯಾಮುನಾಚಾರ್ಯರು. ಶ್ರೀನಿವಾಸಯ್ಯಂಗಾರರು, ಟಿ. ನಾರಾಯಣರಾಯರು. ಕೆ. ಎಸ್. ಮೂರ್ತಿ. ಸ್ವಾಮಿ ಮೇಸ್ಟರು. ರಾಜಾರಾಯರು ಮುಂತಾದ ಹಲವು ಮಹನೀಯರ ನಡೆ - ನುಡಿಗಳು

ಭೈರಪ್ಪನವರನ್ನು ನೈತಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಪ್ರಬುದ್ಧಗೊಳಿಸಿದವು. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಶಾಸ್ತ್ರದ ಸೂಕ್ಷ್ಮತೆಗಳ ಅರಿವನ್ನು ಉಂಟು ಮಾಡಿದವು. ಗುರು - ಶಿಷ್ಯರ ಸಂಬಂಧದ ಆತ್ಮೀಯತೆ, ಸ್ನೇಹಿತರ ಶುದ್ಧ ಸ್ನೇಹ, ಹಿತೈಷಿಗಳ ನಿರಪೇಕ್ಷ ನೆರವು ಮುಂತಾದ ಮಾನವೀಯ ಅಂತಃಕರಣದ ಪ್ರಸ್ತಾಪಗಳು ಪ್ರಸ್ತುತ ಆತ್ಮಕಥಾನಕಕ್ಕೆ ಭಾವನಾತ್ಮಕ ಭಿತ್ತಿಯನ್ನೊದಗಿಸಿವೆ.

ಹುಟ್ಟಿನೊಂದಿಗೇ ಬಂದ ಸಂಗೀತಪ್ರೇಮ ಭೈರಪ್ಪನವರ ಸೃಜನಶೀಲತೆಯನ್ನು ಪ್ರಭಾವಿಸಿದೆ. ಸಂಗೀತ ಕಲೆಯನ್ನು ಅದರ ಪ್ರಬುದ್ಧ ನೆಲೆಯಲ್ಲಿ ಆಸ್ವಾದಿಸುವ ಭೈರಪ್ಪನವರು ಸಂಗೀತ - ಸಾಹಿತ್ಯ - ಕಲೆಗಳಲ್ಲಿ ಸಮಾನವಾಗಿರುವ ಸೃಜನಶೀಲ ಆಯಾಮಗಳ ಕುರಿತು ಗಂಭೀರವಾಗಿ ಚಿಂತಿಸಿದ್ದಾರೆ. ಕಲಾಸೃಷ್ಟಿಯ ರಹಸ್ಯಗಳನ್ನರಿಯುವಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ಅವರಿಗೆ ಪ್ರೇರಣೆ ನೀಡಿದೆ. ೧೯೫೪ ರ ಸಂದರ್ಭ. ಆಗಿನ್ನೂ ವಿದ್ಯಾರ್ಥಿಯಾಗಿದ್ದ ಭೈರಪ್ಪನವರು ಆಕಸ್ಮಿಕವಾಗಿ ಕೇಳಿಸಿಕೊಂಡ ಗಂಗೂಬಾಯಿ ಹಾನಗಲ್ಲರ ಸಂಗೀತದ ರಸಾನುಭವವನ್ನು ಹೀಗೆ ನೆನೆಯುತ್ತಾರೆ : " ಸಂಗೀತವೆಂದರೆ ಕೃತಿ ಇಲ್ಲ, ಪದವಿಲ್ಲ, ಅರ್ಥ ಮಾಡಿಕೊಳ್ಳುವಂಥ ಭಾಷೆ ಇಲ್ಲ.... ಯಾವ ಅರ್ಥವೂ ಇಲ್ಲದ, ಆದರೆ ನನ್ನ ಕಲ್ಪನೆಯು ಭಾವ ತುಂಬಿ ಅರ್ಥದ ಮಳೆಯನ್ನೇ ಕರೆಯುತ್ತಾ ಬಾನಿನೆತ್ತರದಲ್ಲಿ ಸ್ಫುಟಗೊಳ್ಳುವಂತೆ ಪ್ರಚೋದಿಸುವ ಜಾತಿಯದು " (ಪು. ೩೪೫). ಹೀಗೆ ಕಾಲದ ಅರಿವನ್ನು ಮರೆಸಿ ಭಾವವನ್ನು ತುಂಬಿ ಹರಿಯಬಲ್ಲ ಅರ್ಥಸ್ವಾರ್ಥವಿಲ್ಲದ ಬರಿಯ ಭಾವಗೀತವಾಗುವ ಗಾಯನದ ಬಗೆಗೆ ಅವರದು ಉತ್ಕಟ ಪ್ರೀತಿ. ತಮ್ಮ ಕಲ್ಪನೆಯನ್ನು ವಿಸ್ತಾರಗೊಳಿಸಿ, ಸೃಜನಶೀಲತೆಯ ನೆಲೆಗಳನ್ನು ಆಧ್ಯಾತ್ಮಿಕ ಸೂತ್ರದೊಂದಿಗೆ ಬೆಸೆಯಬಲ್ಲ ಭಾರತೀಯ ಸಂಗೀತವು ತಮ್ಮ ಪ್ರಜ್ಞೆಯನ್ನು ಹೆಚ್ಚಿಚ್ಚು ಸಂವೇದನಾಶೀಲವಾಗಿಸಿ, ಬರವಣಿಗೆಗೆ ಹದವನ್ನು, ಕಲ್ಪನೆಗಳಿಗೆ ಆಳ - ವಿಸ್ತಾರವನ್ನು ತುಂಬಿದ್ದನ್ನು ಒಂದೆಡೆ ಸ್ಮರಿಸುತ್ತಾರೆ : " ನಾನು ಕೇಳಿ ಮೆಚ್ಚಿದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ನನ್ನ ಕಾದಂಬರಿಯ ಸ್ವರೂಪವನ್ನು ಪರೋಕ್ಷವಾಗಿ ಪ್ರಭಾವಿಸಿದೆ. " (ಪು. ೪೫೭). " ನನ್ನ ಮನಸ್ಸಿನಲ್ಲಿ ಬೀಜಮಾತ್ರವಾಗಿ ಕಾಣಿಸಿಕೊಂಡಿದ್ದ ವಸ್ತುಗಳು ಮಳೆಗಾಲದ ನೀರು ಬಿಸಿಲುಗಳಿಗೆ ಸಿಕ್ಕಿದ ಬೀಜದಂತೆ ಒಡೆದು ಚಿಗುರಿ, ಎಲೆ ಕೊಂಬೆ ಕಾಂಡಗಳಾಗಿ ಬೆಳೆದು ಬಿಡುತ್ತಿದ್ದವು. ಆಗಲೂ ಅಷ್ಟೇ, ಈಗಲೂ ಅಷ್ಟೇ. ಶುದ್ಧ ಸಶಕ್ತ ಧೀಮಂತ ಕಲಾವಿದನ ಸಂಗೀತವನ್ನು ಕೇಳುತ್ತ ಕುಳಿತರೆ ನನ್ನ ಮನಸ್ಸು ಬಹುಬೇಗ ಲೌಕಿಕ ಜಂಜಡಗಳನ್ನು, ಬೌದ್ಧಿಕ ಕಗ್ಗಂಟುಗಳನ್ನು ಕಳಚಿಕೊಂಡು ಕಲ್ಪನೆಯು ಆಕಾಶಕ್ಕೆ ವ್ಯಾಪಿಸಿಬಿಡುತ್ತದೆ " (ಪು. ೪೫೮).

ಹುಬ್ಬಳ್ಳಿ ಭೈರಪ್ಪನವರಿಗೆ ಸಿಹಿನೆನಪುಗಳನ್ನು ಉಳಿಸಿದ ಊರು. ೧೯೫೮ ರಲ್ಲಿ ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿದರು. ಅವರ ಮೊದಲ ಕಾದಂಬರಿ ' ಧರ್ಮಶ್ರೀ ' ರೂಪುಗೊಂಡದ್ದು ಹುಬ್ಬಳ್ಳಿಯ ಪರಿಸರದಲ್ಲಿ. ಕೃಷ್ಣಭವನದ ವಾಸ್ತವ್ಯ, ಕರ್ಕಿಯವರ ಸ್ನೇಹ, ಸಹೋದ್ಯೋಗಿಯಾಗಿದ್ದ ಶ್ರೀನಿವಾಸ ತೋಪಖಾನೆಯವರ ವಿಶ್ವಾಸ, ಎಂ. ಎಸ್. ಕಸ್ತೂರಿಯವರಲ್ಲಿ ಸಂಗೀತಾಭ್ಯಾಸ, ಗೃಹಸ್ಥಾಶ್ರಮಕ್ಕೆ ನಾಂದಿಯಾದ ಮೊದಲ ಅನುಭವಗಳಿಗೆ ಹಿನ್ನೆಲೆಯಾಗಿ ಹುಬ್ಬಳ್ಳಿಯ ಪರಿಮಳವಿದೆ. ಹುಬ್ಬಳ್ಳಿ ನೀಡಿದ ಇನ್ನೊಂದು ಅವಿಸ್ಮರಣೀಯ ಸಂಗತಿಯೆಂದರೆ, ಸಾಹಿತ್ಯ ಭಂಡಾರದ ಪ್ರಕಾಶಕರಾದ ಗೋವಿಂದರಾಯರ ಪರಿಚಯವಾದುದು. ಭೈರಪ್ಪನವರ ಸಮಸ್ತ ಕೃತಿಗಳನ್ನು ಕಳೆದ ಐದು ದಶಕಗಳಿಂದ ಪ್ರಕಟಿಸುತ್ತಿರುವ ಪ್ರಕಾಶನ ಸಂಸ್ಥೆಯ ಮಾಲಿಕರಾದ ಗೋವಿಂದರಾಯರು ವೃತ್ತಿಯಲ್ಲಿ ಪ್ರಾಮಾಣಿಕತೆ - ಬದುಕಿನಲ್ಲಿ ಮೌಲ್ಯಗಳನ್ನು ನಂಬಿ ನಡೆದ ಹಿರಿಯ ಜೀವ. ತಮ್ಮಿಬ್ಬರಲ್ಲಿ ಅಖಂಡವಾಗಿ ಬೆಳೆದ, ವ್ಯವಹಾರಕ್ಕೂ ಮೀರಿದ ಶುದ್ಧ ಸ್ನೇಹ - ವಿಶ್ವಾಸ - ಭಾವನಾತ್ಮಕ ಸಂಬಂಧವನ್ನು ಕೃತಜ್ಞತೆಯಿಂದ ನೆನೆದಿದ್ದಾರೆ.

ತತ್ತ್ವಶಾಸ್ತ್ರದ ವಿದ್ಯಾರ್ಥಿಯಾಗಿ ನಂತರ ಅಧ್ಯಾಪಕರಾಗಿ ಮೂರೂವರೆ ದಶಕಗಳ ಕಾಲ ತತ್ತ್ವಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ. ರಾಷ್ಟ್ರ - ಅಂತರಾಷ್ಟ್ರ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ತಮ್ಮ ಅಧ್ಯಯನದ ನೆಲೆಗಳನ್ನು ವಿಸ್ತೃತಗೊಳಿಸಿದ. ಪ್ರೌಢವಾಗಿಸಿದ ಅಂದಿನ ಅನೇಕ ಪ್ರಾಧ್ಯಾಪಕರನ್ನು ಕುರಿತು ನೀಡುವ ವಿವರಗಳಲ್ಲಿ ಭಾರತದ ಅಂದಿನ ತತ್ತ್ವಶಾಸ್ತ್ರದ ವಿದ್ವತ್ ಪರಂಪರೆಯ ಆತ್ಮೀಯ ಚಿತ್ರಣವಿದೆ.

ಮನುಷ್ಯ ಜೀವನದ ಜ್ವಲಂತ ಸಮಸ್ಯೆಗಳನ್ನು ಮತ್ತು ಮಾನವ ಸ್ವಭಾವ ಸಂಸ್ಕೃತಿಯ ಸ್ವರೂಪವನ್ನು ಜೀವನಾನುಭವದ ಗಟ್ಟಿ ನೆಲೆಯಲ್ಲಿ ಶೋಧಿಸುವ ಭೈರಪ್ಪನವರ ಕಾದಂಬರಿಗಳು ಓದುಗರ ಬುದ್ಧಿ - ಭಾವವನ್ನು. ಇಡಿಯಾಗಿ ಆವರಿಸಿಕೊಂಡು. ಪ್ರಚೋದಿಸಿ. ಸತ್ಯದ ಅನುಭೂತಿಯನ್ನು ವಾಸ್ತವದ ವಿಭಿನ್ನ ಆಯಾಮಗಳನ್ನು ಪರಿಚಯಿಸುತ್ತವೆ. 'ಪರ್ವ'. 'ಗೃಹಭಂಗ'. 'ಸಾರ್ಥ'. 'ದಾಟು'. 'ತಂತು' ಕಾದಂಬರಿಗಳು ರಾಷ್ಟ್ರಮಟ್ಟದ ಪ್ರಸಿದ್ಧಿ ಪಡೆದಿವೆ. ಒಂದೊಂದು ಕಾದಂಬರಿಯ ರಚನೆಗಾಗಿ ವ್ರತನಿಷ್ಠೆಯಿಂದ ಪೂರ್ವಸಿದ್ಧತೆ ನಡೆಸಿರುವುದು ಭೈರಪ್ಪನವರ ಅನನ್ಯತೆ. 'ಪರ್ವ' ರಚನೆಗಾಗಿ ಹಿಮಾಲಯವನ್ನು ಹತ್ತಿ ಇಳಿದರೆ, 'ತಂತು'ವಿಗಾಗಿ ದೇಶ - ವಿದೇಶ ಸುತ್ತಿದ್ದಾರೆ. ದಿನಕ್ಕೆ ಹತ್ತು ಹನ್ನೆರಡು ಗಂಟೆಗಳಂತೆ ವರ್ಷಗಳುದ್ದಕ್ಕೂ ಅಧ್ಯಯನ ನಡೆಸಿದ್ದಾರೆ. 'ದೇಶ ಸುತ್ತಿ. ಕೋಶ ಓದಿ' ಸಂಪಾದಿಸಿದ ವಿಸ್ತೃತ ಅನುಭವವನ್ನು ಸಾಹಿತ್ಯಕೃತಿಗಳಲ್ಲಿ ಪಾಕವಿಳಿಸಿದ್ದಾರೆ. ವರ್ಷಕ್ಕೆ ನಾಲ್ಕಾರು ಬಾರಿ ಭಾರತವನ್ನು ಸಮಗ್ರವಾಗಿ ಸುತ್ತಾಡಿದ್ದಾರೆ. ಹಳ್ಳಿ - ಪಟ್ಟಣಗಳ ಬದುಕಿನ ವಿವರಗಳನ್ನು ವಿಭಿನ್ನ ಸಂಸ್ಕೃತಿ - ಸಮುದಾಯದಲ್ಲಿರುವ ವೈವಿಧ್ಯ - ವೈಶಾಲ್ಯ - ಏಕತೆಯ ಮಿಡಿತವನ್ನು ಗುರುತಿಸಿದ್ದಾರೆ. ಆಧುನಿಕತೆಯ ಫಲಶ್ರುತಿಯಾದ ವಾಣಿಜ್ಯ ಸಂಸ್ಕೃತಿಯ ವಿಜೃಂಭಣೆಯಲ್ಲಿ ಶಕ್ತಿಹೀನವಾಗುತ್ತಿರುವ ಭಾವನಾತ್ಮಕ ಬದುಕಿನ ದುರಂತಗಳು ಹುಟ್ಟಿಸಿದ ವಿಷಾದ. ನೈತಿಕ ತುಮುಲ. ಬೌದ್ಧಿಕ ಸಂಘರ್ಷ. ಆಧ್ಯಾತ್ಮಿಕ ಎಚ್ಚರಗಳು ಅವರ ಕಥನ ಲೋಕಕ್ಕೆ ವೈಚಾರಿಕ - ತಾತ್ವಿಕ ನೆಲೆಗಳನ್ನು ಜೋಡಿಸಿವೆ.

ಸಾಹಿತ್ಯದ ಸೃಜನಾತ್ಮಕ ನೆಲೆಗಳ ಕುರಿತು 'ಭಿತ್ತಿ'ಯಲ್ಲಿ ಭೈರಪ್ಪನವರು ಪ್ರಸ್ತಾಪಿಸಿದ ವಿಚಾರಗಳಲ್ಲಿ ಅವರ ಸಾಹಿತ್ಯಮೀಮಾಂಸೆ ವ್ಯಕ್ತವಾಗಿದೆ. ಅಲ್ಲಿ ಕಲಾಸೃಷ್ಟಿಯ ಒಳನೋಟಗಳಿವೆ. "ಕಲಾವಿದನ ಮನಸ್ಸು ರಾಗ ದ್ವೇಷಗಳಿಂದ ಸ್ವಂತ ಅನುಭವದಿಂದ ಹುಟ್ಟುವ ಕೋಪತಾಪಗಳಿಂದ ಮುಕ್ತವಾಗಿಲ್ಲದಿದ್ದರೆ ಸೃಷ್ಟಿಯಾಗುವುದು ಶುದ್ಧ ಕಲೆಯಾಗುವುದಿಲ್ಲ" (ಪು. ೫೦೨) ಎನ್ನುವ ಭೈರಪ್ಪನವರಿಗೆ ಸಾಹಿತ್ಯವು ವ್ಯಕ್ತಿನಿಷ್ಠ ನೆಲೆಯಲ್ಲಿ ಆಕಾರಗೊಳ್ಳುವ ಸಮಷ್ಟಿ ಸಂವೇದನೆ.

ನವ್ಯೋತ್ತರದ ದಲಿತ ಸಾಹಿತ್ಯ ಚಳವಳಿಯು. ಅನುಭವದ ಅಧಿಕೃತತೆಯನ್ನು ಜಾತಿಗೆ ಸೀಮಿತಗೊಳಿಸಿ. ಸೃಜನಶೀಲತೆಯ ಆಯಾಮವನ್ನು ಕುಬ್ಜಗೊಳಿಸಿದ್ದರ ಕುರಿತು ಇಲ್ಲಿ ಸಾಕಷ್ಟು ಚರ್ಚೆಗಳಿವೆ. ಸಾಹಿತಿಯ ಅನುಭವಲೋಕವು ಜಾತಿ - ಪ್ರದೇಶ - ಪರಿಸರದ ಮಿತಿಗೆ ಸ್ಥಗಿತಗೊಳ್ಳುವ ಅಪಾಯವು ಲೇಖಕರ ವ್ಯಕ್ತಿತ್ವದ ಮಿತಿಯಾದಾಗ. ಜೀವನಾನುಭವದ ವಿಸ್ತರಣೆಯಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನದ ಅಗತ್ಯ ಮನವರಿಕೆಯಾಗುತ್ತದೆ. ಕಾಲ - ದೇಶ - ಸಂದರ್ಭಗಳ ಮಿತಿಯನ್ನು ಮೀರದ ಲೇಖಕ ಶ್ರೇಷ್ಠವಾದುದನ್ನು ನೀಡಲಾರ ಎನ್ನುವ ಭೈರಪ್ಪನವರ ನಂಬಿಕೆ ಅವರ ಅನೇಕ ಮಾತುಗಳಲ್ಲಿ ವ್ಯಕ್ತವಾಗಿದೆ. ಮನುಷ್ಯ ಪ್ರಜ್ಞೆಯ ಅಂತರ್ನೋಟವನ್ನು ಸಾಧಿಸಿಕೊಂಡು. ಬದುಕನ್ನು ಸಮಗ್ರತೆಯ ಪಾತಳಿಯಲ್ಲಿ ಅರ್ಥೈಸಿಕೊಳ್ಳುವ ಸಾಹಿತಿಯ ಪ್ರತಿಭಾಸಾಮರ್ಥ್ಯದ ಬಗೆಗೆ ಅವರದು ದೃಢ ನಿಲುವು. "ಸಾಹಿತ್ಯದ ಕೆಲಸವೆಂದರೆ ಮನುಷ್ಯನ ಅಂತರಾಳಕ್ಕೆ ಪ್ರವೇಶ ದೊರಕಿಸಿ ಕೊಡುವುದು. ಪ್ರೀತಿ ಅನುಕಂಪ ಕರುಣೆಗಳನ್ನು ಹುಟ್ಟಿಸುವುದು. ನಮ್ಮ ಕವಿ ಅನುಭವವು ಏನೇ ಇರಲಿ. ಪ್ರತಿಯೊಂದು ಪಾತ್ರದ ಅಂತರಂಗವನ್ನು

ಹೊಕ್ಕು ಅನುಕಂಪದಿಂದ ಬಿಚ್ಚಿಡದಿದ್ದರೆ ಅದು ಮೇಲ್ಮಟ್ಟದ ಸಾಹಿತ್ಯವಾಗುವುದಿಲ್ಲ" (ಪು. ೫೫೦). ವೈಯಕ್ತಿಕ ಸ್ವಾತಂತ್ರ್ಯವನ್ನು ಬಲಿಗೊಡದೇ. ಶುದ್ಧ ಸಾಹಿತ್ಯಸೃಷ್ಟಿಯ ಏಕಮೇವ ನಿಷ್ಠೆಯಿಂದ ಸಾಹಿತ್ಯ ರಚಿಸಿದ ಭೈರಪ್ಪನವರು ಸಾಹಿತ್ಯದ ಜಾತಿ - ವರ್ಣ - ಲಿಂಗಾಧಾರಿತ ವರ್ಗೀಕರಣದ ಬಗೆಗೆ ವ್ಯಕ್ತಪಡಿಸುವ ಧೋರಣೆಗಳು ಸಮಕಾಲೀನ ಸಾಹಿತ್ಯ ತತ್ವಗಳ ಮರುಚಿಂತನೆಗೆ ಪ್ರೇರೇಪಿಸುತ್ತವೆ. "ಜಾತಿ ಮೊದಲಾದ ವ್ಯತ್ಯಾಸ ವಿಂಗಡಣೆಗಳು ಒಂದು ಸಾಹಿತ್ಯಸೃಷ್ಟಿಯ ಹೊರ ಆವರಣಗಳು ಮಾತ್ರ. ಆಶೆ ನಿರಾಶೆ ಹತಾಶೆ ಪ್ರೀತಿ ದ್ರೋಹ ನಿಜ ಸುಳ್ಳು ಮೊದಲಾದ ಪ್ರವೃತ್ತಿಗಳು ಎಲ್ಲ ಜಾತಿಯವರಲ್ಲೂ ಇರುತ್ತವೆ. ಹೀಗೆ ಪಾತ್ರಗಳ ಮೂಲಭೂತ ಸ್ವಭಾವವನ್ನು ಹಿಡಿದು ವ್ಯಕ್ತಪಡಿಸಿದರೆ ಅದು ಎಲ್ಲ ಜಾತಿಯ ಓದುಗರ ಹೃದಯವನ್ನು.... ಎಲ್ಲ ಭಾಷೆಗಳ ಎಲ್ಲ ದೇಶಗಳ ಹೃದಯವನ್ನು ತಟ್ಟುತ್ತದೆ" (ಪು. ೫೪೯). "ಶುದ್ಧ ಸಾಹಿತ್ಯದ ನಿಷ್ಠೆ ಬಂದವನು ಘೋಷಣೆ ಚಳವಳಿ ಮೊದಲಾದವುಗಳಿಗೆ ತನ್ನನ್ನು ತಾನು ಸಮರ್ಪಿಸಿಕೊಂಡು ಕೂರಲಾರ. ಚಳವಳಿಗಳಿಗೆ ಪ್ರಾಯೋಗಿಕ ಮಹತ್ವವಿರಬಹುದು. ಆದರೆ ಅವು ಬಹುತೇಕ ಸೃಜನಶೀಲತೆಯನ್ನು ಹೊಸಕಿಹಾಕುತ್ತವೆ.... ಸೃಜನಶೀಲತೆಗೆ ಹೆಣ್ಣು ಗಂಡೆಂಬ ವ್ಯತ್ಯಾಸವಿಲ್ಲ. ಅದು ಶುದ್ಧ ಸೃಜನಶೀಲತೆ. ಲೇಖಕರು ತಾವು ಕಂಡು ಅನುಭವಿಸಿದ ಜೀವನಾನುಭವವನ್ನೇ ಕುರಿತು ಬರೆಯುವುದು ಸಹಜ. ಆದರೆ ಬರವಣಿಗೆ ಸೃಜನಶೀಲವಾದಾಗ ತನ್ನ ಅನುಭವದ ಸೀಮಿತತೆಯನ್ನು ದಾಟಿ ತನ್ನ ಜಾತಿ - ಮತ -ವರ್ಗ - ಲಿಂಗ - ದೇಶ ಮೊದಲಾದ ಭೇದಗಳನ್ನು ಮೀರಿರುತ್ತದೆ" (ಪು. ೫೫೦).

ಸಂಚಾರವು ಸಾಹಿತ್ಯ - ಸಂಗೀತದಷ್ಟೇ ಭೈರಪ್ಪನವರ ಪ್ರಜ್ಞೆಯನ್ನು ತೀವ್ರವಾಗಿ ಪ್ರಭಾವಿಸಿದ ಇನ್ನೊಂದು ಆಸಕ್ತಿ. ಮನುಷ್ಯರನ್ನು ವಿಭಿನ್ನ ಸಂಸ್ಕೃತಿಯನ್ನು ತೌಲನಿಕವಾಗಿ ಅರಿಯುವಲ್ಲಿ ಅವರು ಮಾಡಿದ ದೇಶ - ವಿದೇಶಗಳ ಪ್ರವಾಸ ಪೂರಕವಾಗಿದೆ. ಜಗತ್ತಿನ ಹಲವಾರು ದೇಶಗಳನ್ನು ಹಲವಾರು ಬಾರಿ ಸುತ್ತಿ ಪಡೆದ ವ್ಯಾಪಕ ಲೋಕಾನುಭವ ಅವರ ಕಾದಂಬರಿಗಳ ವೈಚಾರಿಕ ಆಕೃತಿಯನ್ನು ಆಳವಾಗಿಸಿದೆ. ಪ್ರಕೃತಿ - ಪರ್ವತ - ಗಿರಿ ಶಿಖರ - ಬಯಲು - ಬಾನು - ಸಮುದ್ರ ಅವರ ಕಲ್ಪನೆಗಳಿಗೆ ಭವ್ಯತೆಯನ್ನು ತುಂಬಿವೆ. ಹಿಮಾಲಯದ ವಿಸ್ತಾರ ಔನ್ನತ್ಯ ಗಾಂಭೀರ್ಯ ಅವರ ಭಾವನೆಗಳನ್ನು ಉನ್ನತವಾಗಿಸಿವೆ. ಕೈಲಾಸ - ಮಾನಸ ಸರೋವರದ ರುದ್ರ ಮನೋಹರ ಸೌಂದರ್ಯ ಆಧ್ಯಾತ್ಮಿಕತೆಯ ಅರಿವನ್ನು ಎಚ್ಚರಿಸಿವೆ. ಬದುಕಿನ ಜಂಜಡಗಳನ್ನು ಹಗುರವಾಗಿಸಿ ಸಾಂತ್ವನ ನೀಡಿವೆ.

ಒಟ್ಟಾರೆ ಕೊಲುವೆನೆಂಬ ಬದುಕನ್ನು ವಿವೇಚನೆ - ಸಂಯಮ - ಪರಿಶ್ರಮದಿಂದ ಗೆಲುವಾಗಿಸಿಕೊಂಡು. ಪ್ರೀತಿ - ಅನುಕಂಪ - ಅನುಭವದಿಂದ ಅರ್ಥೈಸಿ ಅರಳಿಸಿಕೊಂಡ ಸಾರ್ಥಕ ಬದುಕಿನ ಸಾರವೇ 'ಭಿತ್ತಿ'.

▼

ಡಾ. ಶಾಂತಾ ಇಮ್ರಾಪುರ.
ಪ್ರವಾಚಕರು. ಕನ್ನಡ ಅಧ್ಯಯನ ಪೀಠ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ - ೩

ಜಗದೀಶ ಮಂಗಳೂರಮಠ

ಚಟಚಟನೆ ಸಿಡಿದವು ಮಾತು
ಬೆಂಕಿಯರುಳುಗಳಾಗಿ
ಉರಿದವು ಎದೆಯ ಒಲೆಯಲ್ಲಿ ಧಗಧಗನೆ
ಹೊತ್ತಿ ಹಲವಾರು ಋತುಗಳ
ಕೂಡಿಟ್ಟ ಕಸ ಕಡ್ಡಿ ಕಲ್ಮಷ ರಾಗರಾಶಿ

ಧಗೆಯಾರಿ ಬೂದಿ ಅಳಿದ ಮೌನದಂಗಳದಲ್ಲಿ
ಮತ್ತೆ ಥಣ್ಣನೆಯ ವಿಹ್ವಲದ ಗಾಳಿ
ಸೆಳೆದಪ್ಪಿಕೊಳ್ಳುವ ಕೋಮಲದ ದಾಳಿ

ಅಗ್ನಿಸೂರ್ಯನ ಕರೆದು ನುಂಗಿದ ಕಡಲ
ನೀಲಿ ಮೈ ಮೇಲೆ ಬಂಗಾರ ಹುಡಿ ಹರಡಿದ ಸಂಜೆ–
ಬರುವ ರಾತ್ರಿಯ ಮೈ ಚಂದ್ರಮನ ತಂಪು ಕನ್ನಡಿ
(ಅಮವಾಸ್ಯೆಯಾದರೆ ಚಿಕ್ಕೆಗಳ ಬೆಳಕ ಜರಡಿ)

ಪುಳಕಗೊಂಡ ಕಡಲೊಡಲಲ್ಲಿ ಪ್ರೀತಿ ಘೋರ್ಗರೆತ
ಉಕ್ಕುಕ್ಕಿ ಮರಳ ದಂಡೆಯ ಮೇಲೆ ನುಗ್ಗಿನುಗ್ಗಿ
ನೊರೆ ಬಿಟ್ಟು ತೆರೆತೆರೆಗಳುರುಳಿನ
ತಂಪು ಸವಾರಿ
ಗಾಳಿ ಗಂಧದ ಚವರಿ

ಗರಳ ಕುಡಿದಿದ್ದೇವೆ ಬದುಕಿದ್ದೇವೆ
ನಾ ನೀಲಕಂಠನಾಗಿ
ನೀ ನೀಲಕಂಠೆಯಾಗಿ
ಪುರಾಣದಲ್ಲೇಕೆ ಉಳಿದೆ ಬರಿ ಸೀತೆ ದ್ರೌಪದಿಯಾಗಿ

ಬೆಳೆದಿದ್ದೇವೆ ಹಸಿರು ಹೂ ಹಣ್ಣು ಧವಳ ಧಾನ್ಯ
ಮುತ್ತುರತ್ನಗಳ ಬುದ್ಬುದ ಆಮೋದಗಳ ರಾಶಿರಾಶಿ

ಬಿಗಿಯಪ್ಪುಗೆಯ ಬಿಸಿ ಕರಗದಿರಲಿ
ತುಟಿಯ ಜೇನೆಂದಿಗೂ ತೀರದಿರಲಿ
ಸಾಗುತ್ತಿರಲಿ ಕಾಲ - ಕೋಲಾಹಲದ ಅನ್ಯ
ನನ್ನ ನಿನ್ನ ಬದುಕೆಂದೆಂದಿಗೂ ಧನ್ಯ

▼

ಜಗದೀಶ ಮಂಗಳೂರಮಠ
ಮಮತಾ, ೧೧೦೩, ಕೆ.ಇ.ಸಿ. ೪ ನೇ ಹಂತದ ಬಡಾವಣೆ. ಗೋಕುಲ ರಸ್ತೆ. ಹುಬ್ಬಳ್ಳಿ - ೩೦

ಯು. ಆರ್. ಅನಂತಮೂರ್ತಿಯವರ ' ದಿವ್ಯ '

ಮಾಧವ ಕುಲಕರ್ಣಿ

ಅನಂತಮೂರ್ತಿಯವರ ತೀರ ಇತ್ತೀಚಿನ ಕಾದಂಬರಿ ' ದಿವ್ಯ ' ಇನ್ನೂ ಸಾಕಷ್ಟು ವಿಮರ್ಶೆಯ ಪರೀಕ್ಷೆಗೆ ಮತ್ತು ವಿಶ್ಲೇಷಣೆಗೆ ಒಳಗಾಗಬೇಕಾದ ಕಾದಂಬರಿ. ಇಲ್ಲಿಯ ಜೀವನವು ವ್ಯಕ್ತವಾಗುವ ' ಬಗೆ ' ಯಲ್ಲಿ ನಾವೀನ್ಯತೆ ಇದೆ. ಈ ಕಾದಂಬರಿಯ ಬೆನ್ನಿಗೆ ಈ ಮಾತುಗಳಿವೆ : " ....ಈ ಕಾದಂಬರಿಯಲ್ಲಿ ನಾವು ಎದುರಾಗುವ ಲೋಕವೇನೂ ಅಪೂರ್ವ - ಅಪರಿಚಿತವಾದದ್ದಲ್ಲ. ಅನಂತಮೂರ್ತಿಯವರ ಹಿಂದಿನ ಕಥನಗಳಲ್ಲಿ ಕಾಣಿಸಿಕೊಂಡ ಸ್ಥಳ-ಪಾತ್ರ ಸಮುಚ್ಚಯವೇ ಈ ಕಾದಂಬರಿಯಲ್ಲೂ ಇನ್ನೊಂದು ರೀತಿಯಲ್ಲಿ ಕಾಣಿಸಿಕೊಂಡಿದೆ. ಆದರೆ. ಅದನ್ನು ನೋಡುತ್ತಿರುವ ರೀತಿ ಅಥವಾ ಅದನ್ನು ಕಥಿಸುತ್ತಿರುವ ಕ್ರಮ ಮಾತ್ರ ಹಿಂದೆಂದಿಗಿಂತ ವಿಶೇಷವಾದದ್ದು. " ಹಾಗೆಯೇ ಲೇಖಕರ ' ಮೊದಲ ಮಾತು ' ಗಳಲ್ಲಿಯ ಈ ಮಾತುಗಳನ್ನೂ ಈ ಕಾದಂಬರಿಯ ಚರ್ಚೆಗೆ ಮುನ್ನ ಗಮನಿಸಬೇಕು. " ....ಕಾದಂಬರಿಯೊಂದನ್ನು ಬರೆಯುವುದೆಂದರೆ ಇಷ್ಟರ ವರೆಗೆ ವ್ಯಕ್ತವಾದ್ದನ್ನೆಲ್ಲ ಬೆನ್ನಿಗಿಟ್ಟುಕೊಂಡೇ ಅಗೋಚರವಾದ್ದಕ್ಕೆ. ಅವ್ಯಕ್ತಕ್ಕೆ ಕೈ ಚಾಚುವುದು. ನಮ್ಮ ಹಠದ ವೈಚಾರಿಕತೆಯನ್ನು ವಿಮರ್ಶೆಗೆ ಗುರಿಪಡಿಸಿ ಅನುಮಾನಿಸುವುದು. ನಮ್ಮೊಳಗಿನ ಪಿಸುಮಾತಿಗೆ ಕಿವಿಕೊಟ್ಟು ಆಲಿಸುವುದು. ಅಂದರೆ. ಮನಸ್ಸಿಗೆ ಹಿತಕರವಾದ ' ಓಪಿನಿಯನ್ ' ಗಳನ್ನೂ. ಈ ಕಾಲದಲ್ಲಿ ಸುಲಭವಾಗಿ ಸಲ್ಲುವಂತೆ ತೋರುವ ಅಭಿಪ್ರಾಯ ಗಳನ್ನೂ ನಮ್ಮ ಏಕಾಂತದಲ್ಲಿ ಮೀರುವ ಧೈರ್ಯ ಮಾಡದೆ ಇದು ಸಾಧ್ಯವಾಗಲಾರದು. ನನಗೆ ಈ ಕೃತಿಯಲ್ಲಿ ಇದು ಎಷ್ಟು ಸಾಧ್ಯವಾಗಿರಬಹುದು ಎಂಬುದನ್ನು ಓದುಗರು ಹೇಳಬೇಕು. " ಇಲ್ಲಿ ಪುಸ್ತಕದ ಬೆನ್ನಿಗೆ ಬರೆದ ಮಾತಿಗಿಂತ ಅನಂತಮೂರ್ತಿಯವರು ಹೇಳುವ ಈ ಪೂರ್ವಭಾವಿ ಮಾತುಗಳು ಬಹಳ ಮಹತ್ವದವಾಗಿದೆ. ಇದು ಏಕೆ ಎಂದು ಹೇಳುತ್ತೇನೆ : " ....ಮನಸ್ಸಿಗೆ ಹಿತಕರವಾದ ' ಓಪಿನಿಯನ್ ' ಗಳನ್ನೂ... ಅಭಿಪ್ರಾಯಗಳನ್ನೂ... ಏಕಾಂತದಲ್ಲಿ ಮೀರುವ ಧೈರ್ಯ " ಎಂದೊಡನೆ ಈ ಮಾತಿಗೆ ಎರಡು ಟಿಸಿಲುಗಳು ಒಡೆಯಬಹುದು. ಇಷ್ಟೊಂದು ಪ್ರಖರವಾದ ಚಿಂತಕರಾದ ಇವರಿಗೆ ತಮ್ಮ ಏಕಾಂತದಲ್ಲಿ ತಮ್ಮ ಅಭಿಪ್ರಾಯಗಳ ಬಗೆಗೇ ಗುಮಾನಿಯೆ ಎಂಬ ಮೊದಲ ಟಿಸಿಲು ಹಾಗೂ ಈ ಲೇಖಕನು ತನ್ನ ಅಭಿಪ್ರಾಯಗಳ ಹಿಂದೆ ' ಹಠವೊಂದು ' ಕೆಲಸ ಮಾಡುತ್ತಿರಬಹುದೆ ಎಂಬ ವಿನೀತ ಭಾವ ತಾಳಿ. ಅದನ್ನೂ ಮೀರಿ ತನ್ನನ್ನು. ತನ್ನ ಅನುಭವಗಳನ್ನು ಪರೀಕ್ಷಿಸಿಕೊಳ್ಳಬೇಕಾದರೆ ಸೃಷ್ಟಿಕ್ರಿಯೆಯ ಮೂಸೆಯೊಂದೇ ಯೋಗ್ಯವಾದದ್ದು ಎಂದು ಪರಿಭಾವಿಸಿರುವ ಇನ್ನೊಂದು ಟಿಸಿಲು. ಈ ಕಾದಂಬರಿಯನ್ನು ಓದುತ್ತ ಹೋದಂತೆ ಇದು ಕೇವಲ ' ಗುಮಾನಿ ' ಯ ಪ್ರಶ್ನೆಯಲ್ಲ ಎಂಬುದು ಸ್ಪಷ್ಟವಾಗುವುದರ ಜೊತೆಜೊತೆಯಲ್ಲೇ ಚಿಂತನಶೀಲತೆಯನ್ನು ಮೀರಿದ ಅನೂಹ್ಯಗಳಲ್ಲಿಯ ಭಾವಗೀತಾತ್ಮಕವಾದ ಜೀವನವನ್ನು ತೆಕ್ಕೆಗೆ ತೆಗೆದುಕೊಳ್ಳುವ ಪ್ರಯತ್ನ ಇಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಬೆನ್ನಿಗೆ ಬರೆದ ಮಾತುಗಳಲ್ಲಿ ವ್ಯಕ್ತವಾಗಿರುವ ಹೊಸತನದ ವಿಚಾರ ಈ ಬಗೆಯದು ಎಂದು ಗೊತ್ತಾಗುತ್ತದೆ. ಕಾದಂಬರಿಯ ಮೊದಲಿನ ಭಾಗವಂತೂ ನಾನು ಹೇಳುವ ಭಾವಗೀತಾತ್ಮಕ ತಾದಾತ್ಮ್ಯಕ್ಕೆ ಕನ್ನಡಿ ಹಿಡಿದಂತಿದೆ. ಇದನ್ನು ಹೇಳಲು ಕಾರಣವೆಂದರೆ. ಅನೂಹ್ಯವಾದುದನ್ನು - ರಾಜಕೀಯ ಸನ್ನಿವೇಶವನ್ನು ಕೂಡ ಉಪಯೋಗಿಸಿ ಕಾದಂಬರಿ ಬರೆದ ಈ ಲೇಖಕ - ಈಗ ಹೀಗೆ ' ಏಕಾಂತ ' ದ ಮಾತನಾಡುತ್ತ ತನ್ನನ್ನೇ ಮೀರಿ ಕಾಣುವ ' ಕಾಣ್ಕೆ ' ಯ ಕಡೆಗೆ ಬರವಣಿಗೆಯಲ್ಲಿ ' ತುದಿಗಾಲ ದಿಗಿಲಿ ' ನಲ್ಲಿ ಕೂಡುವ ಬಗೆ ಇದೆಯಲ್ಲ ಅದು ' ಸತ್ಯದ

ಕನ್ನಡ ಸಾಹಿತ್ಯಕ್ಕೆ' ಅನನ್ಯವಾದದ್ದು. ಹೀಗಾಗಿಯೇ ಈ ಕಾದಂಬರಿಯ ಚರ್ಚೆಯು ಸಾಂಸ್ಕೃತಿಕವಾಗಿ ಮಹತ್ವದ್ದಾಗಿದೆ.

ಇಲ್ಲಿ ಪ್ರಾರಂಭದಲ್ಲಿ ಬರುವ ಜೀವನದಲ್ಲಿ ಹಾಗೆ ನೋಡಿದರೆ ಒಂದು ಬಗೆಯ ಏಕತಾನತೆ ಇದೆ. ಆದರೆ ಅದು ಬೋರ್ ಹೊಡೆಯದಂತೆ ಯಕ್ಷಗಾನ 'ಪ್ರಸಂಗ'ದಲ್ಲಿಯ ಮಾತುಗಳನ್ನೊಳಗೊಂಡ ಪ್ರಮುಖ ಪಾತ್ರ ಕೇಶವನ ಮಾತುಗಳಲ್ಲಷ್ಟೇ ಅಲ್ಲ. ಅವರ ಯೋಚನಾ ಕ್ರಮದಲ್ಲಿಯೂ ಈ 'ವಾಕ್ ಸರಣಿ' ಬಿಂಬಿತವಾಗಿರುವುದು ಮತ್ತು ಆಡಿದ ಮಾತುಗಳಿಗಿಂತ ಆಡದ ಮಾತುಗಳಲ್ಲಿಯ ಧ್ವನಿ ಆ ಏಕತಾನತೆಯನ್ನು ಕೂಡ ಅರ್ಥಪೂರ್ಣ ಮಾಡುತ್ತವೆ. ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಭಾಗಗಳೋ ಎನ್ನುವಂತೆ ಕೆಲವು ಸನ್ನಿವೇಶಗಳು, ಭಾವನೆಗಳು ಮತ್ತು 'ಚಿತ್ರ'ಗಳು ಮೂಡಿ ಬಂದಿದ್ದರೂ ಕೂಡ. ಇದು ಕಾರಂತ ಧೋರಣೆಯ ಕಾದಂಬರಿಯಲ್ಲ ಎಂಬುದು ಮನದಟ್ಟಾಗಲು ಕಾರಣ ಇಲ್ಲಿ ಕಾದಂಬರಿಯ ವಸ್ತುವಿಗೆ ಭಾಷೆಯನ್ನು ತೊಡಿಸಿರುವ ರೀತಿ ಮತ್ತು ಕಾಲವನ್ನು ಸಹಜವೆಂಬಂತೆ ಕಲಿಸುತ್ತ ಹೋಗುವ ರೀತಿ. ಏಕಕಾಲದಲ್ಲಿ ಸಂಭವಿಸುತ್ತಿರುವ ಬದುಕು ರೂಪಕವಾಗುತ್ತ. ಪಿಸುನುಡಿಯುತ್ತ. ಮುದ ಕೊಡುತ್ತ ಮತ್ತು ಹೇಳಲಾಗದ್ದರತ್ತ ಕೈಚಾಚಿ ಭಾವಗೀತೆಯಾಗುತ್ತ ಮುಂದುವರಿಯುವುದು.

'ಸಾವು' ಕಾದಂಬರಿಯ ಕೇಂದ್ರ ಸ್ಥಾನದಲ್ಲಿದೆ. ಹಾಗೆಂದು ಇದು ದುರಂತದ ಬಗ್ಗೆ ಬರೆದ ವಿಷಾದ ಛಾಯೆಯ ಕಾದಂಬರಿಯೂ ಅಲ್ಲ. ಗೌರಿ. ಗಂಗೆಯರು. ಅಕ್ಕುವಿನ ಸವತಿಯ ಮಕ್ಕಳು. ಆದರೆ ಗಂಡನನ್ನು ಬಹುಬೇಗ ಕಳೆದುಕೊಂಡು. ಈ ಎರಡೂ ಮಕ್ಕಳೊಡನೆ ತನ್ನ ತಮ್ಮ ಕೇಶವನ ಮನೆ ಸೇರುವ ಅಕ್ಕು ತಾನು ಹುಟ್ಟಿದ ಮನೆಗೇ ತನ್ನವಲ್ಲದ ಎರಡು 'ಕುಡಿ'ಗಳೊಡನೆ ಪ್ರವೇಶಿಸುತ್ತಾಳೆ ಮತ್ತು ಗೌರಿ - ಗಂಗೆಯರನ್ನು ತನ್ನ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸಿ ಬೆಳೆಸುತ್ತಾಳೆ. ಗೌರಿ. ಗಂಗೆ. ಅಕ್ಕು ಮತ್ತು ಕೇಶವ ಇವರ ಪ್ರಪಂಚ– ಅದರಲ್ಲೂ ಅವರ ಭಾವ ಪ್ರಪಂಚ– ಕಾದಂಬರಿಯ ಮೊದಲಿನ ಎರಡು ಭಾಗಗಳನ್ನು ವ್ಯಾಪಿಸಿಕೊಂಡಿದೆ. ಇಲ್ಲಿ ಚಿತ್ರಿತವಾಗಿರುವ ಜೀವನವು ಮಲೆನಾಡಿನ ಬಾಲ್ಯದ ನೆನಪುಗಳು. ಕಾರಂತರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಜೀವನ ಮತ್ತು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯತ್ತ ಹೊರಳುತ್ತಿರುವಾಗ ಜೀವನದಲ್ಲಿ ಸಂಭವಿಸುವ ಸಂಭ್ರಮ, ದಿಗಿಲು ಮತ್ತು ಮುಗ್ಧತೆ ಇವೆಲ್ಲವುಗಳ ಒಂದು ಹದವರಿತ, ಸುಂದರವಾದ 'ಸಾಂಗತ್ಯವುಳ್ಳ' ಚಿತ್ರಣ. ನನಗೆ ಇಲ್ಲಿಯೆ ಈ ಕಾದಂಬರಿಯ ಭಾವಗೀತೆಯ ಹೊಳಹುಗಳು ಕಾಣತೊಡಗಿದ್ದು. 'ಪ್ರಸಂಗ'ದಲ್ಲಿಯ ಮಾತುಗಳು. ಹಾವಭಾವ ಮತ್ತು ಮುಗ್ಧತೆ. ಈ ಭಾಗದಲ್ಲಿ ಪಾತ್ರಗಳು ನಿಜವೂ ಹೌದು. ಆದರೆ ಮನಸ್ಸಿನ ಮೂಲೆ ಮೂಲೆಗಳಿಗೆ ಲೇಖಕರು ತಮಗೇ ಒದಗಿಸಿಕೊಳ್ಳುತ್ತಿರುವ ರೂಪಕಗಳೂ ಆಗುತ್ತ ಬಾಲ್ಯದಲ್ಲಿ ಕಂಡ ಜೀವನದ. ಪ್ರಕೃತಿಯ ಭಾಗದಿಂದ ಹೆಕ್ಕಿ ತೆಗೆದ ಅಪಾರ ಶಬ್ದಸಂಪತ್ತನ್ನು ಮತ್ತು ಈಗ ಅವುಗಳನ್ನು ಕಳೆದುಕೊಳ್ಳಬಾರದೆಂಬ ಛಲದಿಂದ ಬರೆದ ಭಾಗವಾಗಿ ಕಾಣುತ್ತದೆ.

ಗೌರಿ. ಗಂಗೆಯರು ಬೆಳೆಯುತ್ತ. ಗುಡ್ಡ ಕಾಡುಗಳಲ್ಲಿ ಅಲೆಯುತ್ತ ಅಲ್ಲಿ-ಇಲ್ಲಿಯ ಸುದ್ದಿಗಳನ್ನು, ಪುರಾಣದ ಕತೆಗಳನ್ನು ಅರಗಿಸಿಕೊಳ್ಳುತ್ತ. ವೈದಿಕ ಮನೆತನದ ಸಂಪ್ರದಾಯದ ಗೆರೆಗಳನ್ನು ದಾಟದೆಯೆ ಜೀವನದ ಸಣ್ಣ ಸಣ್ಣ ಖುಷಿಗಳಿಗೆ ತಮ್ಮನ್ನೇ ತೆರೆದುಕೊಳ್ಳುತ್ತ ಬದುಕುತ್ತಾರೆ. ಸೋದರಮಾವನಾದ ಕೇಶವನನ್ನು ಮದುವೆಯಾಗುವ ಸಾಧ್ಯತೆಯನ್ನು ಹೊಂದಿದ್ದರೂ ಕೂಡ. ಗೌರಿ ಗಂಗೆ. ಕೇಶವರು ಸಹಜೀವಿಗಳಂತೆ ಅಕ್ಕುವಿನ ನಿರ್ವ್ಯಾಜ ಪ್ರೇಮದ ಬೆಳಕಿನಲ್ಲಿ ದೊಡ್ಡವರಾಗಿ ಅರಳುವ ರೀತಿ ಮತ್ತು ಇದಕ್ಕೆ ಬಳಸಿದ ಭಾಷೆ ಮನಸ್ಸನ್ನು ಸೆರೆ ಹಿಡಿಯುತ್ತದೆ. ಇಲ್ಲಿಯ ಬರವಣಿಗೆ ಒಂದು ರೀತಿಯಿಂದ ಪ್ರಯೋಗ. ಇನ್ನೊಂದು ರೀತಿಯಿಂದ ಪ್ರಯೋಗವಲ್ಲ. ಪ್ರಯೋಗವಾಗುವುದು ಲೇಖಕರ ಹೊರಜಗತ್ತಿಗೆ. ಲೇಖಕರ ಒಳಜಗತ್ತಿಗೆ ಇದು ಸಹಜ. 'ಋಜುವಾತು' ಪತ್ರಿಕೆಯ ಲೇಖನಗಳಲ್ಲಿ. ಅದರಲ್ಲೂ

'ಮೌನ ಕಣಿವೆ' ಲೇಖನದಲ್ಲಿ ಗದ್ಯವು ತನ್ನ ಮೇರೆಯನ್ನು ಮೀರಿ ಪದ್ಯವಾಗುತ್ತ. ರೂಪಕಗಳನ್ನು ಒದಗಿಸುತ್ತ. ಮೌನದಲ್ಲಿ ನುಡಿಯುತ್ತ ಬೆಳೆಯುವ ಬಗೆಯನ್ನು 'ದಿವ್ಯ' ಕಾದಂಬರಿಯ ಪ್ರಾರಂಭದ ಎರಡು ಭಾಗಗಳಲ್ಲಿ ಮತ್ತೆ ಕಾಣುತ್ತೇವೆ.

ಅಕ್ಕು. ಕೇಶವ. ಗೌರಿ. ಗಂಗೆಯರು ಬದುಕುವುದು ಮಂಜಯ್ಯ ಸಾಹುಕಾರರ ಮನೆಯಿಂದ ಅನತಿ ದೂರದಲ್ಲಿ. ಮಂಜಯ್ಯನವರು ಸಾಹುಕಾರರಾದರೂ ಬ್ರಾಹ್ಮಣರು. ಕೇಶವನು ಅಲ್ಲಿ ಭೂವರಾಹ ಪೂಜೆಗೆ ಪ್ರತಿದಿನ ಹೋಗುವ ವೈದಿಕ. ಮಂಜಯ್ಯನವರ ಮನೆತನದವರು ಕೇಶವಯ್ಯನ ಮನೆತನದವರಿಗೆ ತಲೆತಲಾಂತರದಿಂದ ಒಡೆಯರು. ಮತ್ತು ಭೂವರಾಹ ಪೂಜೆಯೂ ಹಾಗೇ ನಡೆದುಕೊಂಡು ಬಂದಿದೆ. ಕಾಲಾನುಕ್ರಮಣಿಕೆಯ ದೃಷ್ಟಿಯಿಂದ ನೋಡಿದರೆ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪ್ರಾರಂಭವಾಗುವ ಕಾದಂಬರಿಯು ಸ್ವಾತಂತ್ರ್ಯಾನಂತರದ ಕಾಲದತ್ತಲೂ ಚಾಚುತ್ತದೆ. ಆದರೆ ಇದು ಅಷ್ಟು ಮಹತ್ವದ್ದಲ್ಲ ಈ ಕಾದಂಬರಿಯಲ್ಲಿ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಅನಂತಮೂರ್ತಿಯವರ ಈ ಮೊದಲಿನ ಕಾದಂಬರಿಗಳನ್ನು ಗಮನಿಸಿದಾಗ ಈ ಸ್ವಾತಂತ್ರ್ಯಪೂರ್ವ ಮತ್ತು ನಂತರದ ವಿಷಯವು ಮಹತ್ವದಾಗಬಹುದಿತ್ತು. ಇಲ್ಲಿ ವಿಷಯವಸ್ತು ಅದಲ್ಲವೇ ಅಲ್ಲ. ಕೇಶವಯ್ಯ ಮತ್ತು ಅವನ ಮನೆತನದ ಇತರ ಮೂವರೂ ಹೊರಜಗತ್ತಿನ ಸಂಪರ್ಕಕ್ಕೆ ಹೆಚ್ಚು ಬಾರದಂತೆ ಜೀವಿಸುತ್ತಿರುವ 'ಏಕಾಂತ'ದ ರೀತಿಯನ್ನು ಮೊದಲು ಲೇಖಕರು 'ಮೊದಲ ಮಾತು'ಗಳಲ್ಲಿ ಹೇಳಿದ ಲೇಖಕನ 'ಏಕಾಂತ'ದೊಡನೆ ಹೋಲಿಸಿ ನೋಡಿದಾಗ ಇಲ್ಲಿಯ ಭಾಷೆ ಮತ್ತು ಘಟನೆಗಳು ಹೀಗೇಕೆ ರೂಪ ತಾಳುತ್ತಿವೆ ಎಂಬುದು ನಿಧಾನಕ್ಕೆ ಗೊತ್ತಾಗತೊಡಗುತ್ತದೆ. ಅಂದರೆ ತಾನು ವೈಚಾರಿಕವಾಗಿ ನಂಬಿದ್ದನ್ನು ತೊರೆದು ಮುಲುಗುಡುವ 'ಜೀವನವನ್ನು' ಮತ್ತು ಅಂತರಂಗವನ್ನು ಮಾತ್ರ ಸ್ಪರ್ಶಿಸಲು ಯತ್ನಿಸುವ ಆಯಾಮವಾಗಿ ಮೂಡಿ ಬರುವ ಬರಹ ಇದು. ಬಹುದಿನಗಳಿಂದ ಹೇಳಬೇಕೆನ್ನಿಸಿದ ಮಾತೊಂದನ್ನು ಇದೇ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಶತಮಾನದಲ್ಲಿ ಕುವೆಂಪು. ಬೇಂದ್ರೆ ಮತ್ತು ಅಡಿಗರ ಕಾವ್ಯ ತನ್ನ ಪ್ರಭಾವವನ್ನು ಕನ್ನಡ ಸಾಹಿತ್ಯದ ಮೇಲೆ ಎಷ್ಟು ಬೀರಿತೆಂದರೆ ರೂಪಕ. ಚಿಂತನೆ ಮತ್ತು ಭಾವಗೀತೆಯ ಭಾವಗಳು ಗದ್ಯದ ಮೇಲೆ ಪರಿಣಾಮ ಬೀರದೆ ಹೋಗಲಾರದಷ್ಟು ಪ್ರಭಾವ ಬೀರಿದವು. ಈ ಕಾವ್ಯಕ್ಕೆ ಪರಕೀಯರಾಗಿ ಉಳಿದು ಗದ್ಯವನ್ನು ಬರೆಯುವುದು ಅಸಾಧ್ಯ ಮತ್ತು ಅನ್ಯಾಯ ಕೂಡ. ಇಂಥ ಅದ್ಭುತ ಪರಂಪರೆಯನ್ನು ಬೆನ್ನಿಗಿಟ್ಟುಕೊಂಡು ಬರೆಯುವಾತ ಗದ್ಯದಲ್ಲಿ ಅದರ ಪ್ರಭಾವವನ್ನು ಪಾತ್ರಗಳೇ ರೂಪಕಗಳಾಗುವಲ್ಲಿ ಪಡೆಯಬೇಕಾದ ಅನಿವಾರ್ಯತೆ ಇದೆ. ಇದನ್ನು ಎಚ್ಚರದಿಂದ ಗಮನಿಸಿದ ಗದ್ಯಲೇಖಕರೆಲ್ಲಾ ಈ ಪ್ರಯತ್ನವನ್ನೇ ಮಾಡಿದರು. ಭಾಷೆಯ ದಿಕ್ಕು ಮತ್ತು ಸ್ವರೂಪ ಬದಲಾವಣೆಯಾಗುತ್ತ ನಡೆದದ್ದು ಈ ಕಾರಣಕ್ಕಾಗಿಯೆ. ಇಲ್ಲಿರುವ ಅಪಾಯಗಳನ್ನು ಗಮನಿಸಬೇಕು. ಯುಗದ ಕಾವ್ಯದ ಪರಿಚಯವಿಲ್ಲದೆ ಬರೆಯುವ ಗದ್ಯಲೇಖಕರು ಹೊಸತನಕ್ಕಾಗಿ ಮಾತ್ರ ಅಂತರಂಗದ ದರ್ಶನಕ್ಕೆ ಪ್ರಯತ್ನಿಸಿದಾಗ ತಮ್ಮ ಕತೆ ಕಾದಂಬರಿಗಳಲ್ಲಿ ಪಾತ್ರಗಳನ್ನು ರೂಪಕಗಳನ್ನಾಗಿ ಮಾಡುವಲ್ಲಿ ವಿಫಲವಾದದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗೆಯೇ ಯುಗದ ಕಾವ್ಯ ನೀಡಿದ ಈ ಕಾಣಿಕೆಯು ವಿಮರ್ಶೆಯ ಮಾನದಂಡವಾಗಿ ಬಂದಿರುವುದು ಕೂಡ ಮಹತ್ವದ ಸಾಹಿತ್ಯದಿಂದಲೆ. ಅದನ್ನು ಹೊರಗಿನಿಂದ ಎರವಲು ತಂದದ್ದೆಂದು ಹೇಳುವುದು ಯುಗದ ಕಾವ್ಯಕ್ಕೆ ನಾವು ಮಾಡುವ ಅವಮಾನ.

ಗೌರಿ. ಗಂಗೆ. ಅಕ್ಕು ಮತ್ತು ಕೇಶವರ ಜಗತ್ತಿಗೆ ಸ್ಪರ್ಶ ಬರುವುದು ದಲಿತರ ಜಗತ್ತಿನದು. ಆ ಮುಗ್ಧತೆಗೆ ಈ ಮುಗ್ಧತೆ ಮುಖಾಮುಖಿಯಾಗುವ ಪ್ರಸಂಗಗಳು ಬರುತ್ತವೆ. ಇವನ್ನೇ ನಾನು 'ಮುಲುಗುವ' ಪ್ರಸಂಗಗಳೆಂದು ಹೇಳಿರುವುದು. ಇಲ್ಲಿಯ ಬಹುಸಂಖ್ಯಾತ ವರ್ಗದ ಪ್ರಾತಿನಿಧ್ಯವಿಲ್ಲವೆಂದಾಗಲಿ ಅಥವ ದಲಿತರನ್ನು ಕಂಡು ದೃಷ್ಟಿ ಸರಿ ಇಲ್ಲವೆಂದಾಗಲಿ.

ಚತುರತೆಯಿಂದ ಒಂದುವರ್ಗವನ್ನು ಇಲ್ಲಿಯ ಅನುಭವಕ್ಕೆ ಹೊರತುಪಡಿಸಿದ್ದಾರೆಂದು ವಾದಿಸುವುದು ಅರ್ಥಹೀನ. ಏಕೆಂದರೆ ವರ್ಗಘರ್ಷಣೆ ಇಲ್ಲಿಯ ವಸ್ತು ಅಲ್ಲವೆ ಅಲ್ಲ. ತಾನು ಬದುಕಿದಜೀವನ ಮತ್ತು ಅದು ಒದಗಿಸಿದವಿವರಗಳ ದ್ರವ್ಯವನ್ನು ತನ್ನ ಮನಸ್ಸಿಗೆ ಸ್ಪಂದಿಸುವ ರೂಪಕಗಳನ್ನಾಗಿ ಮಾಡುತ್ತೇನೆಂದು ಬರೆದಾಗ ಅದನ್ನು ವರ್ಗಸಂಘರ್ಷದ ಪರಿಕರಗಳ ಮಾನದಂಡಗಳಿಗೆ ಒದಗಿಸಲಾಗದು. ಅದಕ್ಕಾಗಿಯೇ ಇಲ್ಲಿ ಬರುವ 'ಗಂಗೆ'ಯ ಸಾವನ್ನೂ, ನಂತರ ಗೌರಿಯಲ್ಲಿ ಬದಲಾವಣೆಯಾಗಿ ಅವಳು ಕರಿಬೆಕ್ಕೊಂದಕ್ಕೆ ಪ್ರತಿದಿನ ಹಾಲು ಕುಡಿಸುವುದು. ಅನ್ನ ಹಾಕುವುದಾಗಲಿ ವಾಸ್ತವದ ದೃಷ್ಟಿಯಿಂದ ಮಾತ್ರ ನೋಡಬಹುದಾದ ಘಟನೆಗಳೂ ಅಲ್ಲ.

ಗೌರಿಯನ್ನು ಬೇಕೆಂತಲೇ ಮಿಸ್ಟೀರಿಯಸ್ ಮಾಡಲಾಗಿದೆ. ಏಕೆಂದರೆ ಅವಳು ಲೇಖಕನ ಮನಸ್ಸಿನ ನಿಗೂಢ ಆಯಾಮಕ್ಕೆ ರೂಪಕವಾಗಬೇಕಿದೆ. ಇದು ಕಾದಂಬರಿಯ ಶಿಲ್ಪ ಮತ್ತು ಅಭಿವ್ಯಕ್ತಿಯ ನೆಲೆಯನ್ನು ನಿರ್ದೇಶಿಸುವ ವಿಷಯವಾಗಿದೆ. ಯಾವುದೋ ಒಂದು ಹೆಸರಿಡಲಾಗದ ಅನನ್ಯವಾದ ಪ್ರಾಣಿಯೊಂದು ಗಂಗೆ. ಗೌರಿಯರಿಗೆ ಕಾಡಿನಲ್ಲಿ ದೊರೆಯುತ್ತದೆ. ಅದರ ಚಿಗಿತ ಮತ್ತು ಕಣ್ಣುಗಳನ್ನು ಲೇಖಕರು ಬಹು ಮಾರ್ಮಿಕವಾಗಿ ವರ್ಣಿಸಿದ್ದಾರೆ. ನನಗೆ ಬಹು ಗಮನಾರ್ಹವಾಗಿ ಕಂಡ ವಿಷಯವೆಂದರೆ ತಮ್ಮ ಪರಿಸರದ ಜ್ಞಾನಭಂಡಾರಗಳೆಂಬಂತೆ ಕಂಡು ಬರುವ ಅಕ್ಕು. ಗೌರಿ, ಗಂಗೆ ಮತ್ತು ಕೇಶವರಿಗೆ ಈ ಪ್ರಾಣಿ ಯಾವುದೆಂದು ಗೊತ್ತಾಗುವುದಿಲ್ಲ. ಅಥವಾ ಅದು ಯಾವುದೊ ಆಗಬಾರದ ಘಟನೆಯಿಂದಾದ 'ಮಿಶ್ರತಳಿ' ಇರಬಹುದೆ ಎಂಬ ನಿಗೂಢವು ಇಲ್ಲಿದೆ. ಒಟ್ಟಿನಲ್ಲಿ ಅದೊಂದು ಆಕರ್ಷಣೆಯ ಕೇಂದ್ರವಾಗಿ ಅರ್ಥವಾಗದೆ ಇರುವ ಅನುಭವಕ್ಕೆ ಮಾತ್ರ ತಾಗುವ ವಸ್ತುವಾಗಿ ರೂಪಗೊಂಡು. ಅದು ಮಾಯವಾದೊಡನೆ ಅದನ್ನು ಅತಿಯಾಗಿ ಹಚ್ಚಿಕೊಂಡ ಗಂಗೆ ಹಾಸಿಗೆ ಹಿಡಿದು ಅದರ ಹಿಂದೆಯೇ ಮರಣದ ದಾರಿ ಹಿಡಿಯುತ್ತಾಳೆ. ಕಾದಂಬರಿಯ ಮೊದಲ ಸಾವು ಸಂಭವಿಸುವುದು ಈ ರೀತಿಯಾಗಿ.

ಇದಾದ ನಂತರ ಗೌರಿಯಲ್ಲಿ ಬದಲಾವಣೆಗಳು ಕಾಣತೊಡಗುತ್ತವೆ. ಅವಳು ಯಾರನ್ನೋ ಸಂಧಿಸುವಂತೆ. ಯಾರೊಡನೆಯೊ ಮಾತನಾಡುವಂತೆ. ಅತೀತವಾದುದನ್ನು ಕಂಡವಳಂತೆ ಕಾಣತೊಡಗುತ್ತಾಳೆ. ಕರಿ ಬೆಕ್ಕೊಂದು ಪ್ರತಿದಿನ ಹಿತ್ತಲಿಗೆ ಬಂದು ಅವಳು ಕೊಟ್ಟ ಹಾಲನ್ನು ಕುಡಿದು ಹೋಗುವುದರಲ್ಲಿ ಪರ್ಯವಸಾನಗೊಳ್ಳುತ್ತದೆ ಈ ತಂತು. ಹಾಗೆಯೇ ಮರಣದೊಡನೆ ಮುಖಾಮುಖಿಯಾದೊಡನೆ ಈ ಮುಗ್ಧ ಜೀವನದಲ್ಲಿ ಆದ ಬದಲಾವಣೆಗಳು ಈ ಜೀವನದ ಆಚೆಯ ಒಂದು ಪರಿಕರಕ್ಕೆ ಜೀವವೊಂದು ತೆರೆದೊಡನೆ ಉಂಟಾಗುವ ಬದಲಾವಣೆ ಎಂಥದಿರಬಹುದು ಎಂಬ ಪ್ರಶ್ನೆ ಗೌರಿಯಲ್ಲಿದೆ. ಇಲ್ಲಿ ಗಮನಿಸಬೇಕಾದ ಹಲವಾರು ವಿಷಯಗಳಲ್ಲಿ ಮುಖ್ಯವಾದುದೆಂದರೆ ಈ ಮರಣದ. ಅಗಲುವಿಕೆಯ ಸನ್ನಿವೇಶವು ಗೌರಿಯ ಮೇಲೆಯೇ ಇಂಥದೊಂದು ಪರಿಣಾಮವನ್ನು ಏಕೆ ಬೀರಿತು ಎಂಬುದು. ಅಕ್ಕು ಮತ್ತು ಕೇಶವರು ಕೂಡ ಗೌರಿಯಷ್ಟೇ, ಗಂಗೆಯೊಡನೆ ತಾದಾತ್ಮ್ಯ ಹೊಂದಿದವರಲ್ಲವೆ ? ಗೌರಿಯಷ್ಟು ಅವರು ಮುಗ್ಧತೆಯ ಬೀಜವನ್ನು ಪ್ರಾಯಶಃ ಪರದಿಂದ ಹೊತ್ತು ತಂದವರಲ್ಲ. ಹಾಗೆಯೇ ಲೇಖಕರಿಗೆ ಕೂಡ ಗೌರಿಯಂಥ ಒಂದು ಜೀವ ಭಾವಗೀತೆಯಂತೆ ತೇಲಿ ಬರಬೇಕಾದರೆ ಕೇವಲ 'ಪರಿಸರ'ದ ಪ್ರಭಾವದಿಂದ ಮಾತ್ರ ಸಾಧ್ಯವಿಲ್ಲ ಎಂಬ ಅಂಶವನ್ನು ಹೇಳಬೇಕಾಗಿದೆ. ಪರಿಸರದ ಪ್ರಭಾವ ಮತ್ತು ಪೂರ್ವಜನ್ಮದ 'ವಾಸನಾ' ಇವೆರಡರ ಸಂಯೋಗದಲ್ಲಿಯೇ ಗೌರಿಯ ಜನನವಾಗುವುದು. ಅಂಥವರು 'ಆಚೆಯ' ಜೀವನದ ಹೊಳಹುಗಳನ್ನು ಮಿಂಚಿಸುವ 'ಸೂತ್ರ'ಗಳಾಗಬಹುದು. ಇದನ್ನು ನೇರ ನಿರೂಪಣ ಮಾರ್ಗದಲ್ಲಿ ಅವತರಿಸುವಂತೆ ಮಾಡಲಾಗದ್ದಕ್ಕೆ ಈ ಅಭಿವ್ಯಕ್ತಿ ಮಾರ್ಗಕ್ಕೆ ಇಂಥ ರೂಪಕ ಒದಗಿದೆ.

ಒಂದು ರೀತಿಯಲ್ಲಿ ಈ ಭಾಗದ ಕತೆ ಮತ್ತು ವರ್ಣನೆಗಳು ಜಾನಪದೀಯ ಮತ್ತು ದಂತಕಥಾಭಾಗಕ್ಕೆ ಪೀಠಿಕೆಗಳೂ ಆಗಿವೆ. ನನಗೆ ಹೀಗನ್ನಿಸಲಿಕ್ಕೆ ಇರುವ ಕಾರಣವೆಂದರೆ.

ಗೌರಿಯಲ್ಲಿ ಮತ್ತು ಗಂಗೆಯಲ್ಲಿ ಪ್ರಜ್ಞೆಯ ಸ್ತರಗಳು ಹೇಗೆ ವ್ಯಕ್ತವಾಗಿವೆಯೆಂದರೆ ಅವು ಒಂದೇ ಪ್ರಜ್ಞೆಯ ಎರಡು ಮುಖಗಳೊ ಎನ್ನುವಂತಿವೆ. ಈ ಪ್ರಜ್ಞೆಯ ಅವಸ್ಥೆಗಳಿಗೆ ಜಾನಪದದ ಕತೆಯ ರೂಪ ಕೊಡಲು ಮಾಡಿದ ಪ್ರಯತ್ನದಲ್ಲಿ ಅವಾಸ್ತವವಾದುದನ್ನು ಒಂದು ಸ್ತರದಲ್ಲಿ ಅನೂಹ್ಯ ಎಂಬ ಕಾರಣಕ್ಕಾಗಿ ಒಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನವಿದೆ. ಆಗ ಕೇಶವ ಮತ್ತು ಅಕ್ಕು ಕೂಡ ಇದೇ ಸ್ತರದ ಬೇರೆ ಬೇರೆ ಅವಸ್ಥೆಗಳಂತೆ ಕಾಣುತ್ತಾರೆ. ಅಂದರೆ ಗಂಗೆ. ಗೌರಿ. ಅಕ್ಕು ಮತ್ತು ಕೇಶವರು ಒಂದೇ ಮನಸ್ಸಿನ ವಿವಿಧ ಪಾತಳಿಗಳಾಗಿದ್ದುಕೊಂಡು ಲೇಖಕರ ಬಾಲ್ಯದ ಜೀವನದ್ರವ್ಯದ ಸಹಾಯದಿಂದ 'ಪಾತ್ರರೂಪ'ಗಳಾಗಿ ಜನ್ಮ ತಾಳುತ್ತಾರೆ ಮೊದಲಿನೆರಡು ಭಾಗಗಳಲ್ಲಿ.

ದಲಿತರ ಸ್ಪರ್ಶ ಇಂಥ ಪ್ರಜ್ಞೆಯ ಸ್ತರಗಳಿಗೆ ಆಗುವುದು ಕರಿಯನಿಂದ. ಇಲ್ಲಿ ಕರಿಯನನ್ನು ವರ್ಣಿಸುವ ರೀತಿಯಲ್ಲಿ ನನಗೆ ಮುಲ್ಕರಾಜ್ ಆನಂದರ 'ಅನ್‌ಟಚೆಬಲ್' ಕಾದಂಬರಿಯ ಕೆಲ ಭಾಗಗಳ ನೆನಪಾದದ್ದು ಕೇವಲ ಒಂದು ಆಕಸ್ಮಿಕವಲ್ಲ. ಹೇಗೆ ಕಾರಂತರ 'ಮರಳಿಮಣ್ಣಿಗೆ' ಮತ್ತು 'ಚೋಮನ ದುಡಿ'ಗಳ ಜಗತ್ತಿನ ಸ್ಪರ್ಶ ಇಲ್ಲಿಯ ಜಗತ್ತಿನಲ್ಲಿ ಪ್ರತಿಫಲಿತಗೊಂಡಿದೆಯೊ ಹಾಗೆಯೇ ಅನಂತರ ಆ ಕಾದಂಬರಿಗಳ ಪರಿಣಾಮದ ಅಂಶ ಕೂಡ ಕಾಣಿಸಿಕೊಂಡಿದೆ. ಇದನ್ನು ಏಕೆ ಗಮನಿಸಬೇಕೆಂದರೆ ಒಂದು ಸಾಹಿತ್ಯ ಪರಂಪರೆ ಮತ್ತು ಅದು ಮಾಡಿದ ಪ್ರಭಾವವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡೂ. ಅದೇ ಜೀವನವನ್ನು ತಮ್ಮ ಹುಡುಕಾಟಕ್ಕೆ ರೂಪಕಗಳನ್ನಾಗಿ ಪಡೆಯುವುದು ಇಲ್ಲಿ ನಡೆಯುವ ನಿಜವಾದ ಪ್ರಕ್ರಿಯೆ. ಗೌರಿಯ ಜಗತ್ತಿಗೆ ಕರಿಯನ ಪ್ರವೇಶವಾಗುವುದು ಎರಡು ದೃಷ್ಟಿಯಿಂದ ಅನಿವಾರ್ಯವಾಗಿದೆ. ಒಂದು, ಗಂಗೆಯ ನಿರ್ಗಮನದ ನಂತರ ಅಂದರೆ ಆಡೊಲೆಸೆಂಟ್ ಅವಸ್ಥೆಯ ನಂತರ ಗೌರಿಯಲ್ಲಿ ಉಂಟಾಗುವ ದೈಹಿಕ ಬದಲಾವಣೆಯ ಆವಶ್ಯಕತೆಗನುಗುಣವಾಗಿ ಬಂದ ಪಾತ್ರ ಅದು. ಇನ್ನೊಂದು. ಮಾನಸಿಕ ಜಗತ್ತಿಗೆ ದೈಹಿಕ ಸಾಮರ್ಥ್ಯದ ಒಂದು ಆಯಾಮವನ್ನು ಜೋಡಿಸಬೇಕಾದ ಆವಶ್ಯಕತೆ ಇದೆ. ಆದರೆ ಅಲ್ಲಿಯೂ ಮುಗ್ಧತೆ ಗೌರಿ. ಕರಿಯರ ಮಧ್ಯದ ಸಂಪರ್ಕ ಸೇತುವೆ. ಈ ಒಂದು ವಿಷಯದಲ್ಲಿ ಮೇಲು-ಕೀಳಿನ. ಜಾತಿ ಅರಿವಿನ ಪ್ರಶ್ನೆಯಿಲ್ಲ ! ಉಳಿದಂತೆ ತನ್ನ ವೈದಿಕ ಪರಿಸರದ ನ್ಯೂನತೆಗಳನ್ನು ಹೋಗಲಾಡಿಸುವ ತವಕದ ದಾರಿಯಲ್ಲಿ ಗೌರಿಗೆ ಸಿಕ್ಕ ಆಗಂತುಕ ಈ ಕರಿಯ. ಅವನೂ ಕೂಡ ರೂಪಕದ ಛಾಯೆಯತ್ತಲೇ ತಿರುಗುತ್ತಾನೆ. ಅವನಷ್ಟೇ ಅಲ್ಲದಿದ್ದರೂ ಅವನ ಸಮೀಪ ಎನ್ನುವಷ್ಟು ಗುಡ್ಡಬೆಟ್ಟಗಳ. ಗಿಡಮರಗಳ ಹೊಂಡ. ಹಕ್ಕಿಗಳ ಪರಿಚಯ ಗೌರಿಗೂ ಇದೆ. ಅವನು ಕೊಳಲನೂದುತ್ತಾನೆ ಮತ್ತು ಗೌರಿಗೆ ಶ್ಯಾಮಲ ವರ್ಣದ ಕೃಷ್ಣನಂತೆ ಕಾಣುತ್ತಾನೆ. ಹಾಗಾಗಿಯೇ ಅವನು ದಲಿತನಾಗಿರುವುದರ ಜೊತೆಗೇ ವೈದಿಕ ಮನಸ್ಸೊಂದಕ್ಕೆ ಅಡೊಲೆಸೆಂಟ್ ಅವಸ್ಥೆಯಲ್ಲಿ ಮೂಡಿ ಬರುವ ರೋಮ್ಯಾಂಟಿಕ್ ಎನ್ನಬಹುದಾದ ಕಲ್ಪನೆಯ 'ಹುಡುಗ' ಕೂಡ ಆಗುತ್ತಾನೆ. ಮತ್ತೆ ಇಲ್ಲಿ ವರ್ಗ ಭೇದಗಳ ಪ್ರಶ್ನೆ ಅಷ್ಟೊಂದು ಮಹತ್ವದ್ದಾಗುವುದಿಲ್ಲ. ಇಲ್ಲಿಂದಲೇ ಕಾದಂಬರಿಯಲ್ಲಿ ನಮ್ಮ ಸಮಾಜದ ವೈರುಧ್ಯಗಳನ್ನು ಅವುಗಳ ನಿರರ್ಥಕತೆ ಗೊತ್ತಿದ್ದರೂ ಕೂಡ ಅವುಗಳನ್ನು ಒಪ್ಪಿಕೊಂಡೂ ಜೀವನದ ಲವಲವಿಕೆ ಕಳೆದುಕೊಳ್ಳದ ಒಂದು ನಿಲುವು ನಿಧಾನಕ್ಕೆ ಸ್ಥಾಪಿತವಾಗುತ್ತ ಹೋಗುತ್ತದೆ. ವರ್ಗ ಸಮಸ್ಯೆ. ಜಾತಿ ಭೇದಗಳು ಇತ್ಯಾದಿ ನಮ್ಮ ಬಾಹ್ಯ-ಅಂತರಂಗಗಳೆರಡರ ಅಂಗಗಳಾಗಿದ್ದರೂ ಅದೊಂದೇ ಜೀವನವೆನ್ನುವಂತೆ ಬರೆಯುವುದು ತರವಲ್ಲ ಎಂಬ ಪ್ರಜ್ಞೆಯೂ ಇಲ್ಲಿಯ 'ವಾತಾವರಣ' ಸೃಷ್ಟಿಯ ಹಿಂದಿದೆ. ಹೀಗಾಗಿ ಲೇಖಕರ ಚಾಚಿದ ಕೈಯು ಒಂದೆಡೆ ಜೀವನದ ನಿಗೂಢದತ್ತ ಚಾಚಿದಂತೆಯೇ ಕನ್ನಡದ ಸಂದರ್ಭದಲ್ಲಿ ಹೊಸ ದಿಕ್ಕಿನತ್ತ ತೋರುವ ಒಲವೂ ಆಗಿದೆ. ಹಾಗೆಯೇ ಸದ್ಯದ ಜಾಗತಿಕ ಸಾಹಿತ್ಯದ ಒಲವೂ ಆಗಿದೆ. ಹಲವು ಕಡೆ ನನಗೆ ಈ ಕಾದಂಬರಿ ಓದುವಾಗ ಮಾರ್ಕ್ವೆಜ್ ನೆನಪಾಗಿದ್ದಾನೆ. ಅಚೆಬಿ ಹಾದು ಹೋಗಿದ್ದಾನೆ.

ಗೌರಿ ಮತ್ತು ಕರಿಯರ ಪ್ಲೆಟೋನಿಕ್ ಸಂಬಂಧವಲ್ಲಿ ಗೌರವವಿದೆ ಮತ್ತು ದೈಹಿಕ ಸಂಬಂಧದ ಅಭಾವವಿದೆ. ಶಿವನ ಮಡದಿ ಜಲಜಳೊಡನೆ ಕರಿಯನ ಸಂಬಂಧ ಸ್ಥಿರವಾಗಿ, ನಪುಂಸಕನಾಗಿರಬಹುದಾದ ಅವನು ತನ್ನ ಮಡದಿಯನ್ನು ಕೊಲೆ ಮಾಡಿ ಪೊಲೀಸರಿಗೆ ಶರಣಾಗುತ್ತಾನೆ. ಸಾಯುವ ಮೊದಲು ತನ್ನ ತಲೆತಲಾಂತರದಿಂದ ಬಂದ ಹುಲಿಯುಗುರುಗಳನ್ನು ಅವನು ಗೌರಿಗಾಗಿ ಜಲಜಳ ಬಳಿ ಬಿಟ್ಟು ಹೋಗಿದ್ದಾನೆ. ಇದು ಎರಡನೆಯ ಮರಣ. ಗೌರಿಯ ಮೇಲೆ ಮರಣ ಬೀರುವ ದ್ವಿತೀಯ ಹಂತದ ಪರಿಣಾಮ ಅವಳನ್ನು ಅವಳು ಕಾಣದ ಜಗತ್ತಿನ ದಾರಿಯಲ್ಲಿ ಮತ್ತಷ್ಟು ಮುಂದೆ ಕರೆದೊಯ್ಯುತ್ತದೆ. ಕರೆಯೋಲೆ ಕಳಿಸಿ ನಡೆಯುವ ಘಟನೆಗಳಂತೆ ಈ ಭಾಗದಲ್ಲಿ ಕಾದಂಬರಿಯಲ್ಲಿ ಇವು ಕಾಣುವುದಿಲ್ಲ. ಅಕ್ಕು ಬೆಳೆಯುತ್ತಾಳೆ. ಗೌರಿ ಬೆಳೆಯುತ್ತಾಳೆ. ಕೇಶವ ಇದನ್ನರಿಯುತ್ತಿರುವ ಮೂಕಸಾಕ್ಷಿಯಾಗುತ್ತಾನೆ. ಅಂತರಂಗದ ಜಗತ್ತು. ನಿಗೂಢ ಮುಗ್ಧತೆಯ ಜಗತ್ತು ಮತ್ತು ಪ್ರಸಂಗಗಳಿಂದ ಉದ್ಭವವಾದ ಪೌರಾಣಿಕ ಜಗತ್ತು. ಈಗ ವಾಸ್ತವದ ಸ್ಪರ್ಶವನ್ನು ಪಡೆಯಬೇಕಾಗಿದೆ.

ಈ ಭಾಗಗಳ ನಂತರ ಒಡಮೂಡತೊಡಗುವ ಮಂಜಯ್ಯನವರ ಜಗತ್ತು ಇಂಥ ಒಂದು ವಾಸ್ತವದ ಸ್ಪರ್ಶಕ್ಕೆ ಹದಗೊಂಡು ಬರುತ್ತದೆ. ಇದರ ಸ್ವೀಕಾರಾರ್ಹತೆಯ ಬಗ್ಗೆ ನಾನು ಈ ಕಾದಂಬರಿಯನ್ನು ಗ್ರಹಿಸಿದ ರೀತಿಯನ್ನು ವಿವರಿಸಿದ ನಂತರ ಚರ್ಚಿಸುತ್ತೇನೆ. ಮಂಜಯ್ಯನವರ ಮನೆಯ ಭೂವರಾಹ ವಿಗ್ರಹಕ್ಕೆ ತಲೆತಲಾಂತರದಿಂದ ಕೇಶವನ ಮನೆಯ ಪೌರೋಹಿತ್ಯ ನಡೆದಿದೆ. ಹಾಗೆಯೇ ಎರಡು ತಪ್ಪಲೆ ಅನ್ನ ಪ್ರತಿದಿನ ಈ ಭೂವರಾಹನಿಗೆ ನೈವೇದ್ಯವಾಗಿ ಅದು ಮಂಜಯ್ಯನವರೇ ನಡೆಸುವ ಸ್ಕೂಲು ಮಕ್ಕಳಿಗೆ ಪ್ರಸಾದವಾಗಿ ಹೋಗುತ್ತದೆ. ಮಂಜಯ್ಯನವರು ಸ್ವಾತಂತ್ರ್ಯ ಹೋರಾಟಗಾರರು, ಚಿಕ್ಕವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡದ್ದರಿಂದ 'ಲಂಪಟ' ತನವನ್ನು ಪಡೆದವರು, ಅದನ್ನೂ ಕೂಡ ಘನಗಾಂಭೀರ್ಯದಿಂದ ನಡೆಸಿಕೊಂಡು ಬಂದವರು. ಜಮೀನುದಾರರ ಸಂಘದ ಅಧ್ಯಕ್ಷರಾದರೂ ತಮ್ಮ ಗೇಣಿದಾರರನ್ನು ಉದಾರವಾಗಿ ನಡೆಯಿಸಿಕೊಂಡವರು. ರಾಜಕೀಯದಲ್ಲಿ ವರ್ಚಸ್ಸುಳ್ಳವರು. ಅವರು ಹೆಚ್ಚೂ ಕಡಿಮೆ ಗಾಂಧಿ ಭಕ್ತರು ಮತ್ತು ನೆಹರೂ ಅನುಯಾಯಿಗಳು. ಇವರಿಗಿರುವ ಎರಡು ಮಕ್ಕಳಲ್ಲಿ ಹಿರಿಯವ ಘನಶ್ಯಾಮ ಇಂಗ್ಲಂಡಿನಲ್ಲಿದ್ದಾನೆ ಹಾಗೂ ಮಗಳು ವಿಮಲ ವಿಧವೆಯಾಗಿ ಮನೆಯಲ್ಲಿದ್ದರೂ ಓದು ಮುಂದುವರಿಸಿ ಎಲ್‌ಎಲ್. ಬಿ. ಮಾಡುತ್ತಿದ್ದಾಳೆ ಮದ್ರಾಸಿನಲ್ಲಿ.

ಕಾದಂಬರಿಯ ಪ್ರಾರಂಭದ ಜಗತ್ತು ಮಂಜಯ್ಯನವರ ಈ ಜಗತ್ತಿಗೆ ನಿಧಾನವಾಗಿ ತೆರೆದುಕೊಳ್ಳತೊಡಗುತ್ತದೆ. ಇಲ್ಲಿಯ ವರೆಗೂ ಕಾದಂಬರಿಯಲ್ಲಿ 'ಕೆಡುಕಿನ' ದರ್ಶನವಾಗುವುದಿಲ್ಲ. ಶೀನ ಕರಿಯನನ್ನು ಕೊಂದದ್ದು ಕೂಡ ನೈತಿಕ ಸಿಟ್ಟಿನಿಂದಾಗಿ. ಕೆಡುಕಿನ ಧೋರಣೆಯಿಂದಲ್ಲ. ಇಲ್ಲಿಯೇ ಗಣಪಯ್ಯನ ದರ್ಶನವಾಗುತ್ತದೆ. 'ಕೆಡುಕಿನ' ಸ್ಪರ್ಶ ಕಾದಂಬರಿಗೆ ಬರುತ್ತದೆ. ಈ ಕೆಡುಕಿನ ಆವಶ್ಯಕತೆ ಮೂರನೆಯ ಮರಣಕ್ಕೆ ಕಾರಣವಾಗಲೆಂದೇ ಬಂದಿದೆಯೆನ್ನಿಸುತ್ತದೆ. ಗಣಪಯ್ಯನೂ ಬ್ರಾಹ್ಮಣನೆ. ಅವನಿಗೂ ಮಂಜಯ್ಯನವರಿಗೂ ಬಹು ವ್ಯತ್ಯಾಸವಿದೆ. ಅವನ ಹೆಂಡತಿಯು ಅವನಿಂದಾಗಿ ಪಡುತ್ತಿರುವ ಕಷ್ಟ. ಅವನ ಮಗಳು ಸರಸ್ವತಿಯ ಸ್ಕೂಲು ಟೀಚರ್ ದುರುಗಪ್ಪನನ್ನು ಪ್ರೀತಿಸುವುದು. ಗಣಪಯ್ಯ. ಗೊಗ್ಗ. ಕೊಗ್ಗ ಎಂಬ ಇಬ್ಬರು ಕಟುಕರನ್ನು ಸಾಕಿರುವುದು ಮತ್ತು ಕೊನೆಗೆ ಗಣಪಯ್ಯನು ಸರಸ್ವತಿಯೊಡನೆ ಓಡಿ ಹೋಗಲು ಯತ್ನಿಸುವ ದುರುಗನನ್ನು ತನ್ನ ಬಂದೂಕಿನಿಂದಲೇ ಕೊಲ್ಲುವುದು – ಇವು 'ಕೆಡುಕು' ಸೃಷ್ಟಿಸುವ ಮುಖಗಳು. ಈ ಮೂರನೆಯ ಮರಣಕ್ಕೆ ಬರುವ ಹೊತ್ತಿಗೆ ಕಾದಂಬರಿಯು ಕೆಲಮಟ್ಟಿಗೆ ವಾಸ್ತವದಲ್ಲಿ ಹೆಚ್ಚು ಬೇರೂರಲು ಪ್ರಾರಂಭಿಸುತ್ತದೆ. ಇದು ಮೂರನೆಯ ಮರಣ ಮತ್ತು ಎರಡನೆಯ ದಲಿತನ ಕೊಲೆ. ಇಲ್ಲಿಯ ಪ್ರೇಮ-ಪ್ರಕರಣಕ್ಕೆ ಜಾನಪದದ ಛಾಯೆ ಇದೆ. ಇದನ್ನು ಉದ್ದೇಶಪೂರ್ವಕವಾಗಿಯೇ ಬಳಸಿದ್ದಾರೆ. ಜಲಜಳ ಪ್ರೇಮಕ್ಕೆ ಸಿಕ್ಕು ಬಲಿಯಾದ

ಕರಿಯ, ಸರಸ್ವತಿಯ ಪ್ರೇಮಕ್ಕೆ ಸಿಕ್ಕು ಬಲಿಯಾದ ದುರುಗಪ್ಪ, ಅರ್ಥವಾಗದೆ ಪ್ರಾಣಯೊಂದನ್ನು ಕಳೆದುಕೊಂಡ ವಿರಹದಲ್ಲಿ ಪ್ರಾಣ ಬಿಡುವ ಗಂಗೆ –ಇವರೆಲ್ಲರೂ ದಂತಕತೆಯಾಗುವ ಸಾಮರ್ಥ್ಯ ಹೊಂದಿದವರೆ. ಹೀಗಾಗಿ ಇವರನ್ನು ಚಿತ್ರಿಸುವ ಭಾಷೆ, ಶೈಲಿಗೆ ಕೆಲವೊಮ್ಮೆ ಅಂಥ ಸ್ಪರ್ಶ ಇಲ್ಲಿ ಅಗತ್ಯವಾಗಿದೆ. ಹಾಗೆ ನೋಡಿದರೆ ಕೊಗ್ಗ, ಗೊಗ್ಗರಲ್ಲಿ ಒಬ್ಬನಿಗೆ ಕಣ್ಣಿಲ್ಲ. ಇನ್ನೊಬ್ಬನಿಗೆ ಆರು ಬೆರಳಿವೆ ಮತ್ತು ಇವರನ್ನು ಕೊಲ್ಲಾಪುರದಿಂದ ತಂದ ಕಟುಕರೆಂದು ವರ್ಣಿಸುವ ರೀತಿ –ಇವೆಲ್ಲವುಗಳಲ್ಲಿ ವಾಸ್ತವ ಮತ್ತು ದಂತಕಥೆಗಳ ಹದವಾದ ಮಿಶ್ರಣವಿದೆ.

ಗಣಪಯ್ಯನ ಕೆಡುಕಿನ ಸ್ವಭಾವದಿಂದಾಗಿಯೇ ಇಲ್ಲಿ ಕಟ್ಟಿದ ಒಂದು ಸುಂದರ ಪ್ಯಾಸ್ಟರಲ್ ಸಂಸ್ಕೃತಿ ನಾಶವಾಗುತ್ತದೆ. ಆ ಸಂಸ್ಕೃತಿಯಲ್ಲಿ ಓರೆ-ಕೋರೆಗಳಿಲ್ಲವೆಂದಲ್ಲ. ಆದರೆ ಅದು ಕೆಡುಕಿನ ಸ್ವರೂಪದ್ದಲ್ಲ. ಹೀಗಾಗಿ ಆಪ್ಯಾಯಮಾನವೆನ್ನಿಸುವ ಪ್ರತಿಯೊಂದನ್ನು ಆ ಪುಟ್ಟ ಮುಗ್ಧ ಜಗತ್ತು ಸ್ವೀಕರಿಸುತ್ತಲೇ ಹೋಗುತ್ತದೆ ಮತ್ತು ಹಾಗೆ ಸ್ವೀಕರಿಸಿದ್ದರ ಪರ-ವಿರೋಧಗಳ ಬಗ್ಗೆ ಯೋಚಿಸುವುದಿಲ್ಲ. ಗಣಪಯ್ಯನ ಕೆಡುಕು ಅಕ್ಕು..ಗೌರಿ ಮತ್ತು ಕೇಶವನ್ನು ಮುಟ್ಟುವುದಿಲ್ಲ. ಇದು ಕಾದಂಬರಿಯ ವಸ್ತುವಿನ ದೃಷ್ಟಿಯಿಂದ ಗಮನಾರ್ಹವಾದದ್ದು. ದುರುಗಪ್ಪ ಹಾಡುತ್ತಾನೆ. ಕರಿಯ ಕೊಳಲು ನುಡಿಸುತ್ತಿದ್ದ. ಸರಸ್ವತಿ ಬಾಲವಿಧವೆಯಾದರೂ ಆಧುನಿಕ ವಿಚಾರಗಳ ದುರುಗಪ್ಪನೊಡನೆ ಸಂಪರ್ಕ ಬಂದೊಡನೆ ಬದಲಾಗುತ್ತಾಳೆ. ನಿಸರ್ಗದ ಮರಿಯಂತೆ ಕಾಣುವ ಕರಿಯನ ಸಂಪರ್ಕ ಬಂದೊಡನೆ ಗೌರಿ ಬದಲಾಗುತ್ತಾಳೆ. ಇಬ್ಬರೂ ಸಾಯುತ್ತಾರೆ. ಗಣಪಯ್ಯನ ಕೆಡುಕಿಗೆ ಇಲ್ಲಿಯ ಸದ್ಗುಣಶಕ್ತಿಯು ಸವಾಲಾಗುತ್ತದೆ, ಕಾದಂಬರಿಯಲ್ಲಿರದ್ದಿದ್ದರೂ ವಸ್ತುವಿನ ತೌಲನಿಕ ದೃಷ್ಟಿಯಿಂದ. ಈ ಮೌಲ್ಯಬಂಧ ಮತ್ತು ಪ್ರಜ್ಞಾಬಂಧಗಳೆರಡೂ ಹೀಗೆ ಸುರಳೀತವಾಗಿ ಸಂಭವಿಸುತ್ತ ಹೋಗುವುದು ಈ ಬರಹಗಾರನ ದೊಡ್ಡ ಶಕ್ತಿಯಾಗಿ ನನಗೆ ಕಂಡಿದೆ. ಇದು ಕಾದಂಬರಿಯಲ್ಲಿ ಎಲ್ಲ ಕಡೆ ಒಂದೇ ರೀತಿಯಾಗಿ ಯಶಸ್ವಿಯಾಗಿದೆ ಎಂದು ಹೇಳಲಾಗದು. ವೈಚಾರಿಕವಲ್ಲದ ಕರಿಯ, ಕೊಂಚ ವೈಚಾರಿಕವಾದ ಆದರ್ಶವಾದಿ ದುರುಗ ಮತ್ತು ಸಂಪೂರ್ಣವಾಗಿ ಪಶ್ಚಿಮದ ವೈಚಾರಿಕತೆಯನ್ನು ಮೆತ್ತಿಕೊಂಡು ಬಂದಿರುವ ಘನಶ್ಯಾಮ ಇವರೊಂದೆಡೆಗೆ ಇದ್ದಾರೆ. ಇವರಲ್ಲಿಯೂ ಕೆಲವು ಮಜಲುಗಳು ಗೈರುಹಾಜರಾಗಿರುವುದರಿಂದ ಓದುಗನ ಪ್ರಜ್ಞೆ ಈ ಬಂಧವನ್ನು ಕೆಲವೊಮ್ಮೆ ಕಷ್ಟಪಟ್ಟು ಹಿಡಿಯಬೇಕಾಗುತ್ತದೆ. ಇನ್ನೊಂದೆಡೆಗೆ ಕೆಲವಂಶ ಮರಣದಿಂದ ಇನ್ನು ಕೆಲವಂಶ ಹುಟ್ಟಿನಿಂದಲೇ ಪಡೆದ 'ದಿವ್ಯ ಬುದ್ಧಿ'ಯಿಂದ ಇದೆಲ್ಲವನ್ನು ಎದುರಿಸುತ್ತ, ನೋಡುತ್ತ ಮತ್ತು ಹೆಚ್ಚಾಗಿ ಮೌನದಲ್ಲಿ ನುಡಿಯುವ ಗೌರಿ ಇದ್ದಾಳೆ. ಇದೆಲ್ಲದರ ಮಧ್ಯೆ ಗಣಪಯ್ಯನ ಕೆಡುಕಿನ ಸ್ಥಾನವೇನು ಎಂಬ ವಾಸ್ತವದ ನೆಲೆ ಬೇಕು ಆದರೆ ಅದು ಇನ್ನೊಂದು ಜಗತ್ತಿನೊಡನೆ ಸ್ಪರ್ಶ ಪಡೆಯುವಂತೆ– ಕಾದಂಬರಿಯ ಬಂಧದಲ್ಲಿ– ಚಿತ್ರಿತವಾಗಬೇಕು. ಅದಕ್ಕೇ ಗಣಪಯ್ಯ, ದುರುಗ, ಸರಸ್ವತಿ, ಯಮುನ ಇವರೆಲ್ಲಾ ಜಾನಪದೀಯವೆಂಬಂತೆ ಚಿತ್ರಿತವಾಗಿರುವುದು.

ಕಾದಂಬರಿಯು ಅನೂಹ್ಯದಿಂದ ಮತ್ತು ಪ್ಯಾಸ್ಟೊರಲ್‌ನಿಂದ ನಿಖರ ವಾಸ್ತವದೆಡೆಗೆ ನಡೆಯುತ್ತದೆ. ಇಂಗ್ಲಂಡಿನಿಂದ ಬರುವ ಘನಶ್ಯಾಮನು ಅಂಥ ವಾಸ್ತವವನ್ನು ತರುತ್ತಾನೆ. ಇಲ್ಲಿ ಘನಶ್ಯಾಮನಾಡುವ ಮಾತುಗಳು ವಾಸ್ತವದಿಂದ ಕೂಡಿವೆ. ವೈಚಾರಿಕತೆಯಿಂದ ಕೂಡಿವೆ ನಿಜ. ಆದರೆ ಇವು ಕಾದಂಬರಿಯ ಪ್ರಾರಂಭದ ಶಕ್ತಿಯೆದುರು ಪೇಲವವಾಗಿ ಕಾಣುತ್ತವೆ. ಮಂಜಯ್ಯನವರ ಮಗಳು ವಿಮಲ ವಿಧವೆ. ಗಣಪಯ್ಯನ ಮಗಳು ಸರಸ್ವತಿಯಂತೆ. ಗಣಪಯ್ಯನ ಕೆಡುಕು ಸರಸ್ವತಿಯ ಪ್ರೇಮಿ ದುರುಗನನ್ನು ಬಲಿ ತೆಗೆದುಕೊಳ್ಳುತ್ತದೆ. ಆದರೆ ಅದೇ ವಿಮಲಳು ವಿಧವೆಯಾದರೂ ಕೂಡ, ಸರಸ್ವತಿಯ ಜಾತಿಗೆ ಸೇರಿದ್ದರೂ ಕೂಡ ಕ್ರಿಶ್ಚಿಯನ್ ಕಾರು ಡ್ರೈವರನೊಡನೆ ಸಂಬಂಧ ಬೆಳೆಸಿದಾಗ ಯಾವುದೇ ಮರಣ ಸಂಭವಿಸುವುದಿಲ್ಲ. ಹೀಗಾಗಿ ಕರಿಯ, ದುರುಗರ ಘರಣಕ್ಕೆ ಆರ್ಥಿಕ ಸ್ಥಿತಿಯೂ ಕಾರಣವಾಗಿತ್ತೆಂಬುದನ್ನು, ವಿಮಲ -

ಮಿಂಗೇಲನ ಸಂಬಂಧದ ಯಶಸ್ಸಿನಲ್ಲಿ ಚಿತ್ರಿಸುತ್ತಿರುವಂತೆ ತೋರುತ್ತದೆ. ಹಾಗೆಯೇ ವಿಮಲ ಮಿಂಗೇಲರ ಸಂಬಂಧದಲ್ಲಿ ಹುಟ್ಟಿದ ಶಿಶುವನ್ನು ಅಕ್ಕು ತನ್ನದೆಂಬಂತೆ ಸಾಕುವ ಪರಿಯಲ್ಲಿ ಆಧುನಿಕತೆಯ ಸೋಂಕಿಲ್ಲದ ಅಕ್ಕು ಬೆಳೆಯುವ ಪರಿಯು ಅನನ್ಯವಾದುದು. ಈ ವಿಷಯಗಳನ್ನು ಏಕೆ ಚರ್ಚಿಸುತ್ತಿದ್ದೇನೆಂದರೆ. ಮರಣ ಹೇಗೆ 'ಜೀವ'ವನ್ನು ಬದಲಾಯಿಸುತ್ತದೆಯೋ ಹಾಗೆಯೇ 'ಹುಟ್ಟು' ಕೂಡ ಬದಲಾಯಿಸುತ್ತದೆ. ಕರಿಯ. ಗಂಗೆಯರು ಗೌರಿಯ ಜೀವನದಲ್ಲಿ ಸತ್ತೂ ಇದ್ದಾರೆ – ಕರಿ ಚುಕ್ಕಾಗಿ. ಹುಲಿಯುಗುರಾಗಿ. ಇದರ ಇನ್ನೊಂದು ಮಹತ್ವದ ಮಗ್ಗುಲೆಂದರೆ ಕಾದಂಬರಿಯ ಗುತ್ತವಾದ ವಿವರಗಳಲ್ಲಿ. ಬೀಜ ಮೊಳಕೆಯೊಡೆಯುವುದು. ಮಳೆ ಬರುವುದು ಮೋಡ ಕದಲುವುದು. ಹಾವು ಹರಿಯುವುದು. ಬೆಟ್ಟದಲ್ಲಿಯ ಮರದ ನೆರಳು ಇತ್ಯಾದಿಯಾಗಿ ಎಲ್ಲವೂ ಈ 'ಮರಣ-ಹುಟ್ಟಿನ' ಬದಲಾಯಿಸುವ ನಿಗೂಢ ಶಕ್ತಿಗೆ ಸಂವಾದಿಗಳೋ ಎಂಬಂತೆ ವರ್ಣಿತವಾಗಿವೆ. ಕಾದಂಬರಿಯ ವಸ್ತು ವಿಷಯಕ್ಕೆ ಕಾದಂಬರಿಯ ಭಾಷೆ ಮತ್ತು ವಿವರಗಳು ಸಂವಾದಿಯಾಗದ ಹೊರತು ಅಲ್ಲಿಯ ವಿವರಗಳು ಸೃಷ್ಟ್ಯಾತ್ಮಕವಾಗುವುದಿಲ್ಲವೆಂದು ನಾನು ಬಹು ಆಳವಾಗಿ ನಂಬಿದ್ದೇನೆ. ಗಾರ್ಕಿ. ಟಾಲ್‌ಸ್ಟಾಯ್‌ರಲ್ಲಿ ಅಂಥ ಗುಣ ಕಂಡಿದ್ದೇನೆ. ಬಹು ಚರ್ಚಿತವಾದ ಕನ್ನಡದ ಬಹು ದೊಡ್ಡ ಗಾತ್ರದ ಕಾದಂಬರಿಗಳಲ್ಲಿ ಕೂಡ ಅದನ್ನು ಕಾಣದೆ ಬಹಳ ಸಲ ಈ ಗುಣ ಕನ್ನಡಕ್ಕೆ ಇನ್ನೂ ಪರಕೀಯವಾಗಿ ಉಳಿದಿದೆ ಎಂದುಕೊಂಡಿರುವೆ. ಆದರೆ 'ದಿವ್ಯ' ಕಾದಂಬರಿಯಲ್ಲಿ ಅಂಥದೊಂದು ಪ್ರಯತ್ನವಿದೆ. ಹುಟ್ಟು ಸಾವಿನ ಗರ್ಭದಲ್ಲಡಗಿದ ಬದಲಾಯಿಸುವ ಶಕ್ತಿಯೇ ಸುತ್ತಲಿನ ನಿಸರ್ಗವನ್ನೂ ಬದಲಾಯಿಸುತ್ತದೆಂಬಂತೆ ಬರುವ ಕೆಲವು ವಿವರಗಳು ಮನಸ್ಸನ್ನು ಬಹು ಸಮಯ ಆವರಿಸುವಂಥವು. ಕೆಳಗೆ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇನೆ :

"ಇಡೀ ಆಕಾಶ ನಕ್ಕಂತೆ. ಹೊಳವಾಗುವುದುಂಟು. ಆದರೆ ಯಾವ ಹೊತ್ತಲ್ಲಿ ಹೇಳುವಂತಿಲ್ಲ. ನಕ್ಕ ಆಕಾಶ ಇದ್ದಕ್ಕಿದ್ದಂತೆ. ಕಪ್ಪಾಗಿ. ಮಿಂಚು ಈ ಕಪ್ಪನ್ನು ಸೀಳಿ. ಕಾಡು ಪ್ರಾಣಿಯೊಂದು ಆಕಾಶದಲ್ಲಿ ಅಲೆಯುವಂತೆ ಗುಡುಗು ಓಡಾಡಿ. ಥಟ್ಟನೇ ಹೀಗೆ ಓಡಾಡಿದ್ದೇ ಕ್ರೂರ ಸಿಡಿಲಾಗಿ ದೂರದ ಬೆಟ್ಟವನ್ನು ಢಿಕ್ಕಿಸಿ ಬಡಿದು. ಏನೂ ತೋರದೆ ಕೂತವರನ್ನು ದಂಗು ಬಡಿಸುತ್ತದೆ."

"ಸಣ್ಣನೆಯ ಚಳಿಯಲ್ಲಿ ಇಡೀ ಭೂಮಿಯನ್ನೂ ಅಪಾರ ನೀಲಿಯ ಆಕಾಶವನ್ನೂ ಏನೀಗ ಕಾವು ಕೂತು ಆವರಿಸಿಕೊಂಡಿದೆಯೊ. ಅಥವಾ ಏನೂ ಇಲ್ಲವೊ. ಎಚ್ಚರವೆಷ್ಟು ಸತ್ಯವೋ ಕನಸೂ ಅಷ್ಟೇ ಸತ್ಯವೆಂದುಕೊಳ್ಳುವ ಈ ಮೈಯ ಭ್ರಮೆಯೋ. ಗಂಗೆ ಈ ಲೋಕದಿಂದ ಮಾಯವಾಗಿ ಬಿಟ್ಟಳು. ಕನಸಿನಂತೆ ಈಗ ಇದ್ದವಳು ಮತ್ತೆ ಇರಲಿಲ್ಲ. ಆಕಾಶದ ದಿವ್ಯ ನಿರ್ಲಕ್ಷ್ಯದಲ್ಲಿ ಯಾವುದಕ್ಕೂ ಅರ್ಥವಿಲ್ಲ ಎಂಬ ವಾದ ಕೇಶವನಿಗೆ ನೆನಪಾಯಿತು."

ಗೌರಿಯ ಸಹವಾಸದಲ್ಲಿ ವಿಮಲ ಬದಲಾಗುತ್ತಾಳೆ. ಮಂಜಯ್ಯ ಸಮಾಧಾನಿಯಾಗುತ್ತಾರೆ ರೋಗದಲ್ಲೂ ಕೂಡ. ಮಿಂಗೇಲನು ಗಂಡನ ಸ್ಥಾನ ಪಡೆಯುತ್ತಾನೆ. ಅವ್ಯಕ್ತದಿಂದ ವ್ಯಕ್ತದೆಡೆಗೆ ಕಾದಂಬರಿಯು ನಡೆಯುತ್ತದೆ. ಮಂಜಯ್ಯನವರು 'ಇಟ್ಟುಕೊಂಡಿದ್ದ' ಮೀನಾಕ್ಷಿಯ ಮಗಳು ವಿನೋದಿನಿಯು ಕೂಡ ಗೌರಿಯಿಂದ ಪ್ರಭಾವಿತಳಾಗುತ್ತಾಳೆ. ಅವಳು ಕೇಶವನಲ್ಲಿ ಅನುರಕ್ತಳಾಗುತ್ತಾಳೆ. ಗೌರಿಯು ಘನಶ್ಯಾಮನನ್ನು ಮದುವೆಯಾಗಲು ಒಪ್ಪುತ್ತಾಳೆ. ಘನಶ್ಯಾಮನು ತನ್ನ ಸಮಾಜವಾದಿ ಧೋರಣೆಯಿಂದ ಎಲ್ಲ ವ್ಯವಸ್ಥೆಯನ್ನೂ ಬದಲಾಯಿಸುತ್ತಾನೆ. ಒಂದು ಅರ್ಥದಲ್ಲಿ ಇದೆಲ್ಲವೂ ಸಿನಿಮೀಯ ಎನ್ನದೆ ವಿಧಿ ಇಲ್ಲ. ಹೀಗೆ ರೂಪುಗೊಂಡ ಕಾದಂಬರಿ ಹೀಗೆ ಕೊನೆಯಾಗಬೇಕೆ ಎಂಬ ಪ್ರಶ್ನೆಯು ಸಹಜವಾಗಿ ಕಾಡುತ್ತದೆ. ಘನಶ್ಯಾಮನ ಕೊನೆಕೊನೆಯ ಮಾತುಗಳಂತೂ ಕಾದಂಬರಿಯ ಒಟ್ಟು ಸ್ವರೂಪಕ್ಕೇ ಹೊರತಾದವುಗಳೆಂದೆನಿಸುತ್ತದೆ. ಹೀಗಾಗಲು ಕಾರಣವೇನು ? ಒಟ್ಟಿನಲ್ಲಿ ಕಾದಂಬರಿಯ ಪ್ರಾರಂಭದಲ್ಲಿ ಉಂಟಾಗುವ ನಿಗೂಢತೆಯ ಮತ್ತು

ಅನನ್ಯತೆಯ ಸ್ಪರ್ಶ ಕೊನೆಗೆ ವಾಸ್ತವದಲ್ಲಿ ಇಷ್ಟು ಒರಟಾಗಿ ಕೊನೆಯಾದುದನ್ನು ಕಂಡು ಆಶ್ಚರ್ಯವೆನಿಸುತ್ತದೆ. ಪ್ರಖರ ವೈಚಾರಿಕ ಮನಸ್ಸೊಂದು ಹೃದಯದಿಂದ ಬರೆಯುತ್ತಿದ್ದುದು ಸಡನ್ನಾಗಿ ಮಿದುಳಿನಿಂದ ಬರೆಯಲು ಪ್ರಾರಂಭಿಸಿ ಕಾದಂಬರಿಯನ್ನು ಕೊನೆಗೊಳಿಸಿದ ರೀತಿಯು ನಿರುತ್ಸಾಹವನ್ನೇ ಹುಟ್ಟಿಸುತ್ತದೆ. ಮೊದಲನೆಯದಾಗಿ. ಎಲ್ಲವೂ 'ಮಂಗಲಮಯ' ವಾಗಿಯೇ ಕೊನೆಗೊಳ್ಳಬೇಕಾದ ಆವಶ್ಯಕತೆಯು ಕಾದಂಬರಿಯ ಆಂತರಿಕ ಆವಶ್ಯಕತೆಯೇ ಅಲ್ಲ. ಇಲ್ಲಿ ನನಗೆ ಹೀಗೆ ಕಾಣುತ್ತದೆ: ಅನಂತಮೂರ್ತಿಯವರಲ್ಲಿ conceptual ಚಿಂತನೆ ಮತ್ತು ಹೃದಯದ ಚಿಂತನೆ ಇವು ಸಮಾನವಾಗಿ ನಡೆದಿರುತ್ತವೆ. ಕಾದಂಬರಿ - ಕಥೆ ಬರೆಯುವಾಗಲೂ ಕೂಡ. ಈ ಕಾದಂಬರಿಯ ಕೊನೆಗೆ conceptual ಅನಂತಮೂರ್ತಿ. ಹೃದಯದ ಅನಂತಮೂರ್ತಿಯನ್ನು ಗೆದ್ದು ಬಿಟ್ಟು ಕಾದಂಬರಿಯ ಕೊನೆಯು ಈ ಅವಸ್ಥೆಯನ್ನು ತಲುಪಿದೆ ಎಂದು ನನಗನ್ನಿಸುತ್ತದೆ. ಬದಲಾವಣೆಯ ಟಿಸಿಲೊಡೆದ ಕಾದಂಬರಿಯ ಪ್ರಾರಂಭವು ಹೀಗೆ ಸಮಾಜವಾದಿಯ ಪ್ರಾಥಮಿಕ ಚಿಂತನೆಯಲ್ಲಿ ಕೊನೆಗೊಳ್ಳುವುದು ಕಾದಂಬರಿಯನ್ನು ನಾನು ಗ್ರಹಿಸಿದ ರೀತಿಯಲ್ಲಿ ಸಾಂಗತ್ಯದ ಅಭಾವವನ್ನು ಸೂಚಿಸುತ್ತದೆ. ಕೃಷ್ಣಶಾಸ್ತ್ರಿಗಳ ದೃಷ್ಟಿಯಲ್ಲಿ ಇದೆಲ್ಲವೂ ಪೂರ್ವ ನಿರ್ಧಾರಿತವಾದದ್ದು. ಕೃಷ್ಣಶಾಸ್ತ್ರಿಗಳ ಜ್ಯೋತಿಷ್ಯ ಮತ್ತು ಅನುಭಾವದ ಮಾತುಗಳಲ್ಲಿ ಈ 'ಮಂಗಲಮಯ' ಕೊನೆ ಇರುವುದರಿಂದ ಇದು ಹೀಗೆ ಕೊನೆಯಾಗಿದೆ ಎಂಬಂತೆ ಕಾದಂಬರಿಯು ಕೊನೆಯಾಗಿದೆ. ಇದನ್ನು ಒಪ್ಪುವುದೂ ಕಷ್ಟ. ಏಕೆಂದರೆ ಮಂಜಯ್ಯನವರ ಸ್ವಾತಂತ್ರ್ಯಾನಂತರದ ಬ್ರಾಹ್ಮಣ ವರ್ಗದ ಶ್ರೀಮಂತಿಕೆಯ ಪ್ರತಿನಿಧಿತ್ವದ ವರೆಗೆ ಕಾದಂಬರಿಯು, ಅಮೂರ್ತದಿಂದ ಮೂರ್ತಕ್ಕೆ. ಭಾವಕೋಶದಿಂದ ವಸ್ತುಕೋಶಕ್ಕೆ ಮತ್ತು ಮುಗ್ಧತೆಯಿಂದ ಮರಣಸ್ಪರ್ಶಿತ ಮಾಗುವಿಕೆಯತ್ತ ಹೆಜ್ಜೆ ಹಾಕುತ್ತಿರುವಾಗ ಕೃಷ್ಣಶಾಸ್ತ್ರಿಗಳ ಮಾತಿನ ಸಮರ್ಥನೆಯ ಆವಶ್ಯಕತೆ ಉಂಟಾಗುವಷ್ಟು 'ಮಂಗಲಮಯ' ವಾಗಿ ಕಾದಂಬರಿಯು ಕೊನೆಗೊಳ್ಳುವ ಕಾರಣವೇನಿದೆ ? ನನಗಂತೂ ಕಾರಣ ಕಂಡಿಲ್ಲ. ವೈಚಾರಿಕ ಅನಂತಮೂರ್ತಿ. ಹೃದಯವಂತಿಕೆಯ ಮೇಲೆ ತಮ್ಮ ಛಾಪು ಬಿಡಲೇಬೇಕೆಂಬಂತೆ ತೋರುತ್ತದೆ. ಇದನ್ನುಳಿದರೆ ಕಾದಂಬರಿಯು ನಾನು ಈ ಮೊದಲೇ ವಿವರಿಸಿದಂತೆ ನಮ್ಮ ಸಾಹಿತ್ಯಕ್ಕೆ ಹೊಸ ಗಾಳಿಯನ್ನು ತರುತ್ತದೆ.

ಇಲ್ಲಿ ಕಾರಂತರು. ಎಂ. ಕೆ. ಇಂದಿರಾ. ಇ. ಎಮ್. ಫಾಸ್ಟರ್. ಮಾರ್ಕ್ವೆಜ್. ಬೇಂದ್ರೆ. ಅಡಿಗರು – ಇವರೆಲ್ಲರ 'ಧ್ವನಿ ಪ್ರಭಾವ' ವಿದೆ. ಇದನ್ನು ಮೈಗೂಡಿಸಿಕೊಂಡು ಬರೆಯುವ ಅದಮ್ಯ ಉತ್ಸಾಹವಿದೆ. ಹಾಗೆಯೇ ಇವರೆಲ್ಲರ ಭಾವ ಪ್ರಪಂಚದ ತುಲನಾತ್ಮಕ 'ಹೃದಯ ಮಂಥನ' ವಿದೆ. ಇದನ್ನು 'ಪ್ರಭಾವ' ಮತ್ತು 'ಕೃತಿ ಚೌರ್ಯ' ಇತ್ಯಾದಿ ಪದಗಳಿಂದ ವಿವರಿಸಲಾಗದು. ಏಕೆಂದರೆ ಕಾಡುವ ಭಾವಕೋಶಗಳಿಗೆ ರೂಪಕಗಳನ್ನು ಹಿಡಿಯುವಾಗ ನಡೆವ ಕ್ರಿಯೆ ಇದು.

'ದಿವ್ಯ' ಕಾದಂಬರಿಯು ನಮ್ಮನ್ನು ಮತ್ತೆ ಜೀವನದ ಅನೂಹ್ಯಗಳ ಬಗ್ಗೆ. ಹೃದಯವಂತಿಕೆಯ ಬಗ್ಗೆ ಮತ್ತು ನಮ್ಮ ಅಂತರಾಳದ ವಿಸ್ತಾರದ ಬಗ್ಗೆ ಮತ್ತೊಮ್ಮೆ ಯೋಚಿಸುವಂತೆ ಮಾಡುವ ಕಾದಂಬರಿ. ಇದು ಹೊಸ ಬರವಣಿಗೆಗೆ ಹೊಸ ದಿಕ್ಕುಗಳನ್ನು ತೆರೆಯಬಲ್ಲದು. 'ವರ್ಗ ಸಮಾಜದ' ಚಿಂತನೆಯ ಫಲವಾಗಿ ಬಂದ ಪರಿಕರಗಳು ಪ್ರಾಯಶಃ ಈ ಕಾದಂಬರಿಯ ಸಾಮರ್ಥ್ಯವನ್ನು ಅಳೆಯುವಲ್ಲಿ ವಿಫಲವಾದಾವು.

● ▼

ಮಾಧವ ಕುಲಕರ್ಣಿ
EWS 155 (OYHS), ೯ ನೇ ಮುಖ್ಯ ರಸ್ತೆ. ಪ್ರಥಮ ಹಂತ
ಹೆಬ್ಬಾಳ್. ಮೇಟಗಳ್ಳಿ ಅಂಚೆ. ಮೈಸೂರು - ೫೭೦ ೦೧೬

ಗೊರೂರರ ಸಾಹಿತ್ಯದಲ್ಲಿ ಸಾಮಾಜಿಕ ಸಂಘರ್ಷ

ಜಯದೇವಪ್ಪ ಜೈನಕೇರಿ ▲ ಪರಿಚಯ

ಕಳೆದ ಶತಮಾನದಲ್ಲಿ ಕನ್ನಡ ನಾಡು ಕಂಡ ಶ್ರೇಷ್ಠ ಲೇಖಕರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರು ಪ್ರಮುಖರು. ಹಾಸನ ಜಿಲ್ಲೆ ಗೊರೂರು ಗ್ರಾಮದಲ್ಲಿ ೪-೭-೧೯೦೪ ರಂದು ಅವರು ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್ ಮತ್ತು ತಾಯಿ ಲಕ್ಕಮ್ಮ. ಇವರ ಹನ್ನೆರಡು ಮಕ್ಕಳಲ್ಲಿ ರಾಮಸ್ವಾಮಿ ಎರಡನೆಯವರು. ಪುರೋಹಿತರಾಗಿದ್ದ ತಂದೆ ಸಂಸ್ಕೃತ ವಿದ್ವಾಂಸರಾಗಿದ್ದರು. ಸತ್ಯ ಶುದ್ಧ ಕಾಯಕ ಜೀವಿಗಳ ಪುತ್ರರಾದ ರಾಮಸ್ವಾಮಿಯವರೂ ಶಿಸ್ತುಬದ್ಧ. ನಿಯಮಬದ್ಧ ಜೀವನ ನಡೆಸುತ್ತ ಬಾಲ್ಯ ಕಳೆದರು. ತುಂಬಿದ .ಮನೆಯಲ್ಲಿ ಬೆಳೆದ ಗೊರೂರ ಅವರು ತಮ್ಮ ಪಾಲಿನ ಕೆಲಸದಲ್ಲಿ ಸುಖ - ನೆಮ್ಮದಿಯನ್ನು ಕಂಡವರು.

ಕನ್ನಡ ಗದ್ಯ ಸಾಹಿತ್ಯಕ್ಕೆ ಗ್ರಾಮೀಣ ಬದುಕಿನ ಸತ್ವವನ್ನು ತುಂಬಿ ವೈವಿಧ್ಯವನ್ನು ತಂದವರಲ್ಲಿ ಗೊರೂರರು ಮುಖ್ಯರು. ಗ್ರಾಮೀಣ ಜೀವನದ ದಟ್ಟ ಅನುಭವಗಳನ್ನು. ಜನಪದ ಸೊಗಡನ್ನು ಅವರ ಎಲ್ಲ ಲೇಖನಗಳಲ್ಲಿ ಕಾಣಬಹುದು. ತಮ್ಮ ನಡೆ - ನುಡಿ. ಆಚಾರ - ವಿಚಾರಗಳಲ್ಲಿ ಜನಪದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವರು. ಬಾಲ್ಯದಲ್ಲಿಯೇ ಗಾಂಧೀಜಿಯವರ ಅಹಿಂಸಾ ಚಳವಳಿಯಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಗಾಂಧೀಜಿಯವರ ತತ್ವಗಳ ಜೊತೆಗೆ ಅವರ ಜೀವನ ಶೈಲಿಯನ್ನು ತಮ್ಮದಾಗಿಸಿಕೊಂಡರು. ಗಾಂಧೀಜಿಯವರ ಸರಳ ಜೀವನ. ಚಿಂತನೆ. ಅಹಿಂಸೆ. ಸರ್ವೋದಯ ಚಾರಿತ್ರ್ಯಗಳನ್ನು ಸ್ವತಃ ಬದುಕಿದರು. ಭಾರತೀಯ ಸಂಸ್ಕೃತಿಯನ್ನು ಶೋಧಿಸುವ ರಾಷ್ಟ್ರೀಯವಾದಿ ಗೊರೂರರು. ಜನಪದರ, ಜನಸಾಮಾನ್ಯರ ಸಾಹಿತ್ಯ ರಚಿಸಿದರು. 'ಬೆಸ್ತರ ಕರಿಯ', 'ಗರುಡಗಂಬದ ದಾಸಯ್ಯ' ಮುಂತಾದವರು ಅವರ ಕಥೆಗಳ ನಾಯಕರು. ಕನ್ನಡ ಜಾನಪದ ಕ್ಷೇತ್ರದಲ್ಲಿ ೧೯೩೦ ರಿಂದಲೂ ಕೆಲಸ ಮಾಡುತ್ತ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸಿ. ಪ್ರಕಟಿಸುತ್ತ ಬಂದಿದ್ದಾರೆ. ಹಳ್ಳಿ ಹಾಡುಗಳನ್ನು. ಗಾದೆಗಳನ್ನು. ಸೋಬಾನ ಪದಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಳ್ಳಿಯ ಸಾಂಸ್ಕೃತಿಕ ಜೀವನದ ರೀತಿಗಳನ್ನು ಸಾಹಿತ್ಯ ರೂಪದಲ್ಲಿ ಸರಳವಾದ ಆಡುಭಾಷೆಯಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಹಳ್ಳಿಯ ಜನಸಾಮಾನ್ಯರ ಜೀವನ ವಿಧಾನಗಳನ್ನು ವೈವಿಧ್ಯತೆಗಳನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸಿದ್ದಾರೆ. ಅವರ ಸಾಹಿತ್ಯ ಸೇವೆ 'ಹಳ್ಳಿಯ ಚಿತ್ರಗಳು' ಎಂಬ ಕೃತಿಯಿಂದ ಪ್ರಾರಂಭವಾಯಿತು. ಸುಮಾರು ೫೦ ವರ್ಷಗಳ ಕಾಲ ಗೊರೂರರ ಕೃತಿಗಳಲ್ಲಿ ಹೇಮಾವತಿ ನದಿಯೂ ಆ ನದಿ ದಂಡೆಯ ವಿಶಿಷ್ಟ ಬದುಕೂ ಪ್ರೇರಕ ಶಕ್ತಿಗಳಾಗಿವೆ. ಹೇಮಾವತಿ ದಡದ. ಸಾಂಸ್ಕೃತಿಕ ಜೀವನದ ವಿವಿಧ ಮಜಲುಗಳ ಕೈಗನ್ನಡಿಗಳಾಗಿವೆ ಅವರ ಕೃತಿಗಳು. ಗೊರೂರರ ಕೃತಿಗಳಲ್ಲಿ ಗ್ರಾಮ ಜೀವನದ ಸಮೃದ್ಧ ಚಿತ್ರಣವಿದೆ. ತಿಳಿಹಾಸ್ಯ ಲೇಪಿಸಿ ಬರೆಯುವ ಅವರ ಶೈಲಿ ವಿಶಿಷ್ಟವಾದದ್ದು. ಅನನ್ಯವಾದದ್ದು. ತಾವು ಬದುಕುತ್ತಿರುವ ಜನಪದ ಜೀವನದ ಅವಿಭಾಜ್ಯ ಅಂಗವಾಗಿ, ತಾವು ಕಂಡುಂಡ ಪರಿಸರವನ್ನು. ಪ್ರಕೃತಿಯನ್ನು ತಮ್ಮ ಕೃತಿಗಳಲ್ಲಿ ಪುನರ್‌ಸೃಷ್ಟಿಸಿದ್ದಾರೆ. ಜೊತೆಗೆ ಈ ಕಾರ್ಯದಲ್ಲಿ ತಾವೂ ಆ ಪ್ರಕೃತಿಯ ಭಾಗವೇ ಆಗಿದ್ದಾರೆ.

ಹೇಮಾವತಿಯಲ್ಲಿ ಗೊರೂರರೂ ಗೊರೂರರಲ್ಲಿ ಹೇಮಾವತಿಯೂ ನಿರಂತರವಾಗಿ ಚಲನಶೀಲರಾಗಿರುವುದನ್ನು ಅವರ ಕೃತಿಗಳಲ್ಲಿ ಕಾಣಬಹುದು. ಹೇಮಾವತಿಯಂತೆಯೇ ಗೊರೂರರು ತಮ್ಮ ಇತಿಮಿತಿಗಳ ನಡುವೆಯೂ ಜೀವಸ್ಪಂದಿಯಾಗಿ ಪ್ರತಿಕ್ರಿಯಿಸಿದ್ದಾರೆ. ಅವರ

ಕೃತಿಗಳು ಸೃಷ್ಟಿ ಸಂದರ್ಭಗಳ ಹಿನ್ನೆಲೆಯಲ್ಲಿರುವ ಪ್ರಾಕೃತಿಕ, ಭೌಗೋಳಿಕ ಅಧ್ಯಯನವೇ ಆಗಿದೆ. ಅವರ ಕೃತಿಗಳಲ್ಲಿ ಗ್ರಾಮ ಜೀವನದ ಜೊತೆಗೆ ಜೀವನ ಮೌಲ್ಯಗಳು ಮತ್ತು ಸಾಹಿತ್ಯ ಸಂವೇದನೆ ಮೇಳೈಸಿದೆ. ರಾಮಸ್ವಾಮಿ ಅಯ್ಯಂಗಾರ್ ಹೆಸರು ಹಿನ್ನೆಲೆಗೆ ಹೋಗಿ, ಅವರ ಬದುಕಿನ ಭಾಗವಾದ 'ಗೊರೂರು' ಅವರ ಸಾಂಕೇತಿಕ ನಾಮಸೂಚಿಯಾಗಿದೆ. ಕರ್ನಾಟಕದ ಸಾವಿರಾರು ಹಳ್ಳಿಗಳಲ್ಲಿ ಒಂದಾಗಿರುವ ಗೊರೂರಿಗೆ ಸಾಹಿತ್ಯಕವಾಗಿ ಉನ್ನತ ಸ್ಥಾನ ದೊರಕಿಸಿಕೊಟ್ಟ ಹೆಗ್ಗಳಿಕೆ ರಾಮಸ್ವಾಮಿ ಅಯ್ಯಂಗಾರರಿಗೆ ಸಲ್ಲುತ್ತದೆ. ಗೊರೂರು ಎಂದ ಕೂಡಲೆ ನಮ್ಮ ಕಣ್ಮುಂದೆ ನಿಲ್ಲುವುದು ರಾಮಸ್ವಾಮಿ ಅಯ್ಯಂಗಾರರ ಚಿತ್ರವೇ.

ಗೊರೂರರ ಕೃತಿ 'ಬೈಲಹಳ್ಳಿ ಸರ್ವೆ' ಓದಿದಾಗ ನಮ್ಮ ಮನದಲ್ಲಿ ಅವರೊಬ್ಬ ಸಮಾಜವಿಜ್ಞಾನಿಯಾಗಿ ಕಂಡುಬರುತ್ತಾರೆ. ಹಳ್ಳಿಯ ಪಾರಂಪರಿಕ ಆಚರಣೆಗಳನ್ನು, ವಿಶಿಷ್ಟ ರೀತಿ - ನೀತಿಗಳನ್ನು, ನಮ್ಮ ಮುಂದೆ ಚಿತ್ರಿಸುವ ಅವರ ರೀತಿ ಅನನ್ಯವಾದದ್ದು. ಆತ್ಮೀಯವಾಗಿ ಮಾನವೀಯ ಸಂಬಂಧಗಳನ್ನು ಚಿತ್ರಿಸಿ, ಗ್ರಾಮೀಣ ಸೊಗಡನ್ನು ಓದುಗರಿಗೆ ಉಣಬಡಿಸಿದ್ದಾರೆ. ಜೊತೆಗೆ ಕೆಲವು ಗ್ರಾಮೀಣ ಪದ್ಧತಿಗಳನ್ನು ತಿಳಿ ಹಾಸ್ಯದೊಂದಿಗೆ ವಿಡಂಬನೆ ಮಾಡುವ ಮೂಲಕ, ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಗಾಂಧೀಜಿಯವರ ಸಂಪರ್ಕದಿಂದ ಅವರ ಚಿಂತನೆಗಳಿಂದ ಪ್ರಭಾವಿತರಾದ ಗೊರೂರರು, ಉದಾರ ಬದುಕಿನ ರಾಷ್ಟ್ರೀಯವಾದಿಯಾಗಿ ಪರಿವರ್ತನೆಗೊಂಡರು. ಶುದ್ಧ ಖಾದೀಧಾರಿಗಳಾಗಿ ಸರಳ ಜೀವನದ, ಸರ್ವೋದಯ ಕಾರ್ಯಕರ್ತರಾಗಿ ರೂಪುಗೊಂಡರು. ಯಾವುದೇ ಜಾತಿಯನ್ನು ವೈಭವೀಕರಿಸದೆ, ಯಾವುದೇ ಜಾತಿಯನ್ನು ನಿಂದಿಸದೆ ಸಮಚಿತ್ತದಿಂದ ನೋಡುವ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ದಲಿತರ ದನಿಗೆ ಹೊಸ ಆಯಾಮ ನೀಡಿದರು. ಸಮಗ್ರವಾಗಿ, ಸಾಂಸ್ಕೃತಿಕ ನೆಲೆಯಿಂದ ನೋಡುವ ಮನೋಭಾವ ತಳೆದರು. ಗೊರೂರರು, ಊರಿನವರಿಗೆ ಅಯ್ಯಂಗಾರರಾಗಿ ಹೊರಗಿನವರಿಗೆ ಗೊರೂರರಾಗಿ ವಿಶಿಷ್ಟ ವ್ಯಕ್ತಿಯಾಗಿ ಕಂಡುಬರುತ್ತಾರೆ. ತಮ್ಮ ಹಳ್ಳಿಯ ಜೀವನದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ದಾಖಲಿಸುತ್ತಲೇ ಪರೋಕ್ಷವಾಗಿ ಸ್ವಾತಂತ್ರ್ಯ ಚಳವಳಿಯಿಂದ ಭಾರತದಲ್ಲಾಗುತ್ತಿರುವ ಬದಲಾವಣೆಗಳನ್ನು ಗುರುತಿಸುತ್ತಾರೆ. ಗೊರೂರರ ಮುಕ್ತ ಮನಸ್ಸು ಮತ್ತು ತೆರೆದ ಹೃದಯ ಅರ್ಥವಾಗುವುದು, ಅವರು ಜಾತಿ ವಿಷಯದಲ್ಲಿ ಸುಮಾರು ೬ ದಶಕಗಳ ಹಿಂದೆಯೇ ತಾಳಿದ ಉದಾರ ನಿಲುವಿನಿಂದಾಗಿ. ಆ ಸಂದರ್ಭದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ರಾಜಕೀಯವಾಗಿ ಸ್ವಾತಂತ್ರ್ಯ ಪಡೆಯಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಕಾರಣಕ್ಕಾಗಿ ಅವರು ಆರಿಸಿಕೊಂಡಿದ್ದು ರಾಷ್ಟ್ರವಾದ, ಗಾಂಧೀವಾದ, ಗ್ರಾಮವಾದ, ಸರ್ವೋದಯ ಈ ನೆಲೆಯಲ್ಲಿ ನಾವು ರಾಮಸ್ವಾಮಿ ಅಯ್ಯಂಗಾರರನ್ನು, ಗೊರೂರನ್ನು ಗುರುತಿಸಬೇಕಾಗುತ್ತದೆ.

ಗೊರೂರರ ಕೃತಿಗಳಲ್ಲಿ ಸ್ವಾತಂತ್ರ್ಯಪೂರ್ವದ ಜೀವನವಿಧಾನ, ಪರಿಸರದ ಸಾಂಸ್ಕೃತಿಕ ಆಚರಣೆಗಳು ಸಾಹಿತ್ಯಕವಾಗಿ ದಾಖಲಾಗಿವೆ. ಸಾಹಿತ್ಯ ಸಮಾಜದ ಪ್ರತಿಬಿಂಬ ಎಂಬ ಮಾತಿದೆ. ಈ ಮಾತಿಗೆ ಗೊರೂರರ ಸಾಹಿತ್ಯ ಒಂದು ಉತ್ತಮ ನಿದರ್ಶನ. ಕನ್ನಡ ಸಂಸ್ಕೃತಿಯ ಮುಖ್ಯ ಅಂಗವಾಗಿ ಹೇಮಾವತಿ ನದಿ ನಾಗರಿಕತೆಯ ಕೇಂದ್ರಬಿಂದುವಾಗಿ ಚಿತ್ರಿತವಾಗಿದೆ. ಹೇಮಾವತಿ ನದಿಯೇ ಗೊರೂರು ಗ್ರಾಮದ, ಗೊರೂರು ಸಾಹಿತ್ಯದ ನಾಯಕಿಯಾಗಿ ಕನ್ನಡ ಸಂಸ್ಕೃತಿಯ ಭಾಷೆಯ ಬದುಕಿನ ಅನಿವಾರ್ಯ ಅಂಗವಾಗಿ ರೂಪುಗೊಂಡಿದ್ದಾಳೆ. ಜನಸಾಮಾನ್ಯರ ಧ್ವನಿಯಾಗಿ ಗೊರೂರರು ಜನಪದ ಜೀವನವನ್ನು ದಾಖಲಿಸಿದ್ದಾರೆ.

ಗೊರೂರರು ಏನು ಹೇಳುತ್ತಾರೋ ಬರೆದಿದ್ದಾರೆಯೋ ಅದನ್ನೇ ಬದುಕಿದ್ದಾರೆ. ಅವರು ಹುಟ್ಟಿದ್ದು ಗ್ರಾಮೀಣ ಪ್ರದೇಶದಲ್ಲಾದರೂ, ಬದುಕಿದ್ದು ನಗರ ಕೇಂದ್ರದಲ್ಲಿ. ಅವರು

ಪಾಠಶಾಲೆಯಲ್ಲಿ ಕಲಿತವರಲ್ಲ. ಬದುಕಿನ ಹೋರಾಟದಲ್ಲಿ ಗ್ರಾಮ ಜೀವನದಲ್ಲಿ ಗಾಂಧಿಯವರ ವಿಚಾರಗಳ ಜೊತೆಗೆ ವಿದ್ಯೆಯನ್ನು ವೃತ್ತಿಯನ್ನು ಕಲಿತವರು.

ಗಾಂಧೀ ವಿಚಾರಧಾರೆಗಳ ಜೀವನ ಶಿಕ್ಷಣವಡಿಯಲ್ಲಿ ಅವರು ಚಿತ್ರಿಸಿದ್ದು ಸರಳವಾದ ಗಾಂಧೀ ಚಿಂತನೆಗಳನ್ನೇ. ಗಾಂಧೀಜಿಯವರ ಕನಸಿನ. ಸ್ವರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸುವ ಯತ್ನ. ಗೊರೂರರ ಬರಹಗಳ ಪ್ರಧಾನ ಆಶಯ. ಈ ಕಾರಣದಿಂದಾಗಿ ಅವರ ಸಾಹಿತ್ಯ ಸೂತ್ರಬದ್ಧವಾಗಿ. ಗಾಂಧೀಜಿಯವರ ಸರಳ ಜೀವನಶೈಲಿ. ಮಾನವೀಯ ಪ್ರೀತಿ. ಅವರ ಕೃತಿಗಳಲ್ಲಿ ಗಾಢವಾಗಿ ಚಿತ್ರಿತವಾಗಿದೆ. ಒಬ್ಬ ಜನಪದ ಕವಿಯ ರೀತಿಯಲ್ಲಿ. ಸಮಾಜ ಮತ್ತು ಗ್ರಾಮೀಣ ಜನತೆಯನ್ನು ಗಾಂಧೀಜಿಯವರ ಹತ್ತಿರಕ್ಕೆ ಕರೆದೊಯ್ಯುತ್ತಾರೆ. ಗಾಂಧೀ ಬರಹಗಳನ್ನು ಪರಿಣಾಮಕಾರಿ ಶೈಲಿಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಗಾಂಧೀ ಚಿಂತನೆಗಳ ಪೂರಕ. ಪ್ರೇರಕವಾದ ಮೂಲ ಕೃತಿಗಳನ್ನೂ ರಚಿಸಿದ್ದಾರೆ.

ಗೊರೂರರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಮನ್ವಯ ಸಾಹಿತಿಯಾಗಿದ್ದಾರೆ. ಗದ್ಯ ಸಾಹಿತ್ಯದಲ್ಲಿ ಕಥೆ. ಕಾದಂಬರಿ. ಪ್ರಬಂಧಗಳ ಜೊತೆಗೆ ಅನುವಾದ. ಸಂಗ್ರಹ ಕೃತಿಗಳನ್ನು ರಚಿಸಿದ್ದಾರೆ. ಗೊರೂರರ ಕಥೆಗಳು ಕಲಾತ್ಮಕ ಲಕ್ಷಣವನ್ನು ಪಡೆಯದೇ. ಪ್ರಬಂಧಗಳ ಚೌಕಟ್ಟಿನಲ್ಲಿ ಚಿತ್ರಿತವಾಗಿವೆ. ಕಥೆಗಳಲ್ಲಿರಬೇಕಾದ ಕಲೆ. ಬಂಧ. ಸಂಕೇತ ಸೂಕ್ಷ್ಮತೆಗಳಿಲ್ಲದೇ ನೇರವಾಗಿ ಪ್ರಬಂಧಗಳಂತೆ ರಚಿತವಾಗಿವೆ. ನವಿರಾದ ಹಾಸ್ಯ ಗೊರೂರರ ಕಥೆಗಳಲ್ಲಿ ಹಾಸುಹೊಕ್ಕಾಗಿ ಬೆರೆತು. ಓದುಗರನ್ನು ಆಕರ್ಷಿಸುತ್ತದೆ. 'ಹಾರುವಯ್ಯ ಹಜಾಮನಾದದ್ದು'. 'ಆಚಾರ ಕೆಟ್ಟರು ಆಕಾರ ಕೆಡಬಾರದು' ಮತ್ತು 'ಡೊಂಕು ಬಾಲ' ಕಥೆಗಳಲ್ಲಿ ಹಾಸ್ಯ ಪ್ರವಾಹ ಹೊನಲಾಗಿ ಹರಿಯುತ್ತದೆ. 'ಬೆಸ್ತರ ಕರಿಯ' ಕಥೆಯೆನ್ನುವುದಕ್ಕಿಂತ ವ್ಯಕ್ತಿಚಿತ್ರವಾಗಿ ಹೆಚ್ಚು ಸೂಕ್ತ ಎನಿಸುತ್ತದೆ. 'ಕಮ್ಮಾರ ವೀರಭದ್ರಾಚಾರಿ'. 'ಪುಟ್ಟಮಲ್ಲಿ'. 'ಭೂತಯ್ಯನ ಮಗ ಅಯ್ಯು' ಮುಂತಾದ ಉತ್ತಮ ಕಥೆಗಳ ರಚನೆಯಲ್ಲಿ ವ್ಯಕ್ತವಾದ ಗೊರೂರರ ಪ್ರತಿಭೆ ಅನನ್ಯವಾದದ್ದು. ಗೊರೂರರ ಅನೇಕ ಕಥೆಗಳಲ್ಲಿ ಮಧ್ಯಮ ವರ್ಗದ ಜನಸಾಮಾನ್ಯರ ಸಮಸ್ಯೆಗಳು ಮುಖಾಮುಖಿಯಾಗಿ ಓದುಗರ ಸಮಸ್ಯೆಗಳಾಗುತ್ತವೆ.

ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಪುರಾಣ ಕಥೆಯನ್ನು ತನ್ನ ಜೀವಿತದ ಮೂಲಕ ಅಭಿನಯಿಸಿ ತೋರಿಸುತ್ತಾನೆಂಬ ನಂಬಿಕೆಯಿದೆ. ಅದೇ ರೀತಿಯಲ್ಲಿ ಗೊರೂರರು ತಮ್ಮ ಜೀವಿತದ ಅಂತಿಮ ಕ್ಷಣದ ವರೆಗೆ ಸಾಹಿತ್ಯ ಕ್ಷೇತ್ರದಲ್ಲಿ. ಜನಪದ ಕ್ಷೇತ್ರದಲ್ಲಿ ಮಾತ್ರವಲ್ಲ. ಗಾಂಧೀಜಿ ಕಂಡ ಸತ್ಯ, ಪ್ರಾಮಾಣಿಕತೆ, ಅಹಿಂಸೆಗಳನ್ನು ದಾಖಲಿಸುವುದರೊಂದಿಗೆ. ಸ್ವತಃ ತಾವೂ ಜೀವಿಸಿದ್ದಾರೆ. ಸಂಪ್ರದಾಯಗಳ ವಿರುದ್ಧ ಕಠಿಣರಾಗದೇ ಉದಾರ ನಿಲುವು ತಳೆದು ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದುದನ್ನು ಅವರ ಕಥೆಗಳಲ್ಲಿ ಕಾಣಬಹುದು. ಸಂಗೀತವೇ ಬದುಕಾಗುವ. ವ್ಯಕ್ತಿತ್ವವಾಗುವ ಸನ್ನಿವೇಶಗಳನ್ನು, ಸಂಗೀತಗಾರನ ಒಳಬದುಕಿನ ನೆಲೆಗಳನ್ನು 'ಮೂಲೆಗೆ ಬಿದ್ದ ವೀಣೆ' ಯಲ್ಲಿ ಚಿತ್ರಿಸಿದ್ದಾರೆ. ಗೊರೂರರ 'ಬಲಿದಾನ'. 'ದೀಪಾವಳಿ'. 'ಪರೋಪಕಾರ' ಕಥೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ನವಿರಾದ ಜನಜೀವನದ ಒಳತೋಟಿಗಳ ಚಿತ್ರಣವಿದೆ. ಹೆಣ್ಣಿನ ಸಾಮಾಜಿಕ ಬಂಧನದ ವಿರುದ್ಧವೂ ಅವರು ಉದಾರ ನಿಲುವಿನಿಂದ ಅವಳ ಬದುಕಿಗೆ. ವಿಚಾರಕ್ಕೆ ಲವಲವಿಕೆಯನ್ನು. ತುಡಿತವನ್ನು ತರಲು ಯತ್ನಿಸಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಅವರು ಹೆಚ್ಚಾಗಿ ಮಧ್ಯಮ ವರ್ಗದವರ ಸಂಸ್ಕೃತಿಯ ಚಲನೆಗೆ ಒತ್ತು ನೀಡುತ್ತಾರೆ. 'ಬಲಿದಾನ', 'ಆಗಸ್ಟ್ ೪೨' ಕಥೆಗಳು ರೋಮಾಂಚಕ ಅನುಭವವನ್ನು ಓದುಗರಿಗೆ ನೀಡುವುದರಲ್ಲಿ ಸಫಲವಾಗಿವೆ.

ಗೊರೂರರ ಅನೇಕ ಕಥೆಗಳಿಗೆ ಮೂಲ ದ್ರವ್ಯಗಳು. ಗಾಂಧಿ ತತ್ವ. ಚಿಂತನೆಗಳು. ಸಂಪ್ರದಾಯವನ್ನು ಉಳಿಸಿಕೊಂಡೇ ಅಭಿವೃದ್ಧಿ ಬದಲಾವಣೆಯನ್ನು ಅವರು ಬಯಸುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ ವೃತ್ತಿ ಜೊತೆಯಲ್ಲಿ ಜಾತಿ ವ್ಯವಸ್ಥೆಗಳು ಸೇರಿಕೊಂಡಿವೆ ಎಂಬ ಸಾರ್ವಕಾಲಿಕ ಸತ್ಯವನ್ನು ಮಾನವೀಯ ಪ್ರೀತಿಯೊಂದಿಗೆ ದಾಖಲಿಸಲು ಯತ್ನಿಸಿದ್ದಾರೆ. ಕಥೆಗಳನ್ನು, ಪ್ರಬಂಧಗಳ ರೂಪದಲ್ಲಿ ಚಿತ್ರಿಸುವುದು ಗೊರೂರರ ತಂತ್ರ ಎನ್ನಬಹುದು. ಮೇಲ್ನೋಟಕ್ಕೆ ಜೀವಸ್ಪಂದಿಯಾದ ಗೊರೂರರು ಒಳನೆಲೆಗಳಲ್ಲಿ ಜೀವನದ ಕಷ್ಟ, ನಿಷ್ಠುರಗಳನ್ನು, ಹಸಿವಿನ ಅವಾಂತರಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ದಾಸಯ್ಯನ ವಿಡಂಬನೆ ಜೊತೆಗೆ, ತಮ್ಮನ್ನೇ ತಾವು ವಿಡಂಬನೆಗೆ ಗುರಿ ಮಾಡಿಕೊಳ್ಳುತ್ತಾರೆ. ಇಲ್ಲಿ ನಗು ಮತ್ತು ಹಸಿವೆಗಳನ್ನು ಮುಖಾಮುಖಿಯಾಗಿಸಿದ್ದಾರೆ. ಭಾರವಾದ ಬದುಕನ್ನು ಹಗುರಗೊಳಿಸುವ, ಸಾಂಪ್ರದಾಯಿಕ ಬದುಕನ್ನು ಸರಳಗೊಳಿಸುವ, ಗೊರೂರರ ಮನೋಧರ್ಮವನ್ನು ಅವರ ಅನುವಾದ ಕಥೆಗಳಲ್ಲೂ ಕಾಣಬಹುದು. ಹಲವಾರು ಇಂಗ್ಲಿಶ್ ಮತ್ತು ತಮಿಳು ಮೂಲದ ಅನುವಾದ ಕಥೆಗಳು ಸಹಜ ಲವಲವಿಕೆಯಿಂದ ಚಿತ್ರಿತವಾಗಿದೆ. ವಸ್ತುವಿನ ಆಯ್ಕೆ ನಿರೂಪಣೆಯಲ್ಲಿ ವಿನೋದ ಇರುವಂತೆ ಪುರಾಣವೂ ಇದೆ, ಅದು ಕಥಾವಸ್ತುವಿನಲ್ಲಿ ಆತ್ಮೀಯ ಮನೋಭಾವವಾಗಿ ಕಂಡುಬರುತ್ತದೆ. ಗೊರೂರರ ಕಥೆಗಳು ಕಥಾತಂತ್ರದಿಂದ ಹೊರಗೆ ಉಳಿದು, ಸಮಸ್ಯೆಗಳು ಮುಖಾಮುಖಿಯಾಗದೆ ವೈರುಧ್ಯಗಳು ಗಂಭೀರತೆ ಪಡೆಯುವುದರಲ್ಲಿ ಸೋಲುತ್ತವೆ. ಹಾಸ್ಯಕ್ಕೆ ವಸ್ತುಗಳಾಗುತ್ತವೆ. ಹಳ್ಳಿಗರ ಬಗ್ಗೆ, ಶ್ರಮಜೀವಿಗಳ ಕುರಿತು, ಗೊರೂರರ ಸಾಹಿತ್ಯದಲ್ಲಿ ಗಮನಿಸಬೇಕಾದ ಅಂಶಗಳಿವೆ. ಗ್ರಾಮಜೀವನದ ಬಗ್ಗೆ ಅವರಿಗಿರುವ ಗೌರವ ಇದಕ್ಕೆ ಕಾರಣ. ಅವರ ಕಥೆಗಳು ಹಳ್ಳಿಗರ ಬದುಕಿನ ಚಿತ್ರಗಳೇ.

ಒಂದು ಘಟನೆಯನ್ನು ಸಾಂಸ್ಕೃತಿಕವಾಗಿ ದಾಖಲಿಸುವ ಗೊರೂರರ ಪರಿ ಅನನ್ಯವಾದುದು. ಅವರಿಗೆ ಗೋಚರವಾಗುವ ಹಳ್ಳಿಗರ ಬದುಕಿನ ಎಲ್ಲಾ ವಿವರಗಳು ವಾಸ್ತವಿಕ ಬದುಕಿನ ನೆಲೆಗಳಾಗಿವೆ. ವರ್ಣಾಶ್ರಮ ಪದ್ಧತಿಯಲ್ಲಿ ಜನರ ನಿಷ್ಠೆ, ಜಾತಿಭೇದಗಳನ್ನು ಮೆಟ್ಟಿ ನಿಂತ ಅವರ ಮಾನವೀಯ ದೃಷ್ಟಿ, ಜೀವನದ ಸರಳತೆ, ಶ್ರದ್ಧೆಗಳು ಅರವತ್ತು ವರ್ಷಗಳ ಹಿಂದಿನ ಜನಜೀವನ ಮತ್ತು ಸಂಸ್ಕೃತಿಯನ್ನು ನಮ್ಮ ಕಣ್ಮುಂದೆ ನಿಲ್ಲಿಸುತ್ತವೆ. ಗೊರೂರರ ಹಳ್ಳಿಯ ಬದುಕಿನಲ್ಲಿ ಘರ್ಷಣೆಗಳೆಲ್ಲ ಅವರ ದೃಷ್ಟಿಗೆ ಎಲ್ಲವೂ ರಮ್ಯವಾಗಿ ಕಾಣುತ್ತವೆ. ಅವರು ಕೆಟ್ಟದ್ದನ್ನು ಕಾಣಲಿಲ್ಲ ಅಂತ ಅಲ್ಲ. ಆದರೆ ಅವರು ಕೆಟ್ಟದ್ದನ್ನು ಹುಡುಕುತ್ತ ಹೋಗಲಿಲ್ಲ ಎನ್ನಬಹುದು. ಕೆಟ್ಟದ್ದನ್ನು ನೇರವಾಗಿ ಚಿತ್ರಿಸುವುದಕ್ಕಿಂತ ನವಿರಾಗಿ ಗ್ರಾಮ ಜೀವನವನ್ನು ಓದುಗರ ಅರಿವಿಗೆ, ಚಿಂತನೆಗೆ, ಪರಿವರ್ತನೆಗೆ ತರುವುದು ಗೊರೂರರ ವೈಶಿಷ್ಟ್ಯ. ಪ್ರಾದೇಶಿಕ ಪರಿಸರವನ್ನು ಅದರ ಎಲ್ಲಾ ಸಾಧ್ಯತೆಗಳೊಂದಿಗೆ ಪುನಃ ಸೃಷ್ಟಿಸುತ್ತ, ಗಾಂಧೀ ಯುಗದ ಆದರ್ಶವನ್ನು ತಮ್ಮ ವೈಯಕ್ತಿಕ ನೆಲೆಯಲ್ಲಿ, ಮನುಷ್ಯನ ಸ್ವಭಾವದ ವಾಸ್ತವಿಕ ಬದುಕಿನ ದೃಷ್ಯವಾಗಿಸುವುದರಲ್ಲಿ ಗೊರೂರರು ಸಫಲರಾಗಿದ್ದಾರೆ. ೯೫ ವರ್ಷಗಳ ತುಂಬು ಜೀವನ ನಡೆಸಿ ಕನ್ನಡ ಭಾಷಾ ಸಂದರ್ಭದ ಗ್ರಾಮೀಣ ಸಂಸ್ಕೃತಿಯನ್ನು ದಾಖಲಿಸಿ ಅಮರರಾಗಿದ್ದಾರೆ. ಆರು ದಶಕಗಳ ಹಿಂದಿನ ಗ್ರಾಮೀಣರ, ಜನಪದರ ಜೀವನದ ಸಾಮಾಜಿಕ ಸಂಘರ್ಷಗಳನ್ನು ಪರಿಣಾಮಕಾರಿಯಾಗಿ ದಾಖಲಿಸಿದ್ದಾರೆ.

● ▼

ಜಯದೇವಪ್ಪ ಜೈನಕೇರಿ

ನಂ. ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ - ೫೭೭ ೨೦೧

' ಸಂಕಲನ - ೧ ' : ಅನಿಸಿಕೆ, ಅಭಿಪ್ರಾಯ, ಪ್ರತಿಕ್ರಿಯೆ, ವಿಮರ್ಶೆ ಇತ್ಯಾದಿ

▼ ಪ್ರಿಯ ಸಿ. ಪ. ಅವರೆ. ಕನ್ನಡದ ಬಹಳಷ್ಟು ಸಾಹಿತ್ಯಿಕ ಪತ್ರಿಕೆಗಳು ' ಅಕಾಲ ಸಾವಿಗೆ ' ತುತ್ತಾಗಿವೆ. ಪ್ರಾಯಶಃ ದುರ್ಬಲ ಸಂಪಾದಕತ್ವ. ಮುಂದಾಲೋಚನೆ ಕೊರತೆ. ಮೌಲಿಕತೆಯ ಹ್ರಾಸ. ಓದುಗ ಸಹೃದಯರಿಗೆ ಮಾಡಿದ ವಂಚನೆ –ಇತ್ಯಾದಿ ಕಾರಣವಿರಬೇಕು ? ನೀವು ಇದನ್ನೆಲ್ಲ ಮೀರಿ ನಿಲ್ಲಬಲ್ಲಿರಿ. ಅಂಥ ತಾಕತ್ತು ನಿಮ್ಮಲ್ಲಿದೆ.

ಚಂದ್ರಕಾಂತ ಪೋಕಳೆ, ಬೇಡಕಿಹಾಳ

▼ ಸಂಕಲನದ ಮೊದಲ ಸಂಚಿಕೆ ಖುಷಿಯಾಯಿತು. ಶೀರ್ಷಿಕೆ. ಪುಸ್ತಕದ ಗಾತ್ರ. ವಿನ್ಯಾಸ. ಮುದ್ರಣ. ಬಳಸಿದ ಕಾಗದ ತುಂಬಾ ಚೆನ್ನಾಗಿದೆ. ನಿಮ್ಮ ಸಂಪಾದಕೀಯದ ನಿಲುವು ಪ್ರಶಂಸಾರ್ಹ. ವಿಧೇಯತೆಯೊಂದಿಗೆ ಮಿತಿಯ ಅರಿವು ಇದ್ದಂತಿದೆ. ಲೇಖನಗಳ. ಕವನಗಳ ಆಯ್ಕೆಯಲ್ಲಿ ಸಮತೋಲನವಿದೆ. ಇನ್ನೊಂದೆರಡು ಕಥೆ. ಕವನಕ್ಕೆ ಅವಕಾಶ ಬೇಕಾಗಿತ್ತು. ಪರಿಸರ - ಜನಪದ ಸಂಸ್ಕೃತಿಗೆ ಯಾರೂ ಸಿಗಲಿಲ್ಲವೆ ? ವಾರ್ಷಿಕ ಚಂದಾ ಈಗಿನ ದಿನಗಳಲ್ಲಿ ದುಬಾರಿಯೇನಲ್ಲ. ಆದರೂ ಇನ್ನೂ ಕೆಲವು ಪುಟಗಳು ಇರಬಹುದಿತ್ತಲ್ಲವೆ ? ಸಮಯಕ್ಕೆ ಸರಿಯಾಗಿ ಸಂಚಿಕೆ ಬರುವುದು ಮುಖ್ಯ. ಸಂಪಾದಕೀಯ ನಿಲುವುಗಳಿಗೆ ಬದ್ಧತೆ ಮತ್ತೂ ಮುಖ್ಯ. ಲೇಖಕರಿಗೆ ಸಂಭಾವನೆ ಕೊಡುವ ಸಂಪ್ರದಾಯದೊಂದಿಗೆ ನಾಲ್ಕು ಸಾಲಿನ ಪತ್ರ ಬರೆಯುವ ಪರಂಪರೆಯೂ ತಪ್ಪದಿರಲಿ. ಪುಸ್ತಕ ಸ್ವೀಕಾರದಷ್ಟೇ ಪುಸ್ತಕ ವಿಮರ್ಶೆಯೂ ಇರಲಿ. ಆಜೀವ ಚಂದಾದ ಹಂಬಲವಿರದಿದ್ದರೂ ಮೂರೇ ವರ್ಷದ ಮಿತಿ ಬೇಡ. ಕನ್ನಡಿಗರು ಔದಾರ್ಯವಂತರು ಎಂಬುದು ನೆನಪಿರಲಿ. ನಾನು. ನಾವು ಮತ್ತು ನಮ್ಮಂಥವರು ಸದಾ ಇದ್ದೇವೆ. ಪತ್ರಿಕೆ ಎಲ್ಲರೂ ಒಪ್ಪಿಯೇ ತೀರಬೇಕೆಂಬ ಹಟವೂ ಬೇಡ. ಇಂಥ ' ಸಂಕಲನ ' ಗಳ ಕೊರತೆ ಕನ್ನಡ ಭಾಷೆಗೆ ಇತ್ತು. ಅದಕ್ಕೆ ನಿಮ್ಮಂಥವರ ಅನುಭವದ ಧೈರ್ಯ ಬೇಕಾಗಿತ್ತು.

ಜಿ. ಟಿ. ಶ್ರೀಧರಶರ್ಮ, ಅಜ್ಜಂಪುರ

▼ ' ಸಂಕಲನ ' ದ ವಿನ್ಯಾಸ. ಮುದ್ರಣ ಒಪ್ಪವಾಗಿವೆ. ಬಳಸಿರುವ ಕಾಗದ ಸುಮಾರಿಲ್ಲ. ಅವಸರದ ಕುತೂಹಲಕ್ಕೆ ನಿಮ್ಮ ' ಮಾತು '. ' ರಾಗಾಂತರ '. ' ಭಾಷ್ಪಿಗೆ '. ' ತ್ರಿಶೂಲ '. ' ಮಗು ಮಲಗಿದೆ ಎದೆಯ ಮೇಲೆ ' ಸದ್ಯಕ್ಕೆ ಓದಿದೆ. ಕತೆಯ ವಸ್ತುವಿನ ಚೌಕಟ್ಟು, ಅನಿರೀಕ್ಷಿತ ತಿರುವು ಸಶಕ್ತ ಗದ್ಯ-ಗೀತಿಕಾ ಶೈಲಿ ಮುದ ನೀಡಿದುವು. ' ಮನೆಯು ಆಫೀಸಿನೊಳಗೊ... ' ವಾರೆವಾ....

ಮುದೇನೂರ ಸಂಗಣ್ಣ, ಚಿಗಟೇರಿ

▼ ಸಿ. ಪ. ರ ಮಕ್ಕಳ ಕತೆ ದೊಡ್ಡ ಮಕ್ಕಳನ್ನೂ ತಟ್ಟುವಂತಿದೆ.... ಪ್ರಸನ್ನರ ಕವಿತಾ ವಿಮರ್ಶೆ ಅಡ್ಡಿಲ್ಲ. ಕವರ್ ಪೇಜ್ ತುಂಬಾನೇ dull. ವಿನ್ಯಾಸ ಇನ್ನಷ್ಟು ಚೆನ್ನಾಗಿ ಬರಲಿ. ಸಂಕಲನದ ನಿಮ್ಮ ಯೋಜನೆ ಮೂರು ವರ್ಷಗಳಲ್ಲಿ ಬೇರು ಬಿಳಲು ಬಿಟ್ಟು ಇನ್ನಷ್ಟು ಗಟ್ಟಿಗೊಳ್ಳಲಿ.

ಸುಮಂಗಲಾ ಬಾದರದಿನ್ನಿ, ವಿಜಾಪುರ

▼ ಸಂಕಲನ - ೧ ಸೃಜನ. ವಿಚಾರ. ವಿಮರ್ಶೆಗಳನ್ನೊಳಗೊಂಡು ವೈವಿಧ್ಯಮಯವಾಗಿ ಹೊರಬಂದಿದೆ. ಅಭಿನಂದನೆಗಳು.

ಮಲ್ಲಿಕಾರ್ಜುನ ಹಿರೇಮಠ, ಹುನಗುಂದ

▼ ಸಂಕಲನ - ೧ ಸತ್ವಪೂರ್ಣವಾಗಿದೆ. ಜನವರಿ ೧೪ ರಂದು ಗದಗಿನಲ್ಲಿ ನಡೆದ ಈ ಪತ್ರಿಕಾ ಬಿಡುಗಡೆ ಸಮಾರಂಭದಲ್ಲಿ ನೀವು ತಿಳಿಸಿದಂತೆ ವಿರಳ ಕೃತಿಗಳ ಪರಿಚಯ ಮತ್ತು ವಿಮರ್ಶೆ ತಪ್ಪದೇ ಪ್ರಕಟವಾಗಲಿ.

ಎಚ್. ಎಸ್. ಪಾಟೀಲ, ಕೊಪ್ಪಳ

▼ ಸಂಕಲನದಲ್ಲಿ ಪ್ರಕಟಿಸಲು ಮಕ್ಕಳ ನಾಟಕ ಕಳಿಸಿದ್ದೆ. ನಾಟಕ ಪ್ರಕಟವಾದೊಡನೆ ರೂ. ೧೦೦/- ಕಳಿಸುವುದಾಗಿ ಬರೆದಿದ್ದೀರಿ. ಆಶ್ಚರ್ಯ. ಹೇಗದು ? ಏನೇ ಇರಲಿ ಇದಂತೂ ವೈಶಿಷ್ಟ್ಯಪೂರ್ಣ ಕ್ರಿಯೆ.

ಆರ್. ವಿ. ಭಂಡಾರಿ, ಅರೆಅಂಗಡಿ

'ಸಂಕಲನ' ಸ್ವೀಕರಿಸಿದ ಪುಸ್ತಕಗಳು

೧. **ರವೀಂದ್ರನಾಥ ಟಾಗೋರ್‌ರ ಎರಡು ನಾಟಕಗಳು** : ಅನು. ಶ್ರೀನಿವಾಸ ವಿ. ಸುತ್ರಾವೆ. ಸಾಹಿತ್ಯ ಅಕಾಡೆಮಿ, ರವೀಂದ್ರ ಭವನ, ಫಿರೋಜ್ ಶಹಾ ರಸ್ತೆ, ನವದೆಹಲಿ - ೧೧೦ ೦೦೧, ಪ್ರ. ಮು. ೨೦೦೦, ಡೆಮಿ ೧/೮, ಪುಟ ೮೪, ರೂ. ೫೦/-

೨. **ಅಪೂರ್ವ ವಿನ್ಯಾಸ** : ಸಾಹಿತ್ಯ ವಿಮರ್ಶೆ, ರವಿ ಉಪಾಧ್ಯ, ಸ್ನೇಹಾ ಪ್ರಕಾಶನ, ೫೭೧/೧, ಮಠ ಗಲ್ಲಿ, ಬೆಳಗಾವಿ - ೫೯೦ ೦೦೨, ಪ್ರ. ಮು. ೨೦೦೦, ಡೆಮಿ ೧/೮, ಪುಟ ೩೨೦, ರೂ. ೨೨೫/-

೩. **ಅಲ್ಮನೆಯಿಂದ ಆ್ಯನ್‌ಆರ್ಬರ್‌ಗೆ** : ಪ್ರವಾಸ ದಿನಚರಿ, ಪಿ. ಎಂ. ಹೆಗಡೆ, ಅನನ್ಯ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೪, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೦೮, ರೂ. ೬೦/-

೪. **ಕದವಿಲ್ಲದ ಊರಲ್ಲಿ** : ಕವನ, ಜಿ. ಕೆ. ರವೀಂದ್ರಕುಮಾರ್, ಲೋಹಿಯಾ ಪ್ರಕಾಶನ, 'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧೀನಗರ, ಬಳ್ಳಾರಿ - ೩ : ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೩೦, ರೂ. ೭೫/-

೫. **ಕೆಂಡಸಂಪಿಗೆ** : ಕವನ, ಬಸವರಾಜ ಸಬರದ, ಪಲ್ಲವಿ ಪ್ರಕಾಶನ, ಸರಸ್ವತೀಪುರ, ಎ. ವಿ. ಅಂಚೆ, ಗುಲಬರ್ಗಾ - ೫೮೫ ೧೦೬, ಪ್ರ. ಮು. ೨೦೦೧, ಡೆಮಿ ೧/೮, ಪುಟ ೮೦, ರೂ. ೪೦/-

೬. **ಹಕ್ಕಿಗೊಂದಿಷ್ಟು ಜಾಗ ಬಿಡು** : ಕವನ, ಮೀನಾ ಸದಾಶಿವ, ಸಂಕ್ರಮಣ ಪ್ರಕಾಶನ, ೨೮೧, ೧೭/ಎ ಕ್ರಾಸ್, ೬ ನೇ ಮೇನ್, ಬನಶಂಕರಿ, ೨ ನೇ ಹಂತ, ಬೆಂಗಳೂರು - ೭೦, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೦೪, ರೂ. ೫೦/-

೭. **ನೂರು ಹನಿ ಒಂದು ಹೂ** : ಹನಿಗವನ, ಮೀನಾ ಸದಾಶಿವ, ಸಂಕ್ರಮಣ ಪ್ರಕಾಶನ, ಬೆಂಗಳೂರು - ೭೦, ಪ್ರ. ಮು. ೨೦೦೧, ಡೆಮಿ ೧/೮, ಪುಟ ೬೦, ರೂ. ೩೦/-

೮. **ನೆನಪಿನ ಹೂಗೊನೆ** : ನೆನಪು ಪ್ರಸಂಗಗಳು, ಎಂ. ಸಿ. ಅಂಟಿನ, ಎಸ್. ವಿ. ಬಾಗಿ, ಎಜ್ಯುಕೇಶನ್ ಟ್ರಸ್ಟ್, ಬೆಳಗಾವಿ, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೩೬, ರೂ. ೭೫/-

೯. **ದಾಂಪತ್ಯ ಸಂಪದ** : ಸಂ. ಶರಣಬಸಪ್ಪ ಕೋಲ್ಕಾರ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೪೨, ರೂ. ೩೫/-

೧೦. **ಚಪ್ಪಲಿ ಮತ್ತು ನಾನು** : ಕವನ, ಮೂಡ್ನಾಕೂಡು ಚಿನ್ನಸ್ವಾಮಿ, ಶುಭದ ಪ್ರಕಾಶನ, ಜರಗನಹಳ್ಳಿ, ಜೆ. ಪಿ. ನಗರ, ಬೆಂಗಳೂರು - ೭೮, ಪ್ರ. ಮು. ೨೦೦೧, ಡೆಮಿ ೧/೮, ಪುಟ ೬೭, ರೂ. ೪೦/-

೧೧. **ಯಾನ ಮತ್ತು ಇತರ ನಾಟಕಗಳು** : ಆರ್. ವಿ. ಭಂಡಾರಿ, ಬಂಡಾಯ ಪ್ರಕಾಶನ, ಅರೆಅಂಗಡಿ, ಹೊನ್ನಾವರ (ಉ.ಕ.), ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೬೮, ರೂ. ೮೦/-

೧೨. **ಕರಿವೇಮಲ** : ನೀಳ್ಗತೆಗಳು, ಕುಂ. ವೀರಭದ್ರಪ್ಪ, ಮಾ-ಪ್ರಿಂಟ್ ಪಬ್ಲಿಷರ್ಸ್, ೩, ೫ ನೇ ಮೇನ್, ಸಂಪಿಗೆ ಬಡಾವಣೆ, ಪಟ್ಟೆಗಾರ ಪಾಳ್ಯ, ಬೆಂಗಳೂರು - ೭೯, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೨೭, ರೂ. ೬೦/-

೧೩. **ನಿಮ್ಮಿ** : ಅಂಕಣ ಬರಹ, ಪ್ರತಿಭಾ ನಂದಕುಮಾರ್, ನೆಲಮನೆ ಪ್ರಕಾಶನ, ರಂಗನಾಥ ನಗರ, ಶ್ರೀರಂಗಪಟ್ಟಣ, ಜಿ. ಮಂಡ್ಯ, ಪ್ರ. ಮು. ೨೦೦೧, ಡೆಮಿ ೧/೮, ಪುಟ ೨೦೦, ರೂ. ೯೫/-

೧೪. **ಮಿರ್ಚ್ ಮಸಾಲ** : ಪ್ರತಿಭಾ ನಂದಕುಮಾರ್, ಉಷ ಎಂಟರ್‌ಪ್ರೈಸಿಸ್, ೬೨, ೫ ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೦೩, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೮೪, ರೂ. ೮೫/-

೧೫. **ಕಾರಂತರ ಕಾದಂಬರಿಗಳು** : ಮಾಧವ ಕುಲಕರ್ಣಿ, ತನುಮನ ಪ್ರಕಾಶನ, ೪೨, ಜಿ ಬ್ಲಾಕ್, ೩ ನೇ ತಿರುವು, ರಾಮಕೃಷ್ಣ ನಗರ, ಮೈಸೂರು - ೫೭೦ ೦೨೩, ಪ್ರ. ಮು. ೨೦೦೧, ಕ್ರಾವುನ್ ೧/೮, ಪುಟ ೧೨೦, ರೂ. ೪೫/-

೧೬. **ಹೆಣ್ಣು ಹೆತ್ತ ಹೆಮ್ಮೆ ಎನಗಿರಲಿ** : ಕವನ, ಶಾಲಿನಿ ಎಂ. ಚಿನಿವಾರ್, ಪೂಜಾರ ಸಿದ್ದಪ್ಪ ಸ್ಮಾರಕ ಗ್ರಂಥಮಾಲೆ, ಕೂನಿಕೆರೆ, ತಾ. ಹಿರಿಯೂರು, ಜಿ. ಚಿತ್ರದುರ್ಗ, ಪ್ರ. ಮು. ೨೦೦೧, ಕ್ರಾವುನ್ ೧/೮, ಪುಟ ೬೪, ರೂ. ೩೫/-

೧೭. **A Dialogue with Divinity** : K. Muddanna, Prabhu Prakashana, 656, 100 ft. Road, 1st stage, Indira Nagar, Bangalore - 560 038, Edition 2001, Demy. 1/8, pp. 220, Rs. 150/-

೧೮. **ರೆಕ್ಕೆ-ಗೂಡು-ಆಕಾಶ** : ಕವನ, ಸಿ. ವಿ. ಶೇಷಾದ್ರಿ ಹೊಳವನಹಳ್ಳಿ, ಕಮಲ ಪ್ರಕಾಶನ, ರಾಮಮಂದಿರ, ಹೊಳವನಹಳ್ಳಿ - ೫೭೨ ೧೨೧, ಪ್ರ. ಮು. ೨೦೦೧, ಕ್ರಾವುನ್ ೧/೮, ಪುಟ ೧೫೨, ರೂ. ೪೦/-

೧೯. **ಕಾಡತಾವೋ ನೆನಪು** : ಕವನ, ಎಸ್. ಎಸ್. ಬಿರಾದಾರ, ಕವಿಚಕ್ರವರ್ತಿ ರನ್ನ ಪ್ರಕಾಶನ, ಮಹಾಲಿಂಗಪುರ, ಪ್ರ. ಮು. ೨೦೦೨, ಕ್ರಾವುನ್ ೧/೮, ಪುಟ ೭೨, ರೂ. ೩೦/-

ಸಂಕಲನ : ಸಂಪುಟ ೧, ಸಂಚಿಕೆ ೨ : ೧೪ ಮಾರ್ಚ್ ೨೦೦೨
ಸಂಪಾದಕ : ಸಿದ್ಧಲಿಂಗ ಪಟ್ಟಣಶೆಟ್ಟಿ

•

ವಸುಮತಿ ಉಡುಪ

ದೊಡ್ಡರಂಗೇಗೌಡ

ಮ. ಸು. ಕೃಷ್ಣಮೂರ್ತಿ

ಮೂಡ್ನಾಕೂಡು ಚಿನ್ನಸ್ವಾಮಿ

ಭಾರತಿ ಮೋಹನ ಕೋಟಿ

ಆರ್. ವಿ. ಭಂಡಾರಿ

ತುರುವೀಹಾಳ ಚಂದ್ರು

ಸಿ. ಎನ್. ರಾಮಚಂದ್ರನ್

ಪದ್ಮಾ ಶಿವರುದ್ರಪ್ಪ

ಬಸವರಾಜ ಜಗಜಂಪಿ

ಶ್ಯಾಮಸುಂದರ ಬಿದರಕುಂದಿ

ಶಾಂತಾ ಇಮ್ರಾಪುರ

ಜಗದೀಶ ಮಂಗಳೂರಮಠ

ಮಾಧವ ಕುಲಕರ್ಣಿ

ಜಯದೇವಪ್ಪ ಜೈನಕೇರಿ

•

ಸಂಕಲನ ಪ್ರಕಾಶನ
ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧